ಗುರುವಾರ, ಆಗಸ್ಟ್ 22, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 234 | ಪುಟ 14
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಗೋಲ್ಡನ್, ಲಿಥಿಯಂ ಟ್ರಯಾಂಗಲ್ ಬಗ್ಗೆ ಗೊತ್ತೆ?



ಆಳ-ಅಗಲ
550 ಎಕರೆ ಮಂಜೂರು ಮಾಡಿದ್ದ ಎಚ್‌ಡಿಕೆ

ಇ-ಕಾಮರ್ಸ್ ಕಂಪನಿಗೆ ಚಾಟಿ 10
ಪೋಲೆಂಡ್, ಉಕ್ರೇನ್‌ಗೆ ಪ್ರಧಾನಿ ಮೋದಿ ಭೇಟಿ 10
ರಿಯಾಕ್ಟರ್ ಸ್ಫೋಟ: 17 ಸಾವು 9
ಭಾರತ ಬಂದ್: ಬಹುತೇಕ ಶಾಂತ 9

ಸೆನ್ಸೆಕ್ಸ್	ನಿಫ್ಟಿ	₹/$
80,905	24,770	83.95



ದಸರೆಗೆ ಮುನ್ನುಡಿ...

ನಾಡಹಬ್ಬ ದಸರೆಯಲ್ಲಿ ಪಾಲ್ಗೊಳ್ಳುವ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ 9 ಆನೆಗಳ 'ಗಜಪಯಣ' ಮೈಸೂರಿನ ನಾಗರಹೊಳೆಯ ವೀರನಹೊಸಹಳ್ಳಿಯಿಂದ ಬುಧವಾರ ಆರಂಭಗೊಂಡಿತು – ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಸಿ.ಎಂ–ಎಚ್‌ಡಿಕೆ ನುಡಿ–ಕಿಡಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಮುಡಾ ಪ್ರಕರಣದಲ್ಲಿ ತನಿಖೆ ನಡೆಸಲು ರಾಜ್ಯಪಾಲರು ಅನುಮತಿ ಕೊಟ್ಟ ಬಳಿಕ ರಾಜಕೀಯ ನಾಯಕರ ನಡುವೆ ವಾಕ್ಸಮರ ತೀವ್ರಗೊಂಡಿದೆ. ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರ ವಿರುದ್ಧವೂ ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್ ಪ್ರಕರಣದಲ್ಲಿ ದೋಷಾರೋಪ ಪಟ್ಟಿ ಸಲ್ಲಿಕೆಗೆ ಅನುಮತಿ ನೀಡಬೇಕು ಎಂದು ಕಾಂಗ್ರೆಸ್ ಒತ್ತಡ ಹೇರುತ್ತಿದೆ. ಸಿದ್ದರಾಮಯ್ಯ ಮತ್ತು ಕುಮಾರಸ್ವಾಮಿ ನಡುವೆ ಮಾತಿನ ಸಮರ ಬುಧವಾರ ತಾರಕಕ್ಕೆ ಏರಿದೆ

'ಬಂಧಿಸಲು 100 ಸಿದ್ದರಾಮಯ್ಯ ಬರಬೇಕು'

ಬೆಂಗಳೂರು: 'ನಾನು ಕೇಂದ್ರ ಸಚಿವನಾಗಿದ್ದೇನೆ ಎಂದು ಸಿದ್ದರಾಮಯ್ಯ ಮತ್ತು ಕಾಂಗ್ರೆಸ್‌ಗೆ ಹೊಟ್ಟೆ ಉರಿ. ಹೀಗಾಗಿಯೇ ನನ್ನನ್ನು ಜೈಲಿಗೆ ಕಳುಹಿಸಲು ತುದಿಗಾಲಲ್ಲಿ ನಿಂತಿದ್ದಾರೆ. ನನ್ನನ್ನು ಬಂಧಿಸಲು ನೂರು ಮಂದಿ ಸಿದ್ದರಾಮಯ್ಯ ಬರಬೇಕಾಗುತ್ತದೆ' ಎಂದು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್‌.ಡಿ. ಕುಮಾರಸ್ವಾಮಿ ಸವಾಲಿನ ರೂಪದಲ್ಲಿ ಹೇಳಿದರು.

ಗಣಿಗಾರಿಕೆ ನಡೆಸಲು ಸಾಯಿ ವೆಂಕಟೇಶ್ವರ ಲಿಮಿಟೆಡ್‌ಗೆ ಅನುಮತಿ ನೀಡಿದ ಪ್ರಕರಣದಲ್ಲಿ ಅಕ್ರಮವಾಗಿದೆ ಎಂದು ಆರೋಪಿಸಿ ತನಿಖೆ ನಡೆಸಿದ್ದ ಲೋಕಾಯುಕ್ತದ ಎಸ್‌ಐಟಿಯು, ಕುಮಾರಸ್ವಾಮಿ ವಿರುದ್ಧ ದೋಷಾರೋಪ ಪಟ್ಟಿ ಸಿದ್ಧಪಡಿಸಲು ಅನುಮತಿ ನೀಡುವಂತೆ ರಾಜ್ಯಪಾಲ ಗೆಹಲೋತ್ ಅವರಿಗೆ ಮತ್ತೊಮ್ಮೆ ಪ್ರಸ್ತಾವನೆ ಸಲ್ಲಿಸಿದೆ.

ಈ ಕುರಿತು ಜೆಡಿಎಸ್ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿದ ಕುಮಾರಸ್ವಾಮಿ, ಸಿದ್ದರಾಮಯ್ಯ ವಿರುದ್ಧ ಹರಿಹಾಯ್ದರು.



- ಜೈಲಿಗೆ ಕಳುಹಿಸುವುದಕ್ಕಾಗಿಯೇ 14 ವರ್ಷದಷ್ಟು ಹಳೆಯ ಪ್ರಕರಣ ಕೆದಕಿಕೊಂಡು ಕೂತಿದ್ದಾರೆ
- ನನಗೆ ಭಯ ಶುರುವಾಗಿದೆಯಾ? ನನ್ನ ನೋಡಿದರೆ ನಿಮಗೆ ಹಾಗೆ ಅನಿಸುತ್ತಾ? ಸಿದ್ದರಾಮಯ್ಯ ಕಳೆದ ವಾರದಿಂದ ಹೇಗೆ ನಡೆ-ದುಕೊಂಡಿದ್ದಾರೆ ಎಂಬುದನ್ನು ನೋಡಿದ್ದೀರಲ್ಲಾ? ನನ್ನನ್ನು ಹೇಗೆ ಬಂಧಿಸುತ್ತಾರೆ?
- ನನ್ನ ವಿರುದ್ಧ ಮತ್ತೊಂದು ಪ್ರಕರಣ ತೆರೆದು, ಲೋಕಾಯುಕ್ತ ಕಚೇರಿಗೆ ಕರೆಸುತ್ತೇನೆ ಎಂದು ಬಸವರಾಜ ಮುದ್ದಗಮ್ ಎಂಬ ಡಿವೈಎಸ್‌ಪಿ ಸಿದ್ದರಾ-ಮಯ್ಯಗೆ ಮಾತು ಕೊಟ್ಟಿದ್ದಾನಂತೆ. ಈ ಬಗ್ಗೆ ಮುಖ್ಯಮಂತ್ರಿ ಮನೆಯಲ್ಲೇ ಚರ್ಚೆಯಾಗಿದೆಯಂತೆ. ಅಲ್ಲಿ ಇರುವವರೇ ಈ ಬಗ್ಗೆ ನನಗೆ ಮಾಹಿತಿ ಕೊಟ್ಟಿದ್ದಾರೆ. ನನ್ನನ್ನು ಅದೆಲ್ಲಿಗೆ ಕರೆಸುತ್ತಾರೋ ಕರೆಸಲಿ ನೋಡೋಣ

'ಎಚ್‌ಡಿಕೆ ಬಂಧನಕ್ಕೆ ಕಾನ್‌ಸ್ಟೆಬಲ್ ಸಾಕು'

ಕೊಪ್ಪಳ/ವಿಜಯಪುರ: ಕುಮಾರಸ್ವಾಮಿಯನ್ನು ಬಂಧಿಸಲು ನೂರು ಸಿದ್ದರಾಮಯ್ಯ ಏಕೆ ಬೇಕು? ಒಬ್ಬ ಕಾನ್‌ಸ್ಟೆಬಲ್ ಸಾಕು. ಕುಮಾರಸ್ವಾಮಿ ಅವರನ್ನು ಬಂಧಿಸುವುದು ಪೊಲೀಸರೇ ಹೊರತು ನಾನಲ್ಲ. ರಾಜ್ಯಪಾಲರು ದೋಷಾರೋಪ ಪಟ್ಟಿ ಸಲ್ಲಿಕೆಗೆ ಎಲ್ಲಿ ಅನುಮತಿ ಕೊಡುವರೋ ಎಂಬ ಭೀತಿಯಲ್ಲಿ ಕುಮಾರಸ್ವಾಮಿ ತರಾತುರಿಯಲ್ಲಿ ಪತ್ರಿಕಾಗೋಷ್ಠಿ ಮಾಡಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಜಯಪುರದಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡುತ್ತಾ ಬುಧವಾರ ಹೇಳಿದ್ದಾರೆ.

- ಕುಮಾರಸ್ವಾಮಿ ಅವರನ್ನು ಬಂಧಿಸುವ ಅಗತ್ಯಬಿದ್ದರೆ ಮುಲಾಜಿಲ್ಲದೆ ಬಂಧಿಸುತ್ತೇವೆ. ಆದರೆ, ಈಗ ಇನ್ನೂ ಅಂಥ ಸನ್ನಿವೇಶ ಬಂದಿಲ್ಲ. ಆದರೂ ಕುಮಾರಸ್ವಾಮಿ ಈಗಲೇ ಹೆದರಿದ್ದಾರೆ
- ಗಣಿ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯಪಾಲರು ತನಿಖೆಗೆ ಅನುಮತಿ ನೀಡಬಹುದು ಎಂಬ ಭಯ ಅವರನ್ನು ಕಾಡುತ್ತಿದೆ. ಅವರ ವಿರುದ್ಧ ಲೋಕಾಯುಕ್ತ, ಎಸ್‌ಐಟಿಯವರು ತನಿಖಾ ವರದಿ ನೀಡಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ಕೋರಿದರೂ ರಾಜ್ಯಪಾಲರು ಯಾವುದೇ ಕ್ರಮ ಕೈಗೊಂಡಿಲ್ಲ. ಹೀಗಾಗಿ ಎಸ್‌ಐಟಿ ಮತ್ತೊಮ್ಮೆ ಅರ್ಜಿ ಸಲ್ಲಿಸಿದೆ



- ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಬಿಡುಗಡೆ ಮಾಡುವುದಾಗಿ ಕುಮಾರಸ್ವಾಮಿ ಹೇಳುತ್ತಿದ್ದಾರೆ. ಯಾವಾಗಲೂ ಅವರದ್ದು ಹಿಟ್ ಅಂಡ್ ರನ್ ರೀತಿಯ ಹೇಳಿಕೆ. ಪೆನ್ ಡ್ರೈವ್ ನನ್ನ ಜೇಬಿನಲ್ಲಿಯೇ ಇದೆ ಎಂದರೂ ಒಂದೇ ಒಂದು ಸಲ ತೆಗೆದು ತೋರಿಸಲಿಲ್ಲ
- ಕುಮಾರಸ್ವಾಮಿ ಪ್ರಕರಣದಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿರುವ ರಾಜ್ಯಪಾಲರು, ನನ್ನ ವಿರುದ್ಧ ಮಾತ್ರ ಯಾವುದೇ ತನಿಖಾ ವರದಿಯ ಆಧಾರವಿಲ್ಲದೆ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದಾರೆ

ಇನ್ನಷ್ಟು ಸುದ್ದಿಗಳು 8

ಲೈಂಗಿಕ ದೌರ್ಜನ್ಯ: ಶಿಕ್ಷಕನ ಬಂಧನ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಐವರು ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ಜಿಲ್ಲೆಯ ವಸತಿ ಶಾಲೆಯೊಂದರಲ್ಲಿ ನೃತ್ಯ ಶಿಕ್ಷಕನೊಬ್ಬನನ್ನು ಪೊಲೀಸರು ಬೆಂಗಳೂರು ಬಳಿಯ ನೆಲಮಂಗಲದಲ್ಲಿ ಬುಧವಾರ ಬಂಧಿಸಿದ್ದಾರೆ.

45 ವರ್ಷದ ಆರೋಪಿ ಅದೇ ಶಾಲೆಯಲ್ಲಿ ಕಳೆದ ಏಳು ತಿಂಗಳಿಂದ ಕೆಲಸ ಮಾಡುತ್ತಿದ್ದ. ವಿದ್ಯಾರ್ಥಿನಿಯರ ಹೇಳಿಕೆ ಆಧರಿಸಿ ಶಾಲೆಯ ಪ್ರಾಚಾರ್ಯರು ಪೊಲೀಸರಿಗೆ ದೂರು ನೀಡಿದ್ದರು. 'ವಸತಿ ಶಾಲೆಯ 21 ಜನ ವಿದ್ಯಾರ್ಥಿನಿಯರಲ್ಲಿ ಲೈಂಗಿಕ ದೌರ್ಜನ್ಯ ನಡೆದಿರುವ ಬಗ್ಗೆ ಐವರು ದೂರು ನೀಡಿದ್ದಾರೆ. ತಕ್ಷಣ ಎಫ್‌ಐಆರ್ ದಾಖಲಿಸಿಕೊಂಡು ಆರೋಪಿಯನ್ನು ಪೋಕ್ಸೊ ಕಾಯ್ದೆಯಡಿ ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದೇವೆ' ಎಂದು ಎಸ್‌ಪಿ ಜಿ.ಕೆ. ಮಿಥುನ್‌ಕುಮಾರ್ ತಿಳಿಸಿದರು.

'ಶಿಕ್ಷಕನ ಕೃತ್ಯಕ್ಕೆ ತಾವು ಸಾಕ್ಷಿ ಎಂದು ಉಳಿದ ವಿದ್ಯಾರ್ಥಿನಿಯರು ಹೇಳುತ್ತಿದ್ದಾರೆ. ಅವರನ್ನು ವೈದ್ಯಕೀಯ ಪರೀಕ್ಷೆ ಹಾಗೂ ಆಪ್ತ ಸಮಾಲೋಚನೆಗೆ ಒಳಪಡಿಸಿದ್ದೇವೆ. ಅವರಲ್ಲಿ ಯಾರಾದರೂ ಲೈಂಗಿಕ ದೌರ್ಜನ್ಯದ ಸಂತ್ರಸ್ತರು ಇದ್ದಾರೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲಾಗುವುದು' ಎಂದು ಎಸ್‌ಪಿ ಹೇಳಿದರು.

ಯಾವುದೇ ವಸತಿ ಶಾಲೆಯಲ್ಲಿ ದೌರ್ಜನ್ಯ, ಲೈಂಗಿಕ ಕಿರುಕುಳದಂತಹ ಕೃತ್ಯಗಳು ಕಂಡುಬಂದಲ್ಲಿ, ತಕ್ಷಣ 1098 ಸಂಖ್ಯೆಗೆ ಇಲ್ಲವೇ ಸಮೀಪದ ಪೊಲೀಸ್ ಠಾಣೆಗೆ ದೂರು ನೀಡುವಂತೆ ಅವರು ಮನವಿ ಮಾಡಿದ್ದಾರೆ.

ಪ್ರಧಾನಿ ಕಚೇರಿಯಿಂದ ಹಸಿರು ನಿಶಾನೆ ನಿರೀಕ್ಷೆಯಲ್ಲಿ ಅಧಿಕಾರಿಗಳು

ಸೆಪ್ಟೆಂಬರ್‌ನಿಂದ ಜನಗಣತಿ?

ನವದೆಹಲಿ(ರಾಯಿಟರ್ಸ್): ಕೇಂದ್ರ ಸರ್ಕಾರ ಇದೇ ಸೆಪ್ಟೆಂಬರ್‌ನಲ್ಲಿ ಜನಗಣತಿ ಕಾರ್ಯ ಆರಂಭಿಸುವ ಸಾಧ್ಯತೆ ಇದೆ ಎಂದು ಮೂಲಗಳು ಬುಧವಾರ ಹೇಳಿವೆ.

ವ್ಯಾಪಕ ಟೀಕೆ ನಂತರ, ತಮ್ಮ ಮೂರನೇ ಅವಧಿಯಲ್ಲಿ ಜನಗಣತಿ ನಡೆಸುವ ಮೂಲಕ ಮಹತ್ವದ ದತ್ತಾಂಶ ಸಂಗ್ರಹಕ್ಕೆ ಪ್ರಧಾನಿ ನರೇಂದ್ರ ಮೋದಿ ಮುಂದಾಗಿದ್ದಾರೆ ಎಂದು ಇವೇ ಮೂಲಗಳು ಹೇಳಿವೆ.

ಜನಗಣತಿ ಕಾರ್ಯ ಆರಂಭಕ್ಕಾಗಿ ಪ್ರಧಾನಿ ಕಚೇರಿಯಿಂದ ಹಸಿರು ನಿಶಾನೆಗಾಗಿ ಕಾಯಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ನಿರೀಕ್ಷೆಯಂತೆ, ಮುಂದಿನ ತಿಂಗಳು ಜನಗಣತಿ ಆರಂಭಗೊಂಡಲ್ಲಿ, ಪೂರ್ಣ ಪ್ರಕ್ರಿಯೆ ಮುಗಿಯಲು ಅಂದಾಜು 18 ತಿಂಗಳು ಬೇಕಾಗುತ್ತದೆ ಎಂದು ಈ ವಿಚಾರವಾಗಿ ಮಾಹಿತಿ ಇರುವ ಅಧಿಕೃತ ಎರಡು ಮೂಲಗಳು ಹೇಳಿವೆ.

ವರ್ಷಾಂತ್ಯಕ್ಕೆ ಐದು ರಾಜ್ಯಗಳ ವಿಧಾನಸಭೆ ಗಳಿಗೆ ಚುನಾವಣೆಗಳು ನಡೆಯಲಿವೆ. ಹೀಗಾಗಿ, ದೇಶದಾದ್ಯಂತ ಜನಗಣತಿಯನ್ನು ಹೇಗೆ ನಡೆಸಲಾಗುತ್ತದೆ ಎಂಬ ಬಗ್ಗೆ ಪ್ರಶ್ನೆಗಳೂ ಎದುರಾಗಿವೆ.



ಜನಗಣತಿಯನ್ನು ಹತ್ತು ವರ್ಷಗಳಿಗೊಮ್ಮೆ ನಡೆಸಲಾಗುತ್ತದೆ. ಕೋವಿಡ್–19 ಪಿಡುಗಿನ ಕಾರಣ 2021ರಲ್ಲಿ ನಡೆದಿರಲಿಲ್ಲ.

ಕೋವಿಡ್–19 ಪಿಡುಗು ಕೊನೆಗೊಂಡು ಸಹಜಸ್ಥಿತಿ ಕಂಡುಬಂದಿದ್ದರೂ ಜನಗಣತಿ ನಡೆಸಲು ಸರ್ಕಾರ ಮುಂದಾಗಿರಲಿಲ್ಲ. ಈ ಕಾರ್ಯ ಆರಂಭಿಸುವಲ್ಲಿ ವಿಳಂಬವಾಗುತ್ತಿರುವ ಕುರಿತು ಹಲವು ಆರ್ಥಿಕ ತಜ್ಞರು ಅಸಮಾಧಾನ–ಟೀಕೆ ಹೊರಹಾಕಿದ್ದರು.

ಸದ್ಯ ಲಭ್ಯವಿರುವ ದತ್ತಾಂಶಗಳು ಹಾಗೂ ಜಾರಿಯಲ್ಲಿರುವ ಯೋಜನೆಗಳನ್ನು 2011ರ ಜನಗಣತಿ ಪ್ರಕಾರ ಇದ್ದ ಜನಸಂಖ್ಯೆಗೆ ಅನುಗುಣವಾಗಿ ರೂಪಿಸಲಾಗಿದೆ.

'ಚೀನಾ ಹಿಂದಿಕ್ಕಿದ ಭಾರತ': ಜನಸಂಖ್ಯೆ ವಿಚಾರದಲ್ಲಿ ಚೀನಾ ಹಿಂದಿಕ್ಕುವ ಮೂಲಕ ಭಾರತ ಜಗತ್ತಿನ ಅತಿಹೆಚ್ಚು ಜನಸಂಖ್ಯಾಬಾಹುಳ್ಯದ ರಾಷ್ಟ್ರವಾಗಿ ಹೊರಹೊಮ್ಮಿದೆ ಎಂದು ವಿಶ್ವಸಂಸ್ಥೆ ಕಳೆದ ವರ್ಷ ಬಿಡುಗಡೆ ಮಾಡಿದ್ದ ವರದಿಯಲ್ಲಿ ಹೇಳಿದೆ.

ಜನಗಣತಿಯ ಹಿನ್ನೋಟ

- 1872ರಲ್ಲಿ ಮೊದಲ ಜನಗಣತಿ ನಡೆದಿತ್ತು. ಇದಾದ ನಂತರ, ಹತ್ತು ವರ್ಷಗಳಿಗೊಮ್ಮೆಯಂತೆ 15 ಜನಗಣತಿ ನಡೆಸಲಾಗಿದೆ
- ಸ್ವತಂತ್ರ ಭಾರತದಲ್ಲಿ ಮೊದಲ ಜನಗಣತಿ 1951ರಲ್ಲಿ ನಡೆದಿತ್ತು
- ಕೊನೆಯ ಜನಗಣತಿ 2011ರಲ್ಲಿ ನಡೆದಿದೆ
- ಕೋವಿಡ್–19 ಪಿಡುಗಿನ ಕಾರಣ 2021ರಲ್ಲಿ ನಡೆಯಬೇಕಿದ್ದ ಜನಗಣತಿಯನ್ನು ಮುಂದೂಡಲಾಗಿತ್ತು
- ಸ್ವಾತಂತ್ರ್ಯ ನಂತರ, ಎಸ್‌ಸಿ/ಎಸ್‌ಟಿಗಳನ್ನು ಹೊರತುಪಡಿಸಿ, ಇತರ ಜಾತಿಗಳ ಗಣತಿಯು ಜನಗಣತಿಯ ಭಾಗವಾಗಿಲ್ಲ
- 1931ರಲ್ಲಿ ಜನಗಣತಿ ವೇಳೆ ನಡೆಸಲಾಗಿದ್ದ ಜಾತಿಗಣತಿಯೇ ಕೊನೆಯದ್ದು

2026ರಲ್ಲಿ ವರದಿ ಬಿಡುಗಡೆ?

ಮುಂದಿನ ತಿಂಗಳು ಆರಂಭಗೊಳ್ಳಲಿದೆ ಎನ್ನಲಾದ ಜನಗಣತಿ ಕಾರ್ಯದ ಮುಂದಾಳತ್ವವನ್ನು ಗೃಹ ಸಚಿವಾಲಯ ಮತ್ತು ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ ವಹಿಸಿಕೊಂಡಿವೆ.

15 ವರ್ಷಗಳ ಅವಧಿಗೆ ಸಂಬಂಧಿಸಿದ ಮಾಹಿತಿ ಸಂಗ್ರಹಿಸಿ, ಕ್ರೋಡೀಕೃತ ವರದಿಯನ್ನು 2026ರ ಮಾರ್ಚ್‌ನಲ್ಲಿ ಬಿಡುಗಡೆ ಮಾಡುವ ಗುರಿಯನ್ನು ಈ ಸಚಿವಾಲಯಗಳು ಹೊಂದಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜನಗಣತಿ ಕಾರ್ಯ ಆರಂಭ ಹಾಗೂ ಇದಕ್ಕೆ ಸಂಬಂಧಿಸಿದ ಮಾಹಿತಿಗಾಗಿ ಈ ಎರಡೂ ಸಚಿವಾಲಯಗಳಿಗೆ ಇ–ಮೇಲ್ ಕಳುಹಿಸಲಾಗಿತ್ತು. ಆದರೆ, ಅವುಗಳಿಂದ ಪ್ರತಿಕ್ರಿಯೆ ಸಿಗಲಿಲ್ಲ ಎಂದು ರಾಯಿಟರ್ಸ್ ಹೇಳಿದೆ.

ರಾಜ್ಯಪಾಲರಿಗೆ ಝಡ್ ಶ್ರೇಣಿ ಭದ್ರತೆ: ಬುಲೆಟ್ ಪ್ರೂಫ್ ಕಾರು 8
ಕೋಲ್ಕತ್ತ ವೈದ್ಯ ವಿದ್ಯಾರ್ಥಿನಿ ಪ್ರಕರಣ: ತ್ವರಿತ ತನಿಖೆಗೆ ಆಗ್ರಹ- ಪ್ರತಿಭಟನೆ 9

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಆರ್‌ಎಫ್‌ಒಗಳಿಗೆ ಮಾತ್ರ ಎಫ್‌ಐಆರ್ ದಾಖಲು ಅಧಿಕಾರ

- ಎಸ್.ರವಿಪ್ರಕಾಶ್

ಬೆಂಗಳೂರು: ಅರಣ್ಯ ಅಪರಾಧಗಳಿಗೆ ಸಂಬಂಧಿಸಿದಂತೆ ವಲಯ ಅರಣ್ಯಾಧಿಕಾರಿಗಳಿಗಿಂತ (ಆರ್‌ಎಫ್‌ಒ) ಕೆಳಹಂತದ ಅಧಿಕಾರಿಗಳಿಗೆ ಇದ್ದ ಎಫ್‌ಐಆರ್ ದಾಖಲಿಸುವ ಅಧಿಕಾರವನ್ನು ಸರ್ಕಾರ ಹಿಂದಕ್ಕೆ ಪಡೆದಿದೆ.

ಅರಣ್ಯಭೂಮಿ ಒತ್ತುವರಿ, ಮರಗಳ ಕಳ್ಳಸಾಗಣೆ, ವನ್ಯಜೀವಿಗಳ ಬೇಟೆಯಂತಹ ಪ್ರಕರಣಗಳು ನಡೆದಾಗ ಉಪವಲಯ ಅರಣ್ಯಾಧಿಕಾರಿ-ಗಳು, ಬೀಟ್ ಫಾರೆಸ್ಟರ್‌ಗಳು ಎಫ್‌ಐಆರ್ ದಾಖಲಿಸುತ್ತಿದ್ದರು. ಇನ್ನು ಮುಂದೆ ಇವರಿಗೆ ಆ ಅಧಿಕಾರ ಇಲ್ಲ. ಈ ಸಂಬಂಧ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿ-ಕಾರಿ (ಅರಣ್ಯಪಡೆ) ಬ್ರಿಜೇಶ್ ಕುಮಾರ್ ದೀಕ್ಷಿತ್ ಸುತ್ತೋಲೆ ಹೊರಡಿಸಿದ್ದಾರೆ.



ಈ ಸುತ್ತೋಲೆಗೆ ಅವರು ನೀಡಿರುವ ಕಾರಣ ಹೀಗಿದೆ– 'ಕರ್ನಾಟಕ ಅರಣ್ಯ ಕಾಯ್ದೆ 1963ಕ್ಕೆ 2000ರಲ್ಲಿ ತಿದ್ದುಪಡಿ ಮಾಡಿದ್ದು, ಆ ತಿದ್ದುಪಡಿಯ ಸೆಕ್ಷನ್ 62(ಎ) ಅನ್ವಯ ವಲಯ ಅರಣ್ಯಾಧಿಕಾರಿಗಿಂತ ಕೆಳಹಂತದ ಅಧಿಕಾರಿಗಳಿಗೆ ಎಫ್‌ಐಆರ್ ಅಧಿಕಾರ ಇಲ್ಲ'.

> **ಕೆಲವು ಪ್ರಕರಣಗಳಲ್ಲಿ ಕೆಳಹಂತದ ಸಿಬ್ಬಂದಿ ದಾಖಲಿಸಿದ ಮೊಕದ್ದಮೆಗಳು ನ್ಯಾಯಾಲಯಗಳಲ್ಲಿ ವಜಾ ಆಗುತ್ತಿವೆ. ಅಧಿಕಾರ ಹಿಂಪಡೆದ ವಿಚಾರದಲ್ಲಿ ಕಾನೂನು ಇಲಾಖೆಯ ಅಭಿಪ್ರಾಯವನ್ನು ಪಡೆಯಲಾಗುತ್ತಿದೆ**
> **ಬ್ರಿಜೇಶ್ ಕುಮಾರ್ ದೀಕ್ಷಿತ್**
> ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ)

ಅರಣ್ಯ ಇಲಾಖೆ ನ್ಯಾಯಾಲಯಗಳಲ್ಲಿ ಹೂಡಿರುವ ಅಪರಾಧ ಪ್ರಕರಣಗಳು ವಜಾ ಆಗುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದ್ದ ಅರಣ್ಯ ಸಚಿವ ಈಶ್ವರ ಖಂಡ್ರೆ, 'ತಾಂತ್ರಿಕ ಕಾರಣಗಳಿಂದ ಪ್ರಕರಣಗಳು ವಜಾಗೊಳ್ಳುತ್ತಿರುವುದು ಗಂಭೀರ ವಿಚಾರ. ಇದನ್ನು ತಪ್ಪಿಸಲು ಸಂಬಂಧಪಟ್ಟ ವ್ಯಾಪ್ತಿಯ ವಲಯ ಅರಣ್ಯ ಅಧಿಕಾರಿಗಳಿಂದಲೇ ಎಫ್‌ಐಆರ್ ದಾಖಲಿಸಲು ಕ್ರಮ ಕೈಗೊಳ್ಳಬೇಕು' ಎಂದೂ ಇಲಾಖೆ ಮುಖ್ಯಸ್ಥರಿಗೆ ಸೂಚಿಸಿದ್ದರು. ಇದರ ಬೆನ್ನಲ್ಲೇ ಹೊಸ ಸುತ್ತೋಲೆ ಹೊರಡಿಸಲಾಗಿದೆ.

8ನೇ ಪುಟ ನೋಡಿ

ಕ್ರೀಡಾ ಕೋಟಾ: ಮರು ಪರಿಶೀಲನೆಗೆ ನಿರ್ದೇಶನ

ಬೆಂಗಳೂರು: 'ಪ್ರಸಕ್ತ ಸಾಲಿನಲ್ಲಿ ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಸಂಬಂಧಿಸಿದ ಕ್ರೀಡಾ ಕೋಟಾದ ಅರ್ಹತೆಗಳನ್ನು ಮರು ಪರಿಶೀಲನೆ ನಡೆಸಿ' ಎಂದು ಹೈಕೋರ್ಟ್, ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ನಿರ್ದೇಶಿಸಿದೆ.

ಕೆಇಎ ನಿಗದಿಪಡಿಸಿರುವ ಕ್ರೀಡಾ ಕೋಟಾದ ಅರ್ಹತಾ ಮಾನದಂಡಗಳನ್ನು ಪ್ರಶ್ನಿಸಿ ಮೈಸೂರಿನ ಟೆನಿಸ್ ಆಟಗಾರ್ತಿ ದೀಕ್ಷಾ ಪ್ರಸಾದ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಅರ್ಜಿದಾರರ ಪರ ವಕೀಲರು, 'ನಿಯಮಾನುಸಾರ ಅಭ್ಯರ್ಥಿಯು ಕ್ರೀಡಾ ಕೋಟಾದಲ್ಲಿ ಸೀಟು ಪಡೆಯಬೇಕಾದರೆ ಮೂರು ವರ್ಷ ಸತತವಾಗಿ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಕ್ರೀಡೆಗಳಲ್ಲಿ ರಾಜ್ಯ ಅಥವಾ ದೇಶವನ್ನು ಪ್ರತಿನಿಧಿಸಿ ಪದಕ ಜಯಿಸಿರಬೇಕು. ಆದರೆ, ಕೋವಿಡ್ ಕಾರಣದಿಂದಾಗಿ 2021 ಹಾಗೂ 2022ರಲ್ಲಿ ರಾಷ್ಟ್ರೀಯ ಕ್ರೀಡಾಕೂಟ ನಡೆದಿರಲಿಲ್ಲ. ಆದರೆ 2022-23 ಹಾಗೂ 2023-24ನೇ ಸಾಲಿನ ಕ್ರೀಡಾಕೂಟಗಳು ಒಂದೇ ವರ್ಷ ನಡೆದಿವೆ. ಹಾಗಾಗಿ, ಕೆಇಎ ಇವುಗಳಲ್ಲಿ ಒಂದನ್ನು ಮಾತ್ರ ಪರಿಗಣಿಸುತ್ತಿರುವ ಕಾರಣ ಅರ್ಜಿದಾರರು ಕ್ರೀಡಾ ಕೋಟಾದಡಿ ಸೀಟು ಪಡೆಯಲು ಅನರ್ಹರಾಗುತ್ತಾರೆ. ಆದ್ದರಿಂದ, ಕೆಇಎಗೆ ಸೂಕ್ತ ನಿರ್ದೇಶನ ನೀಡಬೇಕು' ಎಂದು ಕೋರಿದರು.

'ಅರ್ಜಿದಾರರನ್ನು ಕ್ರೀಡಾ ಕೋಟಾದ ಅರ್ಹರ ಪಟ್ಟಿಗೆ ಸೇರಿಸುವಂತೆ ಪೀಠ ತಿಳಿಸಿತು.

ಲಾಡ್ಜ್ ಮಾಲೀಕನ ವಿರುದ್ಧದ ಪೋಕ್ಸೊ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯುವಕನೊಬ್ಬ ಸರ್ಕಲ್‌ನಲ್ಲಿ ಸ್ಥಾಪಿಸಲಾದ ವೆಂಕಟೇಶ್ವರ ಸ್ವಾಮಿ ಪ್ರತಿಮೆಯೊಂದರ ಮುಂದೆ ಹಾರ ಬದಲಾಯಿಸಿ ಅಪ್ರಾಪ್ತ ವಯಸ್ಸಿನ ಬಾಲಕಿಯನ್ನು ಮದುವೆಯಾಗಿ ಸ್ಥಳೀಯ ಲಾಡ್ಜ್‌ವೊಂದರಲ್ಲಿ ತಂಗಿದ್ದ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಲಾಡ್ಜ್ ಮಾಲೀಕರ ವಿರುದ್ಧವೂ ದಾಖಲಾಗಿದ್ದ ಪೋಕ್ಸೊ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

'ನನ್ನ ವಿರುದ್ಧ ಕರ್ನಾಟಕ ಜಿಲ್ಲಾ ಕೇಂದ್ರ ವೊಂದರ ಮಹಿಳಾ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಐಪಿಸಿ, ಪೋಕ್ಸೊ ಹಾಗೂ ಬಾಲ್ಯ ವಿವಾಹ ತಡೆ ಕಾಯ್ದೆಯ ವಿವಿಧ ಕಲಂಗಳಡಿಯಲ್ಲಿನ ಕ್ರಿಮಿನಲ್ ಪ್ರಕರಣವನ್ನು ರದ್ದುಪಡಿಸಬೇಕು' ಎಂದು ಕೋರಿದ್ದ ನೆರೆಯ ಆಂಧ್ರಪ್ರದೇಶದ 46 ವರ್ಷದ ಉದ್ಯಮಿಯೊಬ್ಬರ ಮನವಿಯನ್ನು ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದೆ.

ಪ್ರಕರಣವೇನು?: ಬೆಂಗಳೂರಿನ ಕಾಲೇಜೊಂದರಲ್ಲಿ ಪಿಯುಸಿ ಓದುತ್ತಿದ್ದ ಬಾಲಕಿಯನ್ನು ಯುವಕನೊಬ್ಬ 2022ರ ನವೆಂಬರ್ 28ರಂದು ಆಂಧ್ರಪ್ರದೇಶಕ್ಕೆ ಕರೆದುಕೊಂಡು ಹೋಗಿ ಮದುವೆಯಾಗಿದ್ದ. ಇಬ್ಬರೂ ಸ್ಥಳೀಯ ಲಾಡ್ಜ್‌ವೊಂದರಲ್ಲಿ ತಂಗಿದ್ದರು. ಮಗಳು ಕಾಣೆಯಾದ ಬಗ್ಗೆ ಪೋಷಕರು ದೂರು ನೀಡಿದ್ದರು. ಈ ದೂರಿನ ಅನ್ವಯ ಐವರನ್ನು ಆರೋಪಿಗಳನ್ನಾಗಿ ಕಾಣಿಸಲಾಗಿತ್ತು.

ಹೈಕೋರ್ಟ್ ಸುದ್ದಿ

ಪ್ರಕರಣದಲ್ಲಿ ನಾಲ್ಕನೇ ಆರೋಪಿಯಾಗಿದ್ದ ಅರ್ಜಿದಾರರು ಲಾಡ್ಜ್ ಮಾಲೀಕರು, 'ನನಗೂ ಈ ಪ್ರಕರಣಕ್ಕೂ ಸಂಬಂಧವಿಲ್ಲ. ಹುಡುಗ ಮತ್ತು ಹುಡುಗಿ ನಮ್ಮ ಲಾಡ್ಜ್‌ಗೆ ಬಂದು ರೂಂ ಕೇಳಿದ್ದರು. ನಮ್ಮ ಲಾಡ್ಜ್ ಮ್ಯಾನೇಜರ್ ಕೊಟ್ಟಿದ್ದರು. ಆದರೆ, ನಂತರ ಯುವಕನ ವಿರುದ್ಧ ಪೋಕ್ಸೊ ಮತ್ತು ಇತರೆ ಕ್ರಿಮಿನಲ್ ಪ್ರಕರಣ ದಾಖಲಾಗಿದ್ದು ಇದರಲ್ಲಿ ನನ್ನನ್ನೂ ಆರೋಪಿಯನ್ನಾಗಿ ಮಾಡಲಾಗಿದೆ. ನಾನು ನಿರಪರಾಧಿ. ಹಾಗಾಗಿ ನನ್ನ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿ ಅವರು ಹೈಕೋರ್ಟ್‌ನಲ್ಲಿ ಕ್ರಿಮಿನಲ್ ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಪಿ.ಪ್ರಸನ್ನ ಕುಮಾರ್, 'ಬಾಲಕಿ ಮ್ಯಾಜಿಸ್ಟ್ರೇಟ್ ಮುಂದೆ ನೀಡಿದ್ದ ಹೇಳಿಕೆಯಲ್ಲಿ, ನಾನು ಮತ್ತು ನನ್ನ ಗಂಡ (ಯುವಕ) ಲಾಡ್ಜ್‌ನಲ್ಲಿ ತಂಗಿದ್ದು ನಿಜ. ಆದರೆ ದೈಹಿಕ ಸಂಪರ್ಕ ಬೆಳೆಸಿರಲಿಲ್ಲ ಎಂದು ಹೇಳಿಕೆ ನೀಡಿದ್ದಾರೆ. ಆದ್ದರಿಂದ, ಈ ಪ್ರಕರಣದಲ್ಲಿ ಅರ್ಜಿದಾರರ ವಿರುದ್ಧದ ಪ್ರಕರಣವನ್ನು ಮುಂದುವರಿಸುವುದು ಅನ್ಯಾಯ ಮತ್ತು ಕಾನೂನಿನ ದುರುಪಯೋಗವಾಗುತ್ತದೆ' ಎಂದು ವಿವರಿಸಿದ್ದರು.

'ಯತ್ನಾಳ್ ಕಾರ್ಖಾನೆಗೆ ಸಿಎಫ್‌ಒ ನೀಡಿ'

ಬೆಂಗಳೂರು: 'ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ನಿರ್ದೇಶಕರಾಗಿರುವ ಕಲಬುರಗಿ ಜಿಲ್ಲೆ ಚಿಂಚೋಳಿ ತಾಲ್ಲೂಕಿನಲ್ಲಿರುವ ಸಿದ್ಧಸಿರಿ ಸಕ್ಕರೆ ಕಾರ್ಖಾನೆಯ, ಎಥೆನಾಲ್ ಘಟಕಕ್ಕೆ ಮೂರು ವಾರಗಳಲ್ಲಿ ಸಿಎಫ್‌ಒ (ಕನ್ಸೆಂಟ್ ಫಾರ್ ಆಪರೇಶನ್) ನೀಡಬೇಕು' ಎಂದು ಹೈಕೋರ್ಟ್, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ (ಕೆಎಸ್‌ಪಿಸಿಬಿ) ಆದೇಶಿಸಿದೆ. ಈ ಸಂಬಂಧ ಯತ್ನಾಳ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ಪ್ರಕಟಿಸಿತು.

ಪ್ರಕರಣವೇನು?: 'ಕಲಬುರಗಿ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ಹೊರ ವಲಯದಲ್ಲಿರುವ ಸಿದ್ಧಸಿರಿ ಎಥೆನಾಲ್ ಮತ್ತು ಪವರ್ ಘಟಕವನ್ನು ಅರ್ಜಿದಾರರು 2021ರಲ್ಲಿ ಖರೀದಿಸಿದ್ದಾರೆ. ಇದಕ್ಕೆ ಅಗತ್ಯ ಅನುಮತಿ ಪಡೆದಿಲ್ಲ ಹಾಗೂ ಕೆಲವು ಪರಿಸರ ನಿಯಮಗಳನ್ನು ಉಲ್ಲಂಘಿಸಲಾಗಿದೆ' ಎಂಬ ಆರೋಪದಡಿ ಸಿಎಫ್‌ಒ ನೀಡಲು ಕಲಬುರಗಿ ವಲಯದ ಕೆಎಸ್‌ಪಿಸಿಬಿ ಅಧಿಕಾರಿಗಳು ನಿರಾಕರಿಸಿದ್ದರು.

'ಎಂಜಿನಿಯರ್ ವಿರುದ್ಧ ಬಲವಂತದ ಕ್ರಮ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಿವಮೊಗ್ಗ ಜಿಲ್ಲೆಯ ಸಾಗರದ ಡಿವೈಎಸ್‌ಪಿ (ಉಪ ಪೊಲೀಸ್ ವರಿಷ್ಠಾಧಿಕಾರಿ) ನನಗೆ ಕಿರುಕುಳ ನೀಡುತ್ತಿದ್ದಾರೆ, ರಕ್ಷಣೆ ಒದಗಿಸಿ' ಎಂದು ಮುಕ್ತ ನ್ಯಾಯಾಲಯದಲ್ಲಿ ಮನವಿ ಮಾಡಿದ್ದ ಕೆಪಿಟಿಸಿಎಲ್‌ನ ಸಹಾಯಕ ಎಂಜಿನಿಯರ್ ಎಂ.ಜಿ.ಶಾಂತಕುಮಾರ ಸ್ವಾಮಿ ವಿರುದ್ಧ ಬಲವಂತದ ಕ್ರಮ ಜರುಗಿಸಬಾರದು' ಎಂದು ಹೈಕೋರ್ಟ್ ಪೊಲೀಸರಿಗೆ ನಿರ್ದೇಶಿಸಿದೆ.

'ಮಹಿಳೆಗೆ ಘನತೆಗೆ ಧಕ್ಕೆ ತಂದ ಆರೋಪ, ಮಾದಕ ದ್ರವ್ಯ ಮತ್ತು ಅಮಲು ಪದಾರ್ಥಗಳ ಕಾಯ್ದೆ ಸೇರಿದಂತೆ ವಿವಿಧ ಆರೋಪಗಳಡಿ ನನ್ನ ವಿರುದ್ಧ ದಾಖಲಾಗಿರುವ ಮೂರು ಎಫ್‌ಐಆರ್‌ಗಳನ್ನು ರದ್ದುಪಡಿಸಬೇಕು' ಎಂದು ಕೋರಿ ಶಾಂತಕುಮಾರ ಸ್ವಾಮಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ರಾಜ್ಯ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, 'ಅರ್ಜಿದಾರರ ವಿರುದ್ಧ ಯುವತಿಯೊಬ್ಬರು ದೂರು ದಾಖಲಿಸಿದ್ದಾರೆ. ವಾಸ್ತವವಾಗಿ ಅರ್ಜಿದಾರರು ದೂರುದಾರ ಯುವತಿ ಜೊತೆ ಕದ್ದುಮುಚ್ಚಿ ಎರಡನೇ ಮದುವೆಯಾಗುವ ಸಿದ್ಧತೆ ನಡೆಸಿದ್ದರು. ಆದರೆ ಮೊದಲ ಮದುವೆಯ ವಿಷಯ ತಿಳಿದು ದೂರುದಾರ ಯುವತಿ ಮದುವೆ ಪ್ರಸ್ತಾಪ ರದ್ದುಗೊಳಿಸಿದ್ದರು. ಇದರಿಂದ ಕೋಪಗೊಂಡ ಅರ್ಜಿದಾರ ಯುವತಿ ವಾಸಿಸುವ ಗ್ರಾಮದಲ್ಲಿ ಆಕೆಯ ಕುರಿತಾಗಿ ದೊಡ್ಡ ಬ್ಯಾನರ್ ಹಾಕಿಸಿದ್ದಾರೆ. ಇಂತಹ ಕೃತ್ಯಕ್ಕೆ ಮುಂದಾಗದಂತೆ ಅರ್ಜಿದಾರರಿಗೆ ಎಚ್ಚರಿಕೆ ನೀಡಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದಕ್ಕೆ ತೀವ್ರ ಅಚ್ಚರಿ ವ್ಯಕ್ತಪಡಿಸಿದ ನ್ಯಾಯಮೂರ್ತಿಗಳು, 'ಏನ್ರಿ ಇದೆಲ್ಲಾ? ಹೀಗೆಲ್ಲಾ ಏಕೆ' ಎಂದು ಅರ್ಜಿದಾರ ಪರ ವಕೀಲರನ್ನು ಪ್ರಶ್ನಿಸಿದರು. ಅರ್ಜಿದಾರರ ಪರ ವಕೀಲರು, 'ಶಾಂತಕುಮಾರ ಸ್ವಾಮಿ ಬ್ಯಾನರ್ ಹಾಕಿಲ್ಲ' ಎಂದು ಸಮಜಾಯಿಷಿ ನೀಡಿದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, 'ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನೂ ಕೋರ್ಟ್‌ಗೆ ಸಲ್ಲಿಸಿ' ಎಂದು ಅರ್ಜಿದಾರ ಹಾಗೂ ಸರ್ಕಾರಿ ವಕೀಲರಿಗೆ ಸೂಚಿಸಿತು. ಅಂತೆಯೇ, 'ಅರ್ಜಿದಾರರ ವಿರುದ್ಧ ಪೊಲೀಸರು ಬಲವಂತದ ಕ್ರಮ ಜರುಗಿಸಬಾರದು' ಎಂದು ಆದೇಶಿಸಿ ವಿಚಾರಣೆ ಮುಂದೂಡಿತು.

'ಕನ್ನಡ ಕಲಿಯುವ ವಾತಾವರಣ ಸೃಷ್ಟಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕನ್ನಡಿಗರ ತೆರಿಗೆ ಹಣದಲ್ಲಿ ವಲಸಿಗರಿಗೆ ಕನ್ನಡ ಕಲಿಸಲು ಮುಂದಾಗಿರುವುದು ದುರದೃಷ್ಟಕರ' ಎಂದು ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ. ಚನ್ನೇಗೌಡ ಬೇಸರ ವ್ಯಕ್ತಪಡಿಸಿದ್ದಾರೆ.

'ಪ್ರಾಧಿಕಾರದ ಅಧ್ಯಕ್ಷರು ಅಧಿಕಾರ ಸ್ವೀಕರಿಸಿದ ಆರಂಭದಲ್ಲೇ ಕನ್ನಡೇತರರಿಗೆ ಕನ್ನಡ ಕಲಿಸುವ ಕಾರ್ಯಕ್ಕೆ ಮುಂದಾಗಿದ್ದಾರೆ. ಬೇರೆ ರಾಜ್ಯಗಳಲ್ಲಿ ಆಯಾ ಪ್ರದೇಶದ ಭಾಷೆ ಕಲಿಸಲು ಸರ್ಕಾರಗಳು ಮುಂದಾಗಿರುವ ಉದಾಹರಣೆಗಳಿಲ್ಲ. ಅಲ್ಲಿನ ವಾತಾವರಣವೇ ಆ ರಾಜ್ಯದ ಭಾಷೆಯನ್ನು ವಲಸಿಗರು ಕಲಿಯುವಂತೆ ಮಾಡುತ್ತದೆ' ಎಂದು ತಿಳಿಸಿದ್ದಾರೆ.

'ಉದಾರಿಯಾದ ನಮ್ಮ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ವಲಸಿಗರಿಗೆ ಕನ್ನಡ ಕಲಿಸಲು ಮುಂದಾಗಿದೆ. ಕನ್ನಡಿಗರ ತೆರಿಗೆ ಹಣದಲ್ಲಿ ಕನ್ನಡ ಕಲಿಸುವ ಕಾಯಕದ ಬದಲು, ವಲಸಿಗರು ತಾವಾಗಿಯೇ ಕನ್ನಡ ಕಲಿತು, ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿಯನ್ನು ಗೌರವಿಸುವ ವಾತಾವರಣ ನಿರ್ಮಿಸಲಿ' ಎಂದು ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.



ಎಲ್.ಎನ್.ಮುಕುಂದರಾಜ್ ಅವರು ಸಸಿಗೆ ನೀರೆರೆಯುವ ಮೂಲಕ ಶಿಬಿರ ಉದ್ಘಾಟಿಸಿದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ, ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ಸದಸ್ಯ ಟಿ.ತಿಮ್ಮೇಶ್ ಮತ್ತು ಅನುವಾದಕ ಅಬ್ದುಲ್ ರೆಹಮಾನ್ ಪಾಷ ಉಪಸ್ಥಿತರಿದ್ದರು.

'ಕನ್ನಡದ ಬಗ್ಗೆ ನಿರಾಸಕ್ತಿ ಮನೋಭಾವ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡಿಗರೇ ಕನ್ನಡ ಭಾಷೆಯ ಬಗ್ಗೆ ನಿರಾಸಕ್ತಿಯ ಮನೋಭಾವ ಹೊಂದಿದ್ದಾರೆ. ಇದರಿಂದಾಗಿ ಕನ್ನಡೇತರರು ನಾಡಿನಲ್ಲಿ ಯಜಮಾನ್ಯ ಸ್ಥಾಪಿಸಲು ಹೊರಟಿದ್ದಾರೆ' ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಬೇಸರ ವ್ಯಕ್ತಪಡಿಸಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರವು ನಗರದಲ್ಲಿ ಬುಧವಾರ ಹಮ್ಮಿಕೊಂಡ ಕನ್ನಡೇತರರಿಗೆ ಕನ್ನಡ ಕಲಿಸುವ ಶಿಕ್ಷಕರ ತರಬೇತಿ ಶಿಬಿರ ಉದ್ಘಾಟಿಸಿ, ಮಾತನಾಡಿದರು.

'ಕನ್ನಡಿಗರು ಉದಾರಿಗಳಷ್ಟೇ ಆಗಿರದೆ, ಉದಾಸೀನರೂ ಆಗಿದ್ದಾರೆ. ಹೊರ ರಾಜ್ಯಗಳಿಂದ, ಹೊರ ದೇಶಗಳಿಂದ ಈ ನಾಡಿಗೆ ಬಂದಂತಹ ಜನರಿಗೆ ಕನ್ನಡದ ಬಗ್ಗೆ ವಿಶೇಷ ಒಲವಿದೆ. ಆದರೆ, ಯಾವ ಬಗೆಯಲ್ಲಿ ಕನ್ನಡ ಕಟ್ಟುವ ಕೆಲಸವಾಗಬೇಕಿತ್ತೋ ಆ ರೀತಿ ಕನ್ನಡ ಕಟ್ಟುವ ಕಾಯಕದಲ್ಲಿ ಕನ್ನಡಿಗರು ತಮ್ಮನ್ನು ತೊಡಗಿಸಿಕೊಂಡಿಲ್ಲ. ನಮ್ಮ ಈ ದೌರ್ಬಲ್ಯವನ್ನು ಕನ್ನಡೇತರರು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಈ ಸಂದರ್ಭದಲ್ಲಿ ಕನ್ನಡದ ಭವ್ಯ ಪರಂಪರೆಗೆ ಉತ್ತರಾಧಿಕಾರಿಗಳನ್ನು ನಿರ್ಮಿಸಬೇಕು' ಎಂದು ಹೇಳಿದರು.

'ವಿದೇಶಿ ವಿದ್ವಾಂಸರು ಕನ್ನಡಕ್ಕೆ ಅನನ್ಯವಾದ ಕೊಡುಗೆ ನೀಡಿದ್ದಾರೆ. ಕನ್ನಡಿಗರಲ್ಲದ ಅವರು, ಎಲ್ಲ ಕಾಲಕ್ಕೂ ಸ್ಮರಣೀಯರು. ಆ ರೀತಿಯಲ್ಲಿ ಇಂದು ಕನ್ನಡೇತರರನ್ನು ನಾವು ರೂಪಿಸಬೇಕು' ಎಂದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, 'ಅಂತರರಾಷ್ಟ್ರೀಯ ಮಟ್ಟದಲ್ಲಿ, ರಾಷ್ಟ್ರೀಯ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಕನ್ನಡ ಭಾಷೆ ಹಲವು ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದೆ. ನಗರದಲ್ಲಿ ಅತ್ಯಾಧುನಿಕ ತಂತ್ರಜ್ಞಾನಗಳಿದ್ದರೂ ಅವನ್ನು ನಮ್ಮ ಭಾಷೆಯ ಅಭಿವೃದ್ಧಿಗೆ ಬಳಸಿಕೊಳ್ಳುವಲ್ಲಿ ವಿಫಲರಾಗಿದ್ದೇವೆ. ಕನ್ನಡಕ್ಕೆ ಇನ್ನೂ ಸರಿಯಾದ 'ಫಾಂಟ್' ದೊರೆಯುತ್ತಿಲ್ಲ. 'ಪಿಡಿಎಫ್' ದಾಖಲೆಯನ್ನು 'ವರ್ಡ್ ಫೈಲ್'ಗೆ ಬದಲಾಯಿಸಲು ಸಾಧ್ಯವಾಗುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಅಂತರರಾಷ್ಟ್ರೀಯ ಮಟ್ಟದ 16 ವಿಶ್ವವಿದ್ಯಾಲಯಗಳಲ್ಲಿ ತಮಿಳು ಭಾಷೆಯನ್ನು ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಆದರೆ, ಕನ್ನಡ ಭಾಷಾ ಅಧ್ಯಯನ ವಿಭಾಗ ಯಾವುದೇ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಇಲ್ಲ. ದೇಶದಲ್ಲಿರುವ ಹಲವು ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿ ತಮಿಳು ಭಾಷೆಯನ್ನು ಕಲಿಸಲಾಗುತ್ತದೆ. ಅದೇ ಕೇಂದ್ರೀಯ ವಿ.ವಿಗಳಲ್ಲಿ ಕನ್ನಡದ ಅಧ್ಯಯನ ಪೀಠವಿಲ್ಲ' ಎಂದರು.

ಪಿಒಪಿ ಮೂರ್ತಿಗೆ ಅವಕಾಶವಿಲ್ಲ; ಬಿಬಿಎಂಪಿ– ಪೊಲೀಸ್ ಸಹಯೋಗದಲ್ಲಿ ಶಾಂತಿ ಸಭೆ

ಗಣೇಶ ಹಬ್ಬ: ಅನುಮತಿಗೆ ಏಕಗವಾಕ್ಷಿ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣೇಶ ಹಬ್ಬದ ಪ್ರಯುಕ್ತ ಸಾರ್ವಜನಿಕ ಸ್ಥಳಗಳಲ್ಲಿ ಸಮಾರಂಭ ಆಯೋಜನೆಗೆ ಅನುಮತಿ ನೀಡಲು ಬಿಬಿಎಂಪಿಯ 63 ಉಪವಿಭಾಗ ಕಚೇರಿಗಳಲ್ಲಿ ಏಕಗವಾಕ್ಷಿ ಕೇಂದ್ರ ತೆರೆಯಲಾಗುತ್ತಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಗಣೇಶ ಚತುರ್ಥಿ ಸಂದರ್ಭದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಬಿಬಿಎಂಪಿ ಮತ್ತು ಬೆಂಗಳೂರು ನಗರ ಪೊಲೀಸ್ ಜಂಟಿ ಸಹಯೋಗದಲ್ಲಿ ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ಬುಧವಾರ ಆಯೋಜಿಸಿದ್ದ 'ಶಾಂತಿ ಸೌಹಾರ್ದ ಸಭೆ'ಯಲ್ಲಿ ಅವರು ಮಾತನಾಡಿದರು.

ಬಿಬಿಎಂಪಿ, ಪೊಲೀಸ್, ಬೆಸ್ಕಾಂ ಮತ್ತು ಅಗ್ನಿಶಾಮಕ ಅಧಿಕಾರಿಗಳನ್ನು ಒಳಗೊಂಡ ಸಮಿತಿಯನ್ನು ರಚಿಸಿ, ಏಕಗವಾಕ್ಷಿ ಕೇಂದ್ರಗಳನ್ನು ತೆರೆಯಲಾಗುವುದು. ಇಲಾಖೆಗಳ ನೋಡಲ್ ಅಧಿಕಾರಿಗಳ ಮಾಹಿತಿಯನ್ನು ಶೀಘ್ರವೇ ಬಿಡುಗಡೆ ಮಾಡಲಾಗುತ್ತದೆ. ಅದರಂತೆ ಗಣೇಶ ಮೂರ್ತಿ ಕೂರಿಸುವವರು, ಕೇಂದ್ರಕ್ಕೆ ಭೇಟಿ ನೀಡಿ ದಾಖಲೆ ಸಲ್ಲಿಸಿ, ಅನುಮತಿ ಪತ್ರ ಪಡೆಯಬಹುದು. ಪಿಒಪಿ ಗಣೇಶ ಮೂರ್ತಿಗಳನ್ನು ನಿಷೇಧಿಸಲಾಗಿದ್ದು, ಪರಿಸರಸ್ನೇಹಿ ಮೂರ್ತಿಗಳನ್ನು ಮಾತ್ರ ಪೂಜಿಸಬೇಕು ಎಂದು ಸೂಚಿಸಿದರು.

ಕೆರೆಗಳ ಬಳಿಯಿರುವ ಕಲ್ಯಾಣಿಗಳಲ್ಲಿ ಮೂರ್ತಿ ವಿಸರ್ಜನೆಗೆ ಅಗತ್ಯ ಸಿಬ್ಬಂದಿಯನ್ನು ನಿಯೋಜಿಸಲಾಗುತ್ತದೆ. ಪ್ರಮುಖ ಸ್ಥಳ/ಜಂಕ್ಷನ್ ಮತ್ತು ವಾರ್ಡ್‌ವಾರು ತಾತ್ಕಾಲಿಕವಾಗಿ ಸಂಚಾರಿ ವಿಸರ್ಜನಾ ಘಟಕಗಳ ವ್ಯವಸ್ಥೆ ಮಾಡಲಾಗುತ್ತದೆ. ಪೊಲೀಸ್ ವ್ಯವಸ್ಥೆಯ ಜೊತೆಗೆ ಬ್ಯಾರಿಕೇಡ್, ಸಿಸಿ ಟಿವಿ ಕ್ಯಾಮೆರಾ, ವಿದ್ಯುತ್ ದೀಪ, ನುರಿತ ಈಜುಗಾರರ ವ್ಯವಸ್ಥೆ, ಕ್ರೇನ್‌ಗಳ ಸೌಲಭ್ಯವನ್ನು ಕಲ್ಪಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.



'ಹೆಚ್ಚು ಕಡೆ ಅವಕಾಶ ಬೇಡ'

'ನಗರದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಹೆಚ್ಚು ಮೂರ್ತಿಗಳ ಪ್ರತಿಷ್ಠಾಪನೆಗೆ ಅವಕಾಶ ನೀಡಬಾರದು' ಎಂದು ಗಣಪತಿ ಮೂರ್ತಿ ಪ್ರತಿಷ್ಠಾಪನೆ ಮಾಡುವ ಆಯೋಜಕರು ಬಿಬಿಎಂಪಿ, ಪೊಲೀಸ್ ಇಲಾಖೆಗೆ ಮನವಿ ಮಾಡಿದರು.

'ಗಣಪತಿ ಮೂರ್ತಿ ಸ್ಥಾಪನೆ ಹಾಗೂ ವಿಸರ್ಜನೆಗೆ ಸ್ಥಳ ನಿಗದಿ ಮಾಡಬೇಕು. ಸೂಕ್ಷ್ಮ ಪ್ರದೇಶಗಳಲ್ಲಿ ಪೊಲೀಸ್ ಭದ್ರತೆ ನೀಡಬೇಕು. ಗಣೇಶ ವಿಸರ್ಜನೆಯ ಮೆರವಣಿಗೆ ಸಂದರ್ಭದಲ್ಲಿ ಸಂಚಾರ ದಟ್ಟಣೆ ಯಾಗದಂತೆ ಕ್ರಮ ಕೈಗೊಳ್ಳಿ. ಮೂರ್ತಿ ಪ್ರತಿಷ್ಠಾಪನೆ ಸ್ಥಳದಲ್ಲಿ ಫ್ಲೆಕ್ಸ್, ಬ್ಯಾನರ್ ಅಳವಡಿಸಲು ಅನುಮತಿ ನೀಡಬೇಕು. ವಿದ್ಯುತ್ ಅವಘಡ ವಾಗದಂತೆ ಬೆಸ್ಕಾಂ ಇಲಾಖೆಯಿಂದ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಗಣೇಶ ಮೂರ್ತಿಗಳ ಪ್ರತಿಷ್ಠಾಪನೆಗೆ ಹೆಚ್ಚು ಅವಕಾಶ ನೀಡಬಾರದು. ಕೆರೆಗಳ ಬಳಿಯ ಕಲ್ಯಾಣಿಗಳ ಸಮೀಪದ ರಸ್ತೆಯಲ್ಲೇ ಮೂರ್ತಿ ಇಟ್ಟು ಹೋಗುವುದನ್ನು ತಪ್ಪಿಸಬೇಕು. ಮೆರವಣಿಗೆ ಸಾಗುವ ರಸ್ತೆಗಳನ್ನು ದುರಸ್ತಿ ಮಾಡಬೇಕು' ಎಂದು ಸಭೆಯಲ್ಲಿ ಆಯೋಜಕರು ಹೇಳಿದರು.

ಬೆಂಗಳೂರು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್ ಮಾತನಾಡಿ, ಪ್ರತಿ ವರ್ಷದಂತೆ ಶಾಂತಿ ಸೌಹಾರ್ದದಿಂದ ಗಣೇಶ ಹಬ್ಬ ಆಚರಿಸಬೇಕು. ಮಾರ್ಗಸೂಚಿಗಳನ್ನು ಶೀಘ್ರವೇ ಪ್ರಕಟಿಸಲಾಗುವುದು ಎಂದರು.

ಪಾಲಿಕೆ, ಪೊಲೀಸ್ ಇಲಾಖೆ ನೀಡುವ ಸಲಹೆ, ಸೂಚನೆಗಳನ್ನು ಎಲ್ಲರೂ ತಪ್ಪದೆ ಪಾಲಿಸಬೇಕು. ಮೆರವಣಿಗೆ, ಮೆರವಣಿಗೆಯ ಮಾರ್ಗಕ್ಕೆ ಎಲ್ಲರೂ ಸಹಕಾರ ನೀಡಬೇಕು. ಹಬ್ಬದ ವೇಳೆ ಅನನುಕೂಲ, ಅಚಾತುರ್ಯ ನಡೆಯದಂತೆ ನೋಡಿಕೊಳ್ಳಲಾಗುವುದು. ಎಲ್ಲಿಯೂ ಸಂಚಾರ ದಟ್ಟಣೆ ಯಾಗದಂತೆ ಪೊಲೀಸ್ ಅಧಿಕಾರಿಗಳು ಕ್ರಮ ಕೈಗೊಳ್ಳಲಿದ್ದಾರೆ ಎಂದು ತಿಳಿಸಿದರು.

'ರಸ್ತೆ ಮಧ್ಯದಲ್ಲಿ ಗಣೇಶ ಮೂರ್ತಿಗಳನ್ನಿಡುವಂತಿಲ್ಲ. ಅನುಕೂಲಕರ ಜಾಗ ಗುರುತಿಸಿ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡಿ. ಕಾನೂನು ವ್ಯವಸ್ಥೆಯಲ್ಲಿ ಯಾವುದೇ ರೀತಿಯ ಧಕ್ಕೆಯಾಗದಂತೆ ಸಂಭ್ರಮದಿಂದ, ಶಾಂತಿ ಸೌಹಾರ್ದತೆಯಿಂದ ಹಬ್ಬವನ್ನು ಆಚರಿಸೋಣ' ಎಂದು ಸಭೆಯಲ್ಲಿ ಹಾಜರಿದ್ದ ಕಾರ್ಯಕ್ರಮ ಆಯೋಜಕರಿಗೆ ಕರೆ ನೀಡಿದರು.

ಹೆಚ್ಚುವರಿ ಪೊಲೀಸ್ ಕಮಿಷನರ್‌ಗಳಾದ ಸತೀಶ್ ಕುಮಾರ್, ರಮಣ ಗುಪ್ತಾ, ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಅನುಚೇತ್, ಬೆಸ್ಕಾಂ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು, ಅಗ್ನಿಶಾಮಕ ಅಧಿಕಾರಿಗಳು, ಗಣೇಶ ಪ್ರತಿಷ್ಠಾನದ ಆಯೋಜಕರು, ವಿವಿಧ ಸಮುದಾಯದ ಮುಖಂಡರು ಸಭೆಯಲ್ಲಿ ಉಪಸ್ಥಿತರಿದ್ದರು.

ನ್ಯಾಯಮಂಡಳಿ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹದಾಯಿ ಜಲ ವಿವಾದಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವರದಿ ಸಲ್ಲಿಸುವ ಸಂಬಂಧ ನ್ಯಾಯಮಂಡಳಿಯ ಅವಧಿಯನ್ನು ಆರು ತಿಂಗಳು ವಿಸ್ತರಿಸಲಾಗಿದೆ.

ಕರ್ನಾಟಕ, ಗೋವಾ ಮತ್ತು ಮಹಾರಾಷ್ಟ್ರ ನಡುವಣ ನೀರು ಹಂಚಿಕೆ ವಿವಾದಗಳನ್ನು ಪರಿಹರಿಸಲು ಈ ನ್ಯಾಯಮಂಡಳಿ ಸ್ಥಾಪಿಸಲಾಗಿದೆ. ನ್ಯಾಯಮಂಡಳಿಗೆ ಕರ್ನಾಟಕ ಹಾಗೂ ಗೋವಾ ಸರ್ಕಾರಗಳು ಸ್ಪಷ್ಟೀಕರಣ ಅರ್ಜಿ ಸಲ್ಲಿಸಿವೆ.

ಹೀಗಾಗಿ, ಹೆಚ್ಚಿನ ವರದಿ ನೀಡಲು ಇನ್ನಷ್ಟು ಕಾಲಾವಕಾಶ ನೀಡ ಬೇಕು ಎಂದು ಜಲಶಕ್ತಿ ಸಚಿವಾಲಯವನ್ನು ನ್ಯಾಯಮಂಡಳಿ ಕೋರಿತ್ತು. ವರದಿ ನೀಡುವ ಅವಧಿಯನ್ನು ವಿಸ್ತರಿಸಿ ಸಚಿವಾಲಯ ಅಧಿಸೂಚನೆ ಹೊರಡಿಸಿದೆ.

ಮಹದಾಯಿ ವಿವಾದ ಬಗೆಹರಿಸಲು ಅಂತರ ರಾಜ್ಯ ನದಿ ನೀರು ವಿವಾದ ಕಾಯ್ದೆ 1956ರ ಸೆಕ್ಷನ್ 4ರ ಅನ್ವಯ ಮಹದಾಯಿ ನ್ಯಾಯಮಂಡಳಿ ಸ್ಥಾಪಿಸಲಾಗಿತ್ತು. ಸುಪ್ರೀಂ ಕೋರ್ಟ್ ಆದೇಶದ ಅನುಸಾರ ನ್ಯಾಯಮಂಡಳಿಯು 2018ರ ಆಗಸ್ಟ್‌ನಲ್ಲಿ ವರದಿ ಸಲ್ಲಿಸಿದೆ. ಈ ವರದಿಯ ಬಗ್ಗೆ 2020ರ ಫೆ.20ರಂದು ಅಧಿಸೂಚನೆ ಹೊರಡಿಸಲಾಗಿದೆ. ಅವಧಿ ವಿಸ್ತರಿಸುತ್ತಿರುವುದು ಇದು ನಾಲ್ಕನೇ ಬಾರಿ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ಪತ್ರಕರ್ತರ ಸಹಕಾರ ಸಂಘವು ತನ್ನ ಸದಸ್ಯ ಹಾಗೂ ಸಹ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಿದೆ.

ಎಸ್‌ಎಸ್‌ಎಲ್‌ಸಿಯಲ್ಲಿ ಶೇ 85ಕ್ಕಿಂತ ಹೆಚ್ಚು, ಪಿಯುಸಿ ಹಾಗೂ ಪದವಿ/ಸ್ನಾತಕೋತ್ತರ ಪದವಿಯಲ್ಲಿ ಶೇ 80ಕ್ಕಿಂತ ಹೆಚ್ಚು ಅಂಕ ಗಳಿಸಿದ ಮಕ್ಕಳು ಪ್ರತಿಭಾ ಪುರಸ್ಕಾರಕ್ಕೆ ಅರ್ಹರಾಗಿರುತ್ತಾರೆ. ಅರ್ಜಿಯನ್ನು ಸೆಪ್ಟೆಂಬರ್ 5ರೊಳಗೆ ದಾಖಲೆಗಳೊಂದಿಗೆ ಸಂಘದ ಕಚೇರಿಗೆ ತಲುಪಿಸಬೇಕು ಎಂದು ಸಂಘದ ಅಧ್ಯಕ್ಷ ರಮೇಶ್ ಎಂ. ಪಾಳ್ಯ ತಿಳಿಸಿದ್ದಾರೆ.

ಜಯನಗರ ಕಾಂಪ್ಲೆಕ್ಸ್: ತಳಮಹಡಿ ಮಳಿಗೆಗಳ ತೆರವು

ವಾಹನ ನಿಲುಗಡೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಯನಗರ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿ ಹೊಸದಾಗಿ ನಿರ್ಮಿಸಿರುವ ಒಂದನೇ ಬ್ಲಾಕ್‌ನ ತಳಮಹಡಿಯಲ್ಲಿದ್ದ ಅಂಗಡಿ ಮಳಿಗೆಗಳನ್ನು ತೆರವುಗೊಳಿಸಿ ಆ ಜಾಗದಲ್ಲಿ ವಾಹನಗಳ ನಿಲುಗಡೆ ಮಾಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಅವಕಾಶ ಕಲ್ಪಿಸಿದೆ.

ಈ ಸಂಬಂಧ ಆರ್.ಆರ್. ಹಿರೇಮಠ್ ಸಲ್ಲಿಸಿದ್ದ ನ್ಯಾಯಾಂಗ ನಿಂದನೆ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಬಿಬಿಎಂಪಿ ಪರ ವಕೀಲರು ನ್ಯಾಯಾಲಯದ ಆದೇಶ ಪಾಲಿಸಿರುವ ಬಗ್ಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರ ಪ್ರಮಾಣ ಪತ್ರವನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

ಕ್ಷಮೆ: 'ಕೋರ್ಟ್ ಆದೇಶದ ಬಗ್ಗೆ ನನಗೆ ಅಪಾರ ಗೌರವವಿದೆ. ನ್ಯಾಯಾಲಯದ ಆದೇಶಗಳನ್ನು ನಾನು ಸದಾ ಪಾಲಿಸಿಕೊಂಡು ಬಂದಿದ್ದೇನೆ. ಈ ನ್ಯಾಯಾಲಯ 2020ರ ಫೆಬ್ರುವರಿ 4ರಂದು ಹೊರಡಿಸಿರುವ ಆದೇಶ ಉಲ್ಲಂಘನೆ ಮಾಡಿರುವುದಕ್ಕೆ ಬೇಷರತ್ ಕ್ಷಮೆ ಕೋರುತ್ತೇನೆ' ಎಂದು ತುಷಾರ್ ಗಿರಿನಾಥ್ ಪ್ರಮಾಣ ಪತ್ರದಲ್ಲಿ ವಿವರಿಸಿದ್ದಾರೆ.

'ನ್ಯಾಯಾಲಯಕ್ಕೆ ನೀಡಿದ್ದ ವಾಗ್ದಾನದಂತೆ ಜಯನಗರ ಶಾಪಿಂಗ್ ಕಾಂಪ್ಲೆಕ್ಸ್‌ನ ಒಂದನೇ ಬ್ಲಾಕ್‌ನ ತಳಮಹಡಿಯಲ್ಲಿದ್ದ ಮಳಿಗೆಗಳನ್ನು ಈಗ ತೆರವುಗೊಳಿಸಲಾಗಿದೆ. ಅಲ್ಲಿದ್ದ ಅಂಗಡಿಗಳ ಮಾಲೀಕರನ್ನು ಸ್ಥಳಾಂತರಗೊಳಿಸಲಾಗಿದೆ. ಆ ಜಾಗವನ್ನು ವಾಹನಗಳ ನಿಲುಗಡೆಗೆ ಕಾಯ್ದಿರಿಸಲಾಗಿದೆ. ಆದ್ದರಿಂದ, ನನ್ನ ವಿರುದ್ಧದ ನ್ಯಾಯಾಂಗ ನಿಂದನೆ ಕ್ರಮ ಕೈಬಿಡಬೇಕು' ಎಂದು ಕೋರಿದ್ದರು.

ಇದನ್ನು ಮಾನ್ಯ ಮಾಡಿರುವ ನ್ಯಾಯಪೀಠ ನ್ಯಾಯಾಂಗ ನಿಂದನೆ ಅರ್ಜಿ ವಿಲೇವಾರಿ ಮಾಡಿತು. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಜಿ.ಆರ್. ಮೋಹನ್ ವಾದ ಮಂಡಿಸಿದ್ದರು.

ಪ್ರಕರಣವೇನು?: 'ಶಾಪಿಂಗ್ ಕಾಂಪ್ಲೆಕ್ಸ್‌ನ ಬ್ಲಾಕ್-1ರ ಮರು ನಿರ್ಮಾಣದ ವೇಳೆ ಪಾರ್ಕಿಂಗ್ ಜಾಗಕ್ಕಾಗಿ ಮೀಸಲಿದ್ದ ಮೇಲಿನ ನೆಲಮಹಡಿಯಲ್ಲಿ ಮಳಿಗೆಗಳ ಕಾರ್ಯ ನಿರ್ವಹಣೆಗೆ ಬಿಬಿಎಂಪಿ ಅನುಮತಿ ನೀಡಿತ್ತು. ಇದನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಲಾಗಿತ್ತು. ಅರ್ಜಿ ವಿಚಾರಣೆ ವೇಳೆ ಪ್ರಮಾಣ ಪತ್ರ ಸಲ್ಲಿಸಿದ್ದ ಬಿಬಿಎಂಪಿ, 'ಕಾಂಪ್ಲೆಕ್ಸ್‌ನ ಬ್ಲಾಕ್-1ರ ಮರು ನಿರ್ಮಾಣದ ಹಿನ್ನೆಲೆಯಲ್ಲಿ ತಾತ್ಕಾಲಿಕ ಅನುಮತಿ ಕಲ್ಪಿಸಲಾಗಿದೆ. ಬ್ಲಾಕ್-2, 3 ಮತ್ತು 4 ಅನ್ನು ನಿರ್ಮಿಸಿದ ನಂತರ ಮೇಲಿನ ನೆಲಮಹಡಿ ಜಾಗವನ್ನು ಪಾರ್ಕಿಂಗ್‌ಗೆ ಬಳಸಲಾಗುವುದು' ಎಂದು ತಿಳಿಸಿತ್ತು.

ಇದನ್ನು ದಾಖಲಿಸಿಕೊಂಡಿದ್ದ ಹೈಕೋರ್ಟ್, 'ಶಾಪಿಂಗ್ ಕಾಂಪ್ಲೆಕ್ಸ್ ಬ್ಲಾಕ್‌ಗಳ ಮರು ನಿರ್ಮಾಣದ ನಂತರ ಮೇಲಿನ ನೆಲಮಹಡಿಯಲ್ಲಿ ನಿರ್ಮಿಸಿರುವ ಮಳಿಗೆಗಳನ್ನು ತೆರವುಗೊಳಿಸಬೇಕು' ಎಂದು 2020ರಲ್ಲಿ ನಿರ್ದೇಶಿಸಿತ್ತು. 'ಈ ಆದೇಶ ಹೊರಬಿದ್ದು ಮೂರು ವರ್ಷ ಕಳೆದರೂ ಅಕ್ರಮ ಮಳಿಗೆಗಳನ್ನು ತೆರವುಗೊಳಿಸುವಲ್ಲಿ ಬಿಬಿಎಂಪಿ ವಿಫಲವಾಗಿದೆ' ಎಂದು ಆರೋಪಿಸಿ ನ್ಯಾಯಾಂಗ ನಿಂದನೆ ಮೊಕದ್ದಮೆ ದಾಖಲಿಸಲಾಗಿತ್ತು.

ಬೆಂಗಳೂರಿನ ಕಸಕ್ಕೆ ಕೆಜಿಎಫ್‌ನಲ್ಲಿ ಜಾಗ!

ವೈಜ್ಞಾನಿಕ ವಿಲೇವಾರಿ; ಎಕ್ಸ್‌ಪ್ರೆಸ್ ವೇ ಪಕ್ಕದಲ್ಲಿರುವ ಬಿಜಿಎಂಎಲ್‌ನ 300 ಎಕರೆ ನಿಗದಿ ಸಾಧ್ಯತೆ

● ಕೆ.ಓಂಕಾರ ಮೂರ್ತಿ

ಕೋಲಾರ: ಕಸ ವಿಲೇವಾರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಈಗ ಕೋಲಾರ ಜಿಲ್ಲೆಯತ್ತ ಮುಖ ಮಾಡಿದೆ.

ಬೆಂಗಳೂರು ವ್ಯಾಪ್ತಿಯ ಕಸ ವಿಲೇವಾರಿ ಮಾಡಲು ಅಗತ್ಯ ಜಾಗ ಹುಡುಕುವಂತೆ ಜಿಲ್ಲಾಡಳಿತಕ್ಕೆ ಸೂಚನೆ ಕೂಡ ಬಂದಿತ್ತು. ಈ ನಿಟ್ಟಿನಲ್ಲಿ ಜಾಗಕ್ಕೆ ಜಿಲ್ಲೆಯಲ್ಲಿ ಹುಡುಕಾಟ ನಡೆದಿದ್ದು, ಕೆಜಿಎಫ್ ತಾಲ್ಲೂಕಿನಲ್ಲಿ 300 ಎಕರೆ ಪ್ರದೇಶ ಗುರುತಿಸಲಾಗಿದೆ. ಈ ಜಾಗ ಬಿಜಿಎಂಎಲ್‌ಗೆ ಸೇರಿದ್ದಾಗಿದ್ದು, ಜಿಲ್ಲಾಧಿಕಾರಿ ಅಕ್ರಂ ಪಾಷಾ ಹಾಗೂ ತಹಶೀಲ್ದಾರ್ ನಾಗವೇಣಿ ಸೇರಿದಂತೆ ಕಂದಾಯ ಇಲಾಖೆ ಅಧಿಕಾರಿಗಳು ಈಚೆಗೆ ಪರಿಶೀಲನೆ ನಡೆಸಿದ್ದಾರೆ.

ಹೊಸದಾಗಿ ನಿರ್ಮಾಣವಾಗುತ್ತಿರುವ ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್ ವೇ ಕಾರಿಡಾರ್‌ನ ಪಕ್ಕದಲ್ಲೇ ಈ ಜಾಗವಿದ್ದು, ಬಿಬಿಎಂಪಿಗೆ ಪ್ರಸ್ತಾವ ಸಲ್ಲಿಸಲಾಗಿದೆ.

'ವೈಜ್ಞಾನಿಕವಾಗಿ ಘನ ತ್ಯಾಜ್ಯ ವಿಲೇವಾರಿ ಮಾಡಲು ಜಿಲ್ಲೆಯಲ್ಲಿ ಎಲ್ಲಾದರೂ ಜಾಗವಿದ್ದರೆ ಪರಿಶೀಲಿಸುವಂತೆ ಬಿಬಿಎಂಪಿ ಅಧಿಕಾರಿಗಳು ನನ್ನ ಗಮನಕ್ಕೆ ತಂದಿದ್ದರು. ಅದರಂತೆ ಬಿಜಿಎಂಎಲ್‌ನ 300 ಎಕರೆ ಜಾಗ ನೋಡಿದ್ದು, ಖರೀದಿಗಾಗಿ ಬಿಬಿಎಂಪಿ ಗಮನಕ್ಕೆ ತರಲಾಗಿದೆ' ಎಂದು ಜಿಲ್ಲಾಧಿಕಾರಿ ಅಕ್ರಂ ಪಾಷಾ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'300 ಎಕರೆ ಪೈಕಿ 100 ಎಕರೆ ಜಾಗದಲ್ಲಿ ಮಾತ್ರ ವೈಜ್ಞಾನಿಕವಾಗಿ ಕಸ ವಿಲೇವಾರಿ ಮಾಡಲಾಗುತ್ತದೆ. ಇನ್ನುಳಿದ 200 ಎಕರೆಯಲ್ಲಿ ಗಿಡ ಬೆಳೆಸಿ ಹಸಿರು ವಲಯವ ಮಾಡಲಾಗುತ್ತದೆ. ಈ ಪ್ರದೇಶದಲ್ಲಿ ಗೊಬ್ಬರ ತಯಾರಿಕೆ, ವಿದ್ಯುತ್ ಉತ್ಪಾದನೆಯೂ ಸಾಧ್ಯವಾಗಲಿದೆ. ಇದರಿಂದ ಯಾರಿಗೂ ಯಾವುದೇ ತೊಂದರೆ ಆಗುವುದಿಲ್ಲ. ಪರಿಸರಕ್ಕಾಗಲಿ, ಪ್ರಾಣಿಗಳಿಗಾಗಲಿ, ಜನರಿಗಾಗಲಿ ತೊಂದರೆ ಇರುವುದಿಲ್ಲ' ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಈ ಜಾಗವು ಬೆಮೆಲ್–ಬಡಮಾಕನಹಳ್ಳಿ– ಬೇತಮಂಗಲ ಪ್ರದೇಶದ ಆಸುಪಾಸಿನಲ್ಲಿ ಬರಲಿದೆ. ಈ ಪ್ರದೇಶವು ಕೃಷ್ಣಮೃಗಗಳ ಆವಾಸ ಸ್ಥಾನವೂ ಆಗಿದೆ. ಕೃಷ್ಣಮೃಗಗಳ ಸಂರಕ್ಷಿತ ಪ್ರದೇಶ ಮಾಡಲು ಅರಣ್ಯ ಇಲಾಖೆಯಿಂದ ಈಗಾಗಲೇ ಪ್ರಸ್ತಾವ ಹೋಗಿದೆ. ಬೆಂಗಳೂರಿನಿಂದ ಕೆಜಿಎಫ್ ತಾಲ್ಲೂಕಿಗೆ ಕಸ ಬರಲಿದೆ ಎಂಬ ವಿಚಾರ ಗೊತ್ತಾಗಿ ಕೆಲ ಗ್ರಾಮಸ್ಥರೂ ಆತಂಕ ವ್ಯಕ್ತಪಡಿಸಿದ್ದಾರೆ.

ಬಿಬಿಎಂಪಿ ವಾಹನಗಳು ಕೂಡ ಎಕ್ಸ್‌ಪ್ರೆಸ್ ವೇನಲ್ಲಿಯೇ ಕಸ ತುಂಬಿಕೊಂಡು ಬಂದು ಇಲ್ಲಿ ಸುರಿದು ಹೋಗುವ ವ್ಯವಸ್ಥೆ ಆಗಲಿದೆ. ಇದರಿಂದ ತ್ವರಿತಗತಿಯಲ್ಲಿ ವಿಲೇವಾರಿಯೂ ನಡೆಯಲಿದೆ.

ಜತೆಗೆ ಕೋಲಾರ ಜಿಲ್ಲೆಯ ಕಸವನ್ನೂ ಇಲ್ಲೇ ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಅವಕಾಶ ಸಿಗಲಿದೆ ಎಂಬ ಆಶಯವನ್ನೂ ಜಿಲ್ಲಾಧಿಕಾರಿ ವ್ಯಕ್ತಪಡಿಸಿದ್ದಾರೆ.

ಮುಖ್ಯಾಂಶಗಳು

- ಕೆಜಿಎಫ್ ತಾಲ್ಲೂಕಿನಲ್ಲಿರುವ ಪ್ರದೇಶ
- ಸುತ್ತಮುತ್ತ ಯಾವುದೇ ಗ್ರಾಮ ಇಲ್ಲ
- ಕೋಲಾರ ಜಿಲ್ಲೆಯ ಕಸ ವಿಲೇವಾರಿಗೂ ಅವಕಾಶ

ಗುರುತಿಸಿರುವ ಪ್ರದೇಶದಲ್ಲಿ ಯಾವುದೇ ಗ್ರಾಮ ಇಲ್ಲ. ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ ಮಾರ್ಗಸೂಚಿ ಪ್ರಕಾರವೇ ಘನ ತ್ಯಾಜ್ಯ ವಿಲೇವಾರಿ ಮಾಡಲಾಗುತ್ತದೆ

ಅಕ್ರಂ ಪಾಷಾ, ಜಿಲ್ಲಾಧಿಕಾರಿ



ಕೋಲಾರ ಜಿಲ್ಲೆ ಕೆಜಿಎಫ್ ತಾಲ್ಲೂಕಿನಲ್ಲಿ ಘನ ತ್ಯಾಜ್ಯ ವಿಲೇವಾರಿ ಘಟಕ ಸ್ಥಾಪನೆ ಸಂಬಂಧ ಜಿಲ್ಲಾಧಿಕಾರಿ ಅಕ್ರಂ ಪಾಷಾ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಎಕ್ಸ್‌ಪ್ರೆಸ್ ವೇ ಬಳಿ ಈಚೆಗೆ ಜಾಗ ಪರಿಶೀಲನೆ ನಡೆಸಿದರು



ಆರಾಧನೆ... ಗುರು ರಾಘವೇಂದ್ರ ಸ್ವಾಮಿಗಳ 353ನೇ ಆರಾಧನಾ ಮಹೋತ್ಸವ ಪ್ರಯುಕ್ತ ನಗರದ ಎನ್.ಆರ್.ಕಾಲೊನಿಯ ರಾಘವೇಂದ್ರ ಸ್ವಾಮಿಗಳ ಬೃಂದಾವನ ಸನ್ನಿಧಿಯಲ್ಲಿ ನಡೆದ ಗುರುರಾಯರ ಮಧ್ಯಾರಾಧನೆಯಲ್ಲಿ ಪಾಲ್ಗೊಂಡಿದ್ದ ಭಕ್ತರು –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಅಂಗವಿಕಲ ಪತ್ರಿಕಾ ವಿತರಕರಿಗೆ ಸನ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ಹಾಗೂ ಕಾರ್ಯನಿರತ ಪತ್ರಿಕಾ ವಿತರಕರ/ ಹಂಚಿಕೆದಾರರ ಸಂಘದ ಸಹಯೋಗದಲ್ಲಿ ಸೆಪ್ಟೆಂಬರ್ 8 ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಪತ್ರಿಕಾ ವಿತರಕರ 4 ನೇ ರಾಜ್ಯ ಸಮ್ಮೇಳನದಲ್ಲಿ ಅಂಗವಿಕಲ ಪತ್ರಿಕಾ ವಿತರಕರನ್ನು ಸನ್ಮಾನಿಸಲಾಗುವುದು.

ರಾಜ್ಯದ ಯಾವುದೇ ನಗರ ಜಿಲ್ಲೆ ಹಾಗೂ ತಾಲೂಕಿನಲ್ಲಿರುವ ಅಂಗವಿಕಲ ಪತ್ರಿಕಾ ವಿತರಕರು ತಮ್ಮ ಪರಿಪೂರ್ಣ ಮಾಹಿತಿಯನ್ನು ದಿನಾಂಕ 28-8-2024 ಒಳಗೆ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ, ಕೆ.ಶಂಭುಲಿಂಗ ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ಮೊ. ನಂ: 9972534666 ಅಥವಾ ತಿಪ್ಪೇಸ್ವಾಮಿ, ಜಿಲ್ಲಾಧ್ಯಕ್ಷರು ಕಾರ್ಯನಿರತ ಪತ್ರಿಕಾ ವಿತರಕರ/ ಹಂಚಿಕೆದಾರರ ಸಂಘ ಚಿತ್ರದುರ್ಗ ಮೊ ನಂ: 98450 99310ನ್ನು ಸಂಪರ್ಕಿಸಬಹುದು ಎಂದು ಒಕ್ಕೂಟದ ರಾಜ್ಯಾಧ್ಯಕ್ಷರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗಾಂಧಿ ಸ್ಮಾರಕ ನಿಧಿಯ 75ನೇ ವರ್ಷದ ಸಂಸ್ಮರಣೆ

ವಿಚಾರ ಸಂಕಿರಣ 24ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗಾಂಧಿ ಸ್ಮಾರಕ ನಿಧಿಯ 75ನೇ ವರ್ಷದ ಸಂಸ್ಮರಣೆ ಅಂಗವಾಗಿ ನಗರದ ಗಾಂಧಿ ಭವನದಲ್ಲಿ ಇದೇ 24 ಮತ್ತು 25ರಂದು '21ನೇ ಶತಮಾನಕ್ಕೆ ಮಹಾತ್ಮ ಗಾಂಧೀಜಿ' ವಿಷಯದ ಕುರಿತು ಅಂತರರಾಷ್ಟ್ರೀಯ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದೆ' ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಭವಿಷ್ಯದ ಶಾಂತಿ, ನ್ಯಾಯ, ಸೋದರತ್ವ ಮತ್ತು ಸುಸ್ಥಿರ ಅಭಿವೃದ್ಧಿಯ ನಿರ್ಮಾಣ' ಈ ವಿಚಾರ ಸಂಕಿರಣದ ಮುಖ್ಯ ವಿಷಯವಾಗಿದೆ. ಮಹಾತ್ಮ ಗಾಂಧೀಜಿಯವರ ಚಿಂತನೆಗಳು ಮತ್ತು ಆಚರಣೆಗಳನ್ನು ಕೇಂದ್ರೀಕರಿಸಿದರೂ, ಈ ಕಾರ್ಯಕ್ರಮವು ಭಿನ್ನ ವಿಚಾರಗಳು, ದೃಷ್ಟಿಕೋನಗಳು ಮತ್ತು ಗಂಭೀರ ಚರ್ಚೆಗಳಿಗೆ ವಿಶಾಲ ವೇದಿಕೆ ಕಲ್ಪಿಸಲಿದೆ' ಎಂದರು.

'ವಿಚಾರ ಸಂಕಿರಣವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ಮಾಜಿ ಲೋಕಾಯುಕ್ತ ನ್ಯಾ. ಸಂತೋಷ್ ಹೆಗ್ಡೆ ಸಮಾರೋಪ ಭಾಷಣ ಮಾಡಲಿದ್ದಾರೆ. ಒಟ್ಟು 27 ಮಂದಿ ವಿಚಾರ ಮಂಡಿಸಲಿದ್ದು, ಗಾಂಧೀಜಿಯವರ ಮರಿ ಮೊಮ್ಮಗ ತುಷಾರ್ ಗಾಂಧಿ ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಕುಮಾರ್ ಪ್ರಶಾಂತ್, ದಿಕ್ಸೂಚಿ ಭಾಷಣ ಗೋಷ್ಠಿಯ ಅಧ್ಯಕ್ಷತೆ ವಹಿಸಲಿದ್ದಾರೆ. ಅಮೆರಿಕ, ಬಾಂಗ್ಲಾದೇಶ, ಚೀನಾ, ದಕ್ಷಿಣ ಕೊರಿಯಾ ದೇಶಗಳಿಂದ ವಿಷಯ ಪಂಡಿತರು ಭಾಗವಹಿಸಲಿದ್ದಾರೆ. ಬೆಂಗಳೂರಿನಲ್ಲಿ ಓದುತ್ತಿರುವ ವಿವಿಧ ದೇಶಗಳ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ' ಎಂದರು.

ಹೆಚ್ಚಿನ ವಿವರಗಳಿಗೆ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಕಾರ್ಯಾಧ್ಯಕ್ಷ ಎನ್.ಆರ್. ವಿಶುಕುಮಾರ್ (ಮೊಬೈಲ್– 990009532) ಅವರನ್ನು ಸಂಪರ್ಕಿಸಬಹುದು.

11 ಸಾವಿರ ಪುಸ್ತಕ ಡಿಜಿಟಲೀಕರಣ

'ಇಲ್ಲಿನ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯು ಸರ್ವಂಟ್ಸ್ ಆಫ್ ನಾಲೆಡ್ಜ್ ವೇದಿಕೆಯ ಸಹಯೋಗದಲ್ಲಿ ಗಾಂಧಿ ಭವನ ಗ್ರಂಥಾಲಯದಲ್ಲಿನ 11,720 ಪುಸ್ತಕಗಳನ್ನು ಡಿಜಿಟಲೀಕರಣಗೊಳಿಸಿದೆ. ಇದನ್ನು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಮ್ಮಿಕೊಂಡಿರುವ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಲೋಕಾರ್ಪಣೆ ಮಾಡಿ, ದೇಶದಾದ್ಯಂತ ಇರುವ ಗಾಂಧಿ ಸಂಸ್ಥೆಗಳಿಗೆ ಒದಗಿಸಲಾಗುತ್ತದೆ' ಎಂದು ಎಚ್.ಕೆ. ಪಾಟೀಲ ತಿಳಿಸಿದರು.

'ಇಡೀ ಗ್ರಂಥಾಲಯವನ್ನು ಕೇವಲ ಮೂರು ತಿಂಗಳಲ್ಲಿ ಡಿಜಿಟಲೀಕರಣಗೊಳಿಸಲಾಗಿದೆ. ತೆಲಂಗಾಣ ಗಾಂಧಿ ಸ್ಮಾರಕ ನಿಧಿ ಮತ್ತು ಆಂಧ್ರಪ್ರದೇಶ ಗಾಂಧಿ ಸ್ಮಾರಕ ನಿಧಿಯೂ ತಮ್ಮ ಪ್ರಕಟಣೆಯ ಪುಸ್ತಕಗಳನ್ನು ಈ ಯೋಜನೆಗೆ ಕೊಡುಗೆಯಾಗಿ ನೀಡಿವೆ. ಗಾಂಧೀಜಿ ಅವರ ಸಂಗ್ರಹಿತ ಸಂಪುಟಗಳ ಜತೆಗೆ ಹರಿಜನ ಪತ್ರಿಕೆ, ನವಜೀವನ ಟ್ರಸ್ಟ್ ಕರಪತ್ರ ಸೇರಿ ವಿವಿಧ ಅಪರೂಪದ ಸಂಪನ್ಮೂಲಗಳನ್ನು ಡಿಜಿಟಲೀಕರಣ ಮಾಡಲಾಗಿದೆ' ಎಂದರು.

ಇಂದು ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 66/11ಕೆ.ವಿ ಎಚ್.ಬಿ.ಆರ್ ಉಪವಿಭಾಗದಲ್ಲಿ ತುರ್ತು ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುತ್ತಿರುವುದರಿಂದ ಗುರುವಾರ(ಆ.22) ದಂದು ಈ ಉಪವಿಭಾಗದ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಇಲಾಖೆ ಪ್ರಕಟಣೆ ತಿಳಿಸಿದೆ.



ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಹೆಚ್.ಬಿ.ಆರ್. 1ನೇ ಬ್ಲಾಕ್, 2ನೇ ಬ್ಲಾಕ್, ಯಾಸಿನ್‌ನಗರ, ಸುಭಾಶ್ ಲೇಔಟ್, ರಾಮ ದೇವಸ್ಥಾನದ ರಸ್ತೆ, ರಾಮದೇವ್ ಗಾರ್ಡನ್, ಕೃಷ್ಣ ರೆಡ್ಡಿ ಲೇಔಟ್, ಟೀಚರ್ಸ್ ಕಾಲೊನಿ, ಹೆಚ್.ಬಿ.ಆರ್. 3ನೇ ಬ್ಲಾಕ್, ಶಿವರಾಮಯ್ಯ ಲೇಔಟ್, ರಿಂಗ್ ರಸ್ತೆ, ಸರ್ವೀಸ್ ರಸ್ತೆ, ಕೆ.ಕೆ. ಹಳ್ಳಿ ಗ್ರಾಮ, ಸಿ.ಎಂ. ಆರ್.ರಸ್ತೆ, ಕಮ್ಮನಹಳ್ಳಿ ಮುಖ್ಯರಸ್ತೆ, ರಾಮಯ್ಯ ಲೇಔಟ್, ಲಿಂಗರಾಜಪುರ, ಜಾನಕಿರಾಮ್ ಲೇಔಟ್, ಕನಕದಾಸ ಲೇಔಟ್, ಗೋವಿಂದಪುರ ಮುಖ್ಯರಸ್ತೆ, ರಶದ್‌ನಗರ, ಫರೀದಾ ಶೂ ಫ್ಯಾಕ್ಟರಿ, ಅರೇಬಿಕ್ ಕಾಲೇಜ್, ಕೆ.ಜಿ.ಹಳ್ಳಿ, ಗೋವಿಂದಪುರ ಗ್ರಾಮ, ಕೆ.ಜಿ.ಹಳ್ಳಿ, ವಿನೋಬನಗರ, ಬಿ.ಎಂ.ಲೇಔಟ್, ಆರೋಗ್ಯಮ್ಮ ಲೇಔಟ್, ಕಾವೇರಿ ಗಾರ್ಡನ್ ಮತ್ತು ಸುತ್ತಲಿನ ಪ್ರದೇಶಗಳು.

ಹೆಚ್.ಬಿ.ಆರ್. ಲೇಔಟ್ 4ನೇ ಬ್ಲಾಕ್, ಯಾಸಿನ್‌ನಗರ, 5ನೇ ಬ್ಲಾಕ್, ಹೆಚ್.ಬಿ.ಆರ್. ನಾಗವಾರ ಮುಖ್ಯರಸ್ತೆ, ನಾಗವಾರ, ಎನ್.ಜೆ.ಕೆ. ಗಾರ್ಮೆಂಟ್ಸ್, ಬೈರನಕುಂಟೆ, ಕುಪ್ಪುಸ್ವಾಮಿ ಲೇಔಟ್, ಹೆಚ್.ಕೆ.ಬಿ.ಕೆ ಕಾಲೇಜ್, 4ನೇ ಮತ್ತು 5ನೇ ಹೆಚ್.ಬಿ.ಆರ್. ಲೇ ಔಟ್, ವಿದ್ಯಾಸಾಗರ, ಥಣಿಸಂದ್ರ, ಆರ್.ಕೆ. ಹೆಗಡೆನಗರ, ಕೆ.ನಾರಾಯಣಪುರ, ಎನ್.ಎನ್.ಹಳ್ಳಿ, ಬಾಲಾಜಿ ಲೇಔಟ್, ಫೇಸ್ 1 ರಿಂದ 3, ರೈಲ್ವೆ ಮೆನ್ಸ್ ಲೇಔಟ್, ಬಿ.ಡಿ.ಎಸ್. ಲೇಔಟ್, ಸೆಂಟ್ರಲ್ ಎಕ್ಸೈಸ್, ಕೆ.ಕೆ. ಹಳ್ಳಿ, ಹೆಣ್ಣೂರು ಮುಖ್ಯರಸ್ತೆ, ಹೆಚ್.ಆರ್.ಬಿ.ಆರ್. 3ನೇ ಬ್ಲಾಕ್,ಆಯಿಲ್ ಮಿಲ್ ರಸ್ತೆ, ಅರವಿಂದನಗರ, ನೆಹರು ರಸ್ತೆ, ಕಮ್ಮನಹಳ್ಳಿ ಮುಖ್ಯರಸ್ತೆ, ಬೆಥೆಲ್‌ಸ್ಟ್ರೀಟ್, ಎ.ಕೆ.ಕಾಲೋನಿ, ಹೆಚ್.ಆರ್.ಬಿ.ಆರ್. 1ನೇ ಬ್ಲಾಕ್, 80 ಅಡಿರಸ್ತೆ, ಸಿ.ಎಂ.ಆರ್. ರಸ್ತೆ, ಕಾರ್ಲೆ, ಹೆಗಡೆನಗರ, ನಾಗೇನಹಳ್ಳಿ, ಪೊಲೀಸ್ ಕ್ವಾರ್ಟರ್ಸ್, ಕೆಂಪೇಗೌಡ ಲೇಔಟ್, ಶಬರೀನಗರ, ಕೆ.ಎಂ.ಟಿ. ಲೇಔಟ್, ಭಾರತೀಯ ಸಿಟಿ, ನೂರ್ ನಗರ ಭಾರತ್ ಮಾತ ಲೇಔಟ್, ಹಿದಾಯತ್ ನಗರ, ಲಿಡ್ಕರ್ ಕಾಲೊನಿ., ಬಿ.ಎಂ.ಆರ್. ಸಿ.ಎಲ್, ಗಾಂಧಿನಗರ, ಕುಶಾಲನಗರ, ಶಾಂಪುರ ಮೇನ್ ರೋಡ್ ಸುತ್ತಮುತ್ತಲಿನ ಪ್ರದೇಶಗಳು.

ದರೋಡೆಗೆ ಯತ್ನ

ಕುಂದಾಪುರ (ಉಡುಪಿ): ಮಣೂರು ಗ್ರಾಮದ ಕವಿತಾ ಎಂಬುವವರ ಮನೆಗೆ ಐಟಿ ಅಧಿಕಾರಿಗಳ ಸೋಗಿನಲ್ಲಿ ದರೋಡೆಗೆ ಯತ್ನಿಸಿದ್ದ ಪ್ರಕರಣಕ್ಕೆ ಸಂಬಂಧಿಸಿ ಇಬ್ಬರನ್ನು ಬಂಧಿಸಲಾಗಿದೆ.

ನಗರದಲ್ಲಿ ಇಂದು

ಭಾರತದ ಬೃಹತ್ ಕೃಷಿ ಮತ್ತು ಆಹಾರ ಉದ್ಯಮ ಪ್ರದರ್ಶನ 'ಅಗ್ರಿಟೆಕ್ ಇಂಡಿಯಾ 2024' ಮೇಳ ಉದ್ಘಾಟನೆ: ಅತಿಥಿಗಳು: ಶಾಲಿನಿ ರಜನೀಶ್, ವಿನಿತಾ ಸುಧಾಂಶು, ಪಿ.ಐ. ಶ್ರೀವಿದ್ಯಾ, ಕೆ. ರತ್ನಪ್ರಭಾ, ಗೋಕುಲ್ ಪಟ್ನಾಯಕ್, ಶ್ರೀದೇವಿ ಅನ್ನಪೂರ್ಣ ಸಿಂಗ್, ಸಂಜಯ್ ದವೆ, ಸ್ಥಳ: ಅಂತಾರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರ (ಬಿಐಇಸಿ), ತುಮಕೂರು ರಸ್ತೆ, ಬೆಳಿಗ್ಗೆ 10


ಶಾಸ್ತ್ರೀಯ ಕನ್ನಡ ಸ್ಥಾನಮಾನ ಹಾಗೂ ಕನ್ನಡ ಜಾಗೃತಿ ಕಾರ್ಯಾಗಾರ: ಬೆಳಿಗ್ಗೆ 10ಕ್ಕೆ ಉದ್ಘಾಟನೆ: ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಅತಿಥಿಗಳು: ಸಂತೋಷ್ ಹಾನಗಲ್, ವಿದ್ಯಾ ಶಿವಣ್ಣವರ್, ಎಸ್. ರಾಮಲಿಂಗೇಶ್ವರ, ಮಧ್ಯಾಹ್ನ 12.15ಕ್ಕೆ ಗೋಷ್ಠಿ 1: 'ಶಾಸ್ತ್ರೀಯ ಕನ್ನಡ ಸಾಹಿತ್ಯಾಧ್ಯಯನದ ಅವಶ್ಯಕತೆ' ಉಪನ್ಯಾಸ: ಆರ್ವಿಯಸ್ ಸುಂದರಂ, ಅತಿಥಿಗಳು: ವ.ಚ. ಚನ್ನೇಗೌಡ, ಹಾ.ವೀ. ಮಂಜುಳಾ ಶಿವಾನಂದ, ಮಧ್ಯಾಹ್ನ 2.15ಕ್ಕೆ ಗೋಷ್ಠಿ 2: 'ಪಂಪನ ಕಾವ್ಯದ ಪ್ರಸ್ತುತತೆ ಮತ್ತು ಕನ್ನಡ ಸಿನಿಮಾ, ಧಾರಾವಾಹಿ, ಹರಿಕಥೆಯಲ್ಲಿ ಮೌಲ್ಯಗಳು' ಉಪನ್ಯಾಸ: ಬಿ.ಎನ್. ಮಧು, ನಗೆಮಳೆರಾಜ ಚಂದ್ರಾಜು, ಅತಿಥಿಗಳು: ಬಿ.ವಿ. ಲವಕುಮಾರ್, ಕೆ.ಎಂ. ರೇವಣ್ಣ, ಶಾಂತಿವಾಸು, ಆಯೋಜನೆ: ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಸ್ಥಳ: ಶೇಷಾದ್ರಿಪುರ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್ ಸಭಾಂಗಣ, ಶೇಷಾದ್ರಿಪುರ

ಯುನೈಟೆಡ್ ಇನ್ನೋವೇಷನ್ಸ್ ಪ್ರಾಜೆಕ್ಟ್ ಫಾರ್ ವಾಟರ್ ಸೆಕ್ಯೂರಿಟಿ ಇನ್ ಬೆಂಗಳೂರು ಸಿಟಿ ಯೋಜನೆಗೆ ಚಾಲನೆ, ಮಳೆ ನೀರು ಕೊಯ್ಲು ಜಾಗೃತಿ ಅಭಿಯಾನ, ವರುಣಮಿತ್ರ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ, 'ಬಾಗಿಲಿಗೆ ಬರಲಿದೆ ಕಾವೇರಿ ಸಂಪರ್ಕ' 110 ಹಳ್ಳಿಗಳಿಗೆ ಕಾವೇರಿ ಸಂಪರ್ಕ ಅಭಿಯಾನಕ್ಕೆ ಚಾಲನೆ: ಉದ್ಘಾಟನೆ: ಡಿ.ಕೆ. ಶಿವಕುಮಾರ್, ಆಯೋಜನೆ: ಬೆಂಗಳೂರು ಜಲಮಂಡಳಿ, ಸ್ಥಳ:ವಿಧಾನಸೌಧದ ಪೂರ್ವದ್ವಾರದ ಮೆಟ್ಟಿಲುಗಳ ಮುಂಭಾಗ, ಬೆಳಿಗ್ಗೆ 10

ಸ್ಕೂಲ್ ಸಿನಿಮಾ ಇಂಟರ್‌ನ್ಯಾಷನಲ್ ಫಿಲ್ಮ್ ಫೆಸ್ಟಿವಲ್: ಅತಿಥಿಗಳು: ಲೆಫ್ಟಿನೆಂಟ್ ಜನರಲ್ ಬಿ.ಕೆ. ರೆಪ್ಸ್‌ವಲ್, ಬ್ರಿಗೇಡಿಯರ್ ರೋಹಿತ್ ಶೇಥಿ, ಮಂಜು ಅಹ್ಲವತ್, ಇಸಬೆಲ್ಲೆ ಮೊರಿನ್, ಆಯೋಜನೆ: ಕೆ2 ಕಮ್ಯುನಿಕೇಶನ್, ಸ್ಥಳ: ಎಎಸ್‌ಸಿ ಸೆಂಟರ್ ಮತ್ತು ಕಾಲೇಜು, ಗೇಟ್ ನಂ.4, ನಾಗಶೆಟ್ಟಿಹಳ್ಳಿ, ಅಗ್ರಂ, ಬೆಳಿಗ್ಗೆ 11

ಅಂತರರಾಷ್ಟ್ರೀಯ ಜಾನಪದ ದಿನಾಚರಣೆಯ ಅಂಗವಾಗಿ ರಾಷ್ಟ್ರೀಯ ಜನಪದ ಸಿರಿ ಪ್ರಶಸ್ತಿ: ಅತಿಥಿಗಳು: ಬೇಲಿಮಠ ಶಿವಾನುಭವ ಚರಮೂರ್ತಿ ಶಿವರುದ್ರ ಸ್ವಾಮೀಜಿ, ಹಿ.ಚಿ. ಬೋರಲಿಂಗಯ್ಯ, ಜರಗನಹಳ್ಳಿ ಕಾಂತರಾಜು, ಆಯೋಜನೆ: ಜನಪದ ಸಿರಿ ದೇಸಿ ಚಾನಲ್, ಸ್ಥಳ: ಸುಚಿತ್ರ ಸಿನಿಮಾ ಮತ್ತು ಕಲ್ಚರಲ್ ಅಕಾಡೆಮಿ, ಬನಶಂಕರಿ, 2ನೇ ಹಂತ, ಮಧ್ಯಾಹ್ನ 3

ತಿಂಗಳ ನಾಟಕ ಸಂಭ್ರಮ: ಅಭಿನಯ: ನಟನ ಮೈಸೂರು, ನಾಟಕ: ಸ್ಥಾವರವೂ ಜಂಗಮ, ನಿರ್ದೇಶನ: ಮಂಡ್ಯ ರಮೇಶ್, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ಸಮುಚ್ಚಯ ಭವನ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30



ಅನಂತಪಥ ಸುವರ್ಣ ಸಂಚಿಕೆಯ ಅನಾವರಣ: ಬಿಡುಗಡೆ: ಬಾಬು ಕೃಷ್ಣಮೂರ್ತಿ, ಅಧ್ಯಕ್ಷತೆ: ಪಿ.ವಿ. ಕೃಷ್ಣಭಟ್ಟ, ಉಪಸ್ಥಿತಿ: ತೇಜಸ್ವಿನಿ ಅನಂತಕುಮಾರ್, ಟಿ.ಎಸ್. ಗೋಪಾಲ್, ಆಯೋಜನೆ: ಅನಂತಕುಮಾರ್ ಪ್ರತಿಷ್ಠಾನ, ಸ್ಥಳ: ಅದಮ್ಯ ಚೇತನ, ಗವಿಪುರ, ಮುಖ್ಯರಸ್ತೆ, ಸಂಜೆ 4

ಕವಿಪ್ರಧಾನ ವೆಂಕಪ್ಪಯ್ಯ ಅವರ 'ಶ್ರೀರಾಮಕಥಾಮೃತ' ಕೃತಿ ಬಿಡುಗಡೆ ಕಾರ್ಯಕ್ರಮ: ಬಿಡುಗಡೆ: ಹಂಪ ನಾಗರಾಜಯ್ಯ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಅತಿಥಿಗಳು: ಆರ್. ಲಕ್ಷ್ಮೀನಾರಾಯಣ, ಪಿ.ವಿ. ನಾರಾಯಣ, ಆಯೋಜನೆ: ಪ್ರಧಾನ್ ಪ್ರಕಾಶನ, ಸ್ಥಳ: ಬಿಎಂಶ್ರೀ ಪ್ರತಿಷ್ಠಾನ, 3ನೇ ಮುಖ್ಯರಸ್ತೆ, ಎನ್.ಆರ್ ಕಾಲೊನಿ, ಸಂಜೆ 5

ಬೆಂಗಳೂರು ಪೌರಾಣಿಕ ಯಕ್ಷ ಹಬ್ಬ: 'ಕುಶ ಲವ–ಶ್ರೀನಿವಾಸ ಕಲ್ಯಾಣ' ಯಕ್ಷಗಾನ ಪ್ರದರ್ಶನ: ಆಯೋಜನೆ: ಮಹಾಗಣಪತಿ ಯಕ್ಷಗಾನ ಮಂಡಳಿ ನಿಡ್ಲೆ, ಸ್ಥಳ: ಧರ್ಮಶಾಸ್ತ ಸಭಾಂಗಣ ಅಯ್ಯಪ್ಪ ದೇವಸ್ಥಾನ, ವಿಜಯ ಬ್ಯಾಂಕ್ ಲೇಔಟ್, ಬಿಳೇಕಹಳ್ಳಿ, ಸಂಜೆ 5

ಕಣ್ಣಿನ ಆರೋಗ್ಯದ ಬಗ್ಗೆ ಉಪನ್ಯಾಸ: ಉಪನ್ಯಾಸಕರು: ಗೋವಿಂದಯ್ಯ ಎಚ್., ಅತಿಥಿಗಳು ಎಂ.ಸಿ. ನರೇಂದ್ರ, ಮಹಾಂತೇಶ ದೇಗಾವಿ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘ, ಹೊಂಬೇಗೌಡ ನಗರ, ಸಂಜೆ 6.30

ಕಲಿಯುಗ ಕಲ್ಪತರು ರಾಘವೇಂದ್ರತೀರ್ಥರು– ಧಾರ್ಮಿಕ ಪ್ರವಚನ: ಕಲ್ಯಾ ಕಾಂತಾಚಾರ್ಯ, ಆಯೋಜನೆ:ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಸಂಜೆ 6.30

ರಾಘವೇಂದ್ರ ತೀರ್ಥ ಗುರುಗಳ 353ನೇ ಆರಾಧನ ಪಂಚರಾತ್ರೋತ್ಸವ ಪ್ರಯುಕ್ತ ಭರತನಾಟ್ಯ: ಆಯೋಜನೆ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಶೇಷಾದ್ರಿಪುರ, ರಾತ್ರಿ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ನೃಪತುಂಗ ವಿಶ್ವವಿದ್ಯಾಲಯದ ಮೊದಲ ಘಟಿಕೋತ್ಸವ

ಯುಜಿಸಿ ಅಧ್ಯಕ್ಷರ ಪುರಾಣ ಪ್ರವಚನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ನೃಪತುಂಗ ವಿಶ್ವವಿದ್ಯಾಲಯದ ಮೊದಲ ಘಟಿಕೋತ್ಸವ ಉದ್ದೇಶಿಸಿ ಮಾತನಾಡಿದ ಯುಜಿಸಿ ಅಧ್ಯಕ್ಷ ಪ್ರೊ. ಮಾಮಿದಾಳ ಜಗದೀಶ್ ಕುಮಾರ್, ಭಾಷಣದುದ್ದಕ್ಕೂ ರಾಮಾಯಣ, ಮಹಾಭಾರತದ ಪಾತ್ರ ಮತ್ತು ಪ್ರಸಂಗಗಳನ್ನು ಉಲ್ಲೇಖಿಸಿ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

'ರಾಮ ತನ್ನ 16–17ನೇ ವಯಸ್ಸಿನಲ್ಲಿ ತಾನು ಯಾರು ಎಂಬ ಪ್ರಶ್ನೆಗೆ ಉತ್ತರ ಹುಡುಕಲು ಮುಂದಾದ. ನೀವೂ ಹಾಗೆಯೇ ಹುಡುಕಾಟ ನಡೆಸಬೇಕು. ಭವಿಷ್ಯ ಹೇಗಿರಬೇಕು ಎಂಬ ಪ್ರಶ್ನೆ ನಿಮ್ಮ ಮುಂದಿರಬೇಕು. 2050ರ ವೇಳೆಗೆ ವಿಶ್ವದ ಜನಸಂಖ್ಯೆ 900 ಕೋಟಿ ದಾಟಲಿದೆ. ಈಗಿರುವ ಸಂಪನ್ಮೂಲದಲ್ಲೇ ಅಷ್ಟೂ ಜನ ಬದುಕಬೇಕಾದ ಸವಾಲು ಎದುರಾಗುತ್ತದೆ. ಅಂತಹ ಸವಾಲುಗಳಿಗೆ ಪರಿಹಾರ ಹುಡುಕುವ ಅವಕಾಶ ನಿಮ್ಮೆದುರು ಇದೆ' ಎಂದರು.

'ಭಗೀರಥ ಹಲವು ಪ್ರಯತ್ನದ ನಂತರ ಭೂಮಿಗೆ ಗಂಗೆಯ ತಂದ. ಅದೇ ರೀತಿ ಸವಾಲುಗಳನ್ನು ಮೈಮೇಲೆ ಎಳೆದುಕೊಳ್ಳುವುದನ್ನು ವಿದ್ಯಾರ್ಥಿಗಳು ರೂಢಿಸಿಕೊಳ್ಳಬೇಕು. ಹಲವು ವೈಫಲ್ಯಗಳ ನಂತರ ಪ್ರತಿಫಲ ದೊರೆಯುತ್ತದೆ' ಎಂದರು.

'ಲಂಕೆಗೆ ಸಮುದ್ರ ದಾಟುವುದು ಹೇಗೆ ಎಂದು ಹನುಮಂತ ಯೋಚನೆಯಲ್ಲಿದ್ದ. ಅವನಲ್ಲಿ ಸಮುದ್ರ ದಾಟುವ ಶಕ್ತಿ ಇದೆ ಎಂದು ಪ್ರೋತ್ಸಾಹಿಸಿದ್ದು ಜಾಂಬವಂತ. ಹೀಗೆ ವಿದ್ಯಾರ್ಥಿಗಳಿಗೆ ಅವರಲ್ಲಿನ ಶಕ್ತಿಯ ಅರಿವನ್ನು ಮಾಡಿಸುವ ಕೆಲಸ ವಿಶ್ವವಿದ್ಯಾಲಯಗಳು, ಶಿಕ್ಷಕರು ದುಡಿಯಬೇಕು' ಎಂದರು.

ಕೇಂದ್ರದ ರ‍್ಯಾಂಕಿಂಗ್ ಪ್ರಾಮಾಣಿಕವೇ: ಸಚಿವ ಸುಧಾಕರ್

ಕೇಂದ್ರ ಸರ್ಕಾರ ನೀಡುತ್ತಿರುವ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳ ಶ್ರೇಯಾಂಕ ಚೌಕಟ್ಟಿನ (ಎನ್‌ಐಆರ್‌ಎಫ್) ರ‍್ಯಾಂಕ್ ಬಗ್ಗೆ ಹಲವು ಅನುಮಾನಗಳಿವೆ. ಈ ಅನುಮಾನಗಳ ಬಗ್ಗೆ ಯುಜಿಸಿ ಅಧ್ಯಕ್ಷರು ಗಮನ ನೀಡಬೇಕು ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಹೇಳಿದರು.

ಘಟಿಕೋತ್ಸವದ ವೇದಿಕೆಯಲ್ಲಿದ್ದ ಯುಜಿಸಿ ಅಧ್ಯಕ್ಷ ಜಗದೀಶ್ ಕುಮಾರ್ ಅವರನ್ನು ಉದ್ದೇಶಿಸಿ ಮಾತನಾಡಿದ ಸಚಿವರು, 'ಈಚಿನ ರ‍್ಯಾಂಕಿಂಗ್ ವರದಿ ಗಮನಿಸಿದರೆ ಶ್ರೇಯಾಂಕ ನೀಡುವಲ್ಲಿ ಗುಣಮಟ್ಟವನ್ನು ಕಡೆಗಣಿಸಿ, ಸಾಂಖ್ಯಿಕ ಅಭಿವೃದ್ಧಿಗೆ ಮಣೆ ಹಾಕಿರುವುದು ಎದ್ದು ಕಾಣುತ್ತದೆ. ಖಾಸಗಿ ಸಂಸ್ಥೆಗಳ ರ‍್ಯಾಂಕ್ ಹೆಚ್ಚಳವಾಗಿದ್ದರೆ, ಸರ್ಕಾರಿ ವಿಶ್ವವಿದ್ಯಾಲಯಗಳ ರ‍್ಯಾಂಕ್ ಕುಸಿದಿದೆ. ಖಾಸಗಿ ವಿ.ವಿ.ಗಳು ನಿಜಕ್ಕೂ ಸುಧಾರಿಸಿವೆಯೇ? ರ‍್ಯಾಂಕ್ ನೀಡುವಲ್ಲಿ ಪರಿಗಣಿಸಿದ ಮಾನದಂಡಗಳೇನು? ಈ ರ‍್ಯಾಂಕಿಂಗ್ ವ್ಯವಸ್ಥೆ ಪ್ರಾಮಾಣಿಕವೇ' ಎಂದು ಪ್ರಶ್ನಿಸಿದರು.

'ಶಿಕ್ಷಣ ನೀತಿಗಳನ್ನು ರೂಪಿಸುವಾಗ ಸಾಮಾಜಿಕ ಸ್ತರವಿನ್ಯಾಸ, ಆರ್ಥಿಕ ಸ್ಥಿತಿ, ಶ್ರೀಮಂತರು–ಬಡವರ ನಡುವಣ ಅಂತರ, ಎಲ್ಲರಿಗೂ ಕೈಗೆಟಕುವ ದರದಲ್ಲಿ ಗುಣಮಟ್ಟದ ಶಿಕ್ಷಣ ಮೊದಲಾದ ಸಂಗತಿಗಳನ್ನು ಗಮನದಲ್ಲಿ ಇರಿಸಿಕೊಳ್ಳಬೇಕು. ಆದರೆ ಇದಕ್ಕೆ ತದ್ವಿರುದ್ಧವಾಗಿ ಆಗುತ್ತಿದೆ. ಗುಣಮಟ್ಟದ ಶಿಕ್ಷಣವನ್ನು ಬದಿಗೊತ್ತಿ, ಸಂಖ್ಯೆಗಳ ಹಿಂದೆ ಬಿದ್ದು ಖಾಸಗಿ ವಿಶ್ವವಿದ್ಯಾಲಯಗಳಿಗೆ ಮಾನ್ಯತೆ ನೀಡಲಾಗುತ್ತಿದೆ. ಇದರಿಂದ ಸರ್ಕಾರಿ ವಿಶ್ವವಿದ್ಯಾಲಯಗಳ ಅಸ್ತಿತ್ವಕ್ಕೆ ಧಕ್ಕೆಯಾಗುತ್ತಿದೆ. ಈ ಅಪಾಯವನ್ನು ಯುಜಿಸಿ ಮುಖ್ಯಸ್ಥರು ಮನಗಾಣಬೇಕು' ಎಂದರು.

ಸುದ್ದಿಯಲ್ಲಿರುವ ಟ್ರಯಾಂಗಲ್

ಯು.ಟಿ.ಆಯಿಷಾ ಫರ್ಝಾನ

ಯುಪಿಎಸ್‌ಸಿ-ಪ್ರಿಲಿಮ್ಸ್, ಕೆಪಿಎಸ್‌ಸಿ-ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ - 2, ಎಲ್ಲಾ ಇತರ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕೇಳುವ ಸಾಮಾನ್ಯಜ್ಞಾನಕ್ಕೆ ಸಂಬಂಧಿಸಿದ ಮಾಹಿತಿ.

ವೀಮರ್ ಟ್ರಯಾಂಗಲ್ ಶೃಂಗಸಭೆಯು ಇತ್ತೀಚೆಗೆ ಬರ್ಲಿನ್‌ನಲ್ಲಿ ಮ್ಯಾಕ್ರನ್, ಸ್ಕೋಲ್ಜ್ ಮತ್ತು ಟಸ್ಕ್ ನಾಯಕರ ಉಪಸ್ಥಿತಿಯಲ್ಲಿ ಸಭೆ ಸೇರಿತು. ಸಭೆಯಲ್ಲಿ, ಉಕ್ರೇನ್‌ನಲ್ಲಿ ರಷ್ಯಾ ನಡೆಸುತ್ತಿರುವ ಯುದ್ಧಕ್ಕೆ ಯುರೋಪ್‌ನ ಪ್ರತಿಕ್ರಿಯೆಯ ಕುರಿತು ನಾಯಕರು ತಮ್ಮ ಒಗ್ಗಟ್ಟಿನ ನಿಲುವನ್ನು ಪ್ರದರ್ಶಿಸಿದರು.

ವೀಮರ್ ಟ್ರಯಾಂಗಲ್



- ಫ್ರೆಂಚ್‌ನಲ್ಲಿ 'ಟ್ರಯಾಂಗಲ್ ಡಿ ವೀಮರ್', ಜರ್ಮನ್‌ನಲ್ಲಿ 'ವೈಮರೆರ್ ಡ್ರೀಕ್' ಮತ್ತು ಪೋಲಿಷ್‌ನಲ್ಲಿ 'ಟ್ರೋಜ್‌ಕಾಟ್ ವೀಮಾರ್ಸ್ಕಿ' ಎಂದು ಕರೆಯಲಾಗುವ ವೀಮರ್ ಟ್ರಯಾಂಗಲ್, 1991ರಲ್ಲಿ ಜರ್ಮನ್ ನಗರ ವೀಮರ್‌ನಲ್ಲಿ ಸ್ಥಾಪನೆಗೊಂಡ ಪ್ರಾದೇಶಿಕ ಒಕ್ಕೂಟವಾಗಿದೆ.
- ಈ ಒಕ್ಕೂಟವು ಫ್ರಾನ್ಸ್, ಜರ್ಮನಿ ಮತ್ತು ಪೋಲೆಂಡ್ ಅನ್ನು ಒಳಗೊಂಡಿದ್ದು ಗಡಿಯಾಚೆಗಿನ ಮತ್ತು ಯುರೋಪಿಯನ್ ವಿಷಯಗಳಲ್ಲಿ ಸಹಕಾರವನ್ನು ಬೆಳೆಸುವ ಗುರಿಯನ್ನು ಹೊಂದಿದೆ.

ಉದ್ದೇಶ ಮತ್ತು ಚಟುವಟಿಕೆಗಳು : ವೀಮರ್ ಟ್ರಯಾಂಗಲ್ ಪ್ರಾಥಮಿಕವಾಗಿ ಮೇಲಿನ ಮೂರು ರಾಷ್ಟ್ರಗಳ ನಾಯಕರು ಮತ್ತು ವಿದೇಶಾಂಗ ಸಚಿವರ ನಡುವಿನ ಶೃಂಗಸಭೆಯ ಸಭೆಗಳ ಮೂಲಕ ಕಾರ್ಯನಿರ್ವಹಿಸುತ್ತದೆ.

- ಈ ಸಹಯೋಗವು ಅಂತರ-ಸಂಸದೀಯ ಸಂಪರ್ಕಗಳು, ಮಿಲಿಟರಿ ಸಹಕಾರ ಮತ್ತು ವೈಜ್ಞಾನಿಕ ಮತ್ತು ಸಾಂಸ್ಕೃತಿಕ ವಿನಿಮಯಗಳನ್ನು ಹೆಚ್ಚಿಸುವುದರ ಕಡೆಗೆ ಗಮನಹರಿಸುತ್ತದೆ.

ಅಫಾರ್ (AFAR) ಟ್ರಯಾಂಗಲ್

- ಅಫಾರ್ ಟ್ರಯಾಂಗಲ್ ಅನ್ನು ಅಫಾರ್ ಡಿಪ್ರೆಷನ್ ಅಥವಾ ಅಫಾರ್ ಟ್ರಿಪಲ್ ಜಂಕ್ಷನ್ ಎಂದೂ ಕರೆಯುತ್ತಾರೆ. ಇದು ಆಫ್ರಿಕಾದ ಭೂಶಿರ ಕವಲಿನಲ್ಲಿದೆ. ಇದು ಇಥಿಯೋಪಿಯಾ, ಎರಿಟ್ರಿಯಾ ಮತ್ತು ಜಿಬೌಟಿಯಾದ್ಯಂತ ವ್ಯಾಪಿಸಿದ್ದು, ಈ ಪ್ರದೇಶವು ಆಫ್ರಿಕನ್, ಅರೇಬಿಯನ್ ಮತ್ತು ಸೊಮಾಲಿ ಟೆಕ್ಟೋನಿಕ್ ಪ್ಲೇಟ್‌ಗಳ(ಭೂ ಫಲಕಗಳು) ಭಾಗದಲ್ಲಿ ಸಂಧಿಸುತ್ತದೆ.

ಭೂವೈಜ್ಞಾನಿಕ ಮಹತ್ವ : ಅಫಾರ್ ಟ್ರಯಾಂಗಲ್ ಭೂಮಿಯ ಮೇಲಿನ ಅತ್ಯಂತ ಭೌಗೋಳಿಕವಾಗಿ ಸಕ್ರಿಯವಾಗಿರುವ ಪ್ರದೇಶಗಳಲ್ಲಿ ಒಂದಾಗಿದೆ. ಇದು ಗ್ರೇಟ್ ರಿಫ್ಟ್ ವ್ಯಾಲಿ ಸೇರಿ ಜ್ವಾಲಾಮುಖಿ ಚಟುವಟಿಕೆ ಮತ್ತು ಬಿರುಕು ಕಣಿವೆಗಳ ಸಂಕೀರ್ಣ ಜಾಲದಿಂದ ರೂಪುಗೊಂಡಿದೆ. ಇದು ಪೂರ್ವ ಆಫ್ರಿಕನ್ ಕಣಿವೆ ಭಾಗದಲ್ಲಿದೆ. ಇದು ಆಫ್ರಿಕನ್ ಖಂಡವನ್ನು ಎರಡು ಭಾಗಗಳಾಗಿ ವಿಭಜಿಸುತ್ತದೆ.

ವೈಶಿಷ್ಟ್ಯಗಳು:

ದನಕಿಲ್ ಡಿಪ್ರೆಷನ್(ತಗ್ಗು ಪ್ರದೇಶ): ಇದು ಭೂಮಿಯ ಮೇಲಿನ ಅತ್ಯಂತ ಬಿಸಿಯಾದ ಮತ್ತು ತಳಭಾಗದಲ್ಲಿರುವ ಸ್ಥಳಗಳಲ್ಲಿ ಒಂದಾಗಿದೆ. ಅತಿ ತಾಪಮಾನ, ಲವಣಭೂಮಿಗಳು, ಜ್ವಾಲಾಮುಖಿ ಕುಳಿಗಳು ಮತ್ತು ರೋಚಕವಾದ ಬಿಸಿನೀರಿನ ಬುಗ್ಗೆಗಳಂತಹಾ ವಿಶಿಷ್ಟ ಭೂವೈಜ್ಞಾನಿಕ ರಚನೆಗಳನ್ನು ಹೊಂದಿದೆ. ನೀರು ತಕ್ಷಣ ಆವಿಯಾಗುವ ತಾಪಮಯ ಪ್ರದೇಶವಿದು.

ಎರ್ಟಾ ಅಲೆ ಜ್ವಾಲಾಮುಖಿ: ನಿರಂತರವಾಗಿ ಹರಿಯುವ ಲಾವಾ ಸರೋವರಕ್ಕೆ ಹೆಸರುವಾಸಿಯಾದ ಎರ್ಟಾ ಅಲೆ ಜ್ವಾಲಾಮುಖಿಯು ವಿಶ್ವದ ಕೆಲವು ಪ್ರಮುಖ ಜ್ವಾಲಾಮುಖಿಗಳಲ್ಲಿ ಒಂದಾಗಿದೆ. ಅದರ ಶಿಖರ ಕುಳಿಯಲ್ಲಿ ನಿರಂತರವಾಗಿ ಸಕ್ರಿಯವಾಗಿರುವ ಲಾವಾ ಸರೋವರವೇ ಅಡಗಿದೆ.

ಸಂಸ್ಕೃತಿ : ಈ ಪ್ರದೇಶವು ಅಲ್ಲಿನ ಸ್ಥಳೀಯ ಸಮುದಾಯವಾದ ಅಫಾರ್ ಜನರಿಗೆ ನೆಲೆಯಾಗಿದ್ದು ಆ ಜನರು ತಲೆಮಾರುಗಳಿಂದಲೂ ಆ ಕಠಿಣಮಯ ದುರ್ಗಮ ಪರಿಸರದಲ್ಲಿ ಹೊಂದಿಕೊಂಡು ಬಾಳುತ್ತಿದ್ದಾರೆ. ಅಫಾರ್ ಭಾಷೆಯನ್ನಾಡುವ ಆ ಜನರು ಉಪ್ಪು ಗಣಿಗಾರಿಕೆಯನ್ನು ಮಾಡುತ್ತಾರೆ.

ವೈಜ್ಞಾನಿಕ ಹಿನ್ನೆಲೆ: ಅಫಾರ್ ಟ್ರಯಾಂಗಲ್ ಅದರ ಸಕ್ರಿಯವಾದ ಭೂಫಲಕಗಳು ಮತ್ತು ಸಮೃದ್ಧ ಪಳೆಯುಳಿಕೆ ನಿಕ್ಷೇಪಗಳಿಂದಾಗಿ ಭೂವಿಜ್ಞಾನಿಗಳು ಮತ್ತು ಪ್ರಾಗ್ ಜೀವಶಾಸ್ತ್ರಜ್ಞರಿಗೆ ಅಪಾರ ಕುತೂಹಲದ ತಾಣವಾಗಿದೆ. ಇದು 'ಲೂಸಿ'(ಆಸ್ಟ್ರಲೋಪಿಥೆಕಸ್ ಅಫರೆನ್ಸಿಸ್) ಯಂತಹ ಆರಂಭಿಕ ಕಾಲದ ಮಾನವನ ಪಳೆಯುಳಿಕೆಗಳ ಅವಿಷ್ಕಾರಗಳು ಲಭಿಸಿದೆ.

ಲಿಥಿಯಂ ಟ್ರಯಾಂಗಲ್

ಇದು ದಕ್ಷಿಣ ಅಮೆರಿಕದಲ್ಲಿದೆ. ಅರ್ಜೆಂಟೀನಾ, ಬೊಲಿವಿಯಾ ಮತ್ತು ಚಿಲಿಯ ಭಾಗಗಳನ್ನು ಒಳಗೊಂಡಿದ್ದು ಇದು ಆಂಡೀಸ್ ಪರ್ವತ ಶ್ರೇಣಿಯೊಳಗೆ ನೆಲೆಗೊಂಡಿದೆ. ಲಿಥಿಯಂನ ಪ್ರಮುಖ ನಿಕ್ಷೇಪಗಳನ್ನು ಹೊಂದಿದೆ. ಲಿಥಿಯಂ ಎಲೆಕ್ಟ್ರಿಕ್ ವಾಹನಗಳು, ಎಲೆಕ್ಟ್ರಾನಿಕ್ಸ್ ಮತ್ತು ನವೀಕರಿಸಬಹುದಾದ ಶಕ್ತಿ ಸಂಗ್ರಹ ವ್ಯವಸ್ಥೆಗಳಿಗೆ ಪುನರ್ಭರ್ತಿ ಮಾಡಬಹುದಾದ ಬ್ಯಾಟರಿಗಳಲ್ಲಿ ಬಳಸಲಾಗುವ ನಿರ್ಣಾಯಕ ಅಂಶವಾಗಿದೆ. ಈ ಪ್ರದೇಶವು ಪ್ರಪಂಚದ ಅರ್ಧದಷ್ಟು ಲಿಥಿಯಂ ನಿಕ್ಷೇಪಗಳನ್ನು ಹೊಂದಿದೆ ಎಂದು ಅಂದಾಜಿಸಲಾಗಿದೆ.

ಪ್ರಮುಖ ಲಕ್ಷಣಗಳು : ಲಿಥಿಯಂ ಟ್ರಯಾಂಗಲ್ ಬೊಲಿವಿಯಾದ ಹೆಸರಾಂತ ಲವಣ ಭೂಮಿಯಾದ 'ಸಲಾರ್ ಡಿ ಯುಯುನಿ'ಯನ್ನು ಒಳಗೊಂಡಿದೆ. ಇದು ವಿಶ್ವದ ಅತಿದೊಡ್ಡ ಲವಣಭೂಮಿ ಮತ್ತು ಲಿಥಿಯಂ-ಸಮೃದ್ಧ ಉಪ್ಪುನೀರಿನ ಪ್ರಮುಖ ಮೂಲವಾಗಿದೆ.

ಆಂಡಿಯನ್ ಪರ್ವತ ಶ್ರೇಣಿ : ಆಂಡಿಯನ್ ಪರ್ವತ ಶ್ರೇಣಿಯು ಲಿಥಿಯಂ-ಸಮೃದ್ಧ ಲವಣ ನಿಕ್ಷೇಪಗಳನ್ನು ಹೊಂದಿದೆ.

ಸವಾಲುಗಳು ಮತ್ತು ಅವಕಾಶಗಳು : ಲಿಥಿಯಂ ಟ್ರಯಾಂಗಲ್ ಆರ್ಥಿಕ ಅಭಿವೃದ್ಧಿಗೆ ಮತ್ತು ಶುದ್ಧ ಶಕ್ತಿಯತ್ತ ಜಾಗತಿಕ ಪರಿವರ್ತನೆಗೆ ಅಪಾರ ಅವಕಾಶಗಳನ್ನು ಒದಗಿಸುತ್ತದೆ. ಆದರೆ ಅದೇ ಸಮಯದಲ್ಲಿ ಸುಸ್ಥಿರ ಪರಿಸರ, ಸ್ಥಳೀಯ ಹಕ್ಕುಗಳು ಮತ್ತು ಸಾಮಾಜಿಕ ಸಮಾನತೆಗೆ ಸಂಬಂಧಿಸಿದ ಸವಾಲುಗಳನ್ನು ಎದುರಿಸುತ್ತಿದೆ. ಜವಾಬ್ದಾರಿಯುತ ಮಾದರಿಯಲ್ಲಿ ಲಿಥಿಯಂ ನಿಕ್ಷೇಪಗಳನ್ನು ಹೊರತೆಗೆಯುವ ಅಭ್ಯಾಸಗಳು ಮತ್ತು ಸ್ಥಳೀಯ ಸಮುದಾಯಗಳ ನಡುವೆ ಪ್ರಯೋಜನಗಳ ನ್ಯಾಯಯುತ ವಿತರಣೆಯ ಬಗ್ಗೆ ತೀವ್ರ ಚರ್ಚೆಗಳು ನಡೆಯುತ್ತಿವೆ.

ಗೋಲ್ಡನ್ ಟ್ರಯಾಂಗಲ್

ಗೋಲ್ಡನ್ ಟ್ರಯಾಂಗಲ್ ಆಗ್ನೇಯ ಏಷ್ಯಾದಲ್ಲಿ ಮ್ಯಾನ್ಮಾರ್, ಲಾವೋಸ್ ಮತ್ತು ಥಾಯ್‌ಲೆಂಡ್ ಭಾಗಗಳನ್ನು ಒಳಗೊಂಡಿರುವ ಪ್ರದೇಶವನ್ನು ಸೂಚಿಸುತ್ತದೆ. ಇದು ಐತಿಹಾಸಿಕವಾಗಿ ಅಫೀಮು ವ್ಯಾಪಾರಕ್ಕೆ ಹೆಸರುವಾಸಿಯಾದ ಪ್ರದೇಶವಾಗಿದೆ.

ಐತಿಹಾಸಿಕ ಮಹತ್ವ: ಗೋಲ್ಡನ್ ಟ್ರಯಾಂಗಲ್ 20ನೇ ಶತಮಾನದಲ್ಲಿ ಅಫೀಮು ಉತ್ಪಾದನೆ ಮತ್ತು ವ್ಯಾಪಾರದ ಪ್ರಮುಖ ಕೇಂದ್ರವಾಗಿ ಕುಖ್ಯಾತಿ ಗಳಿಸಿತು. ಜಾಗತಿಕ ಅಕ್ರಮ ಅಫೀಮು ಮಾರುಕಟ್ಟೆಗಳಿಗೆ ಉತ್ತೇಜನ ನೀಡಿತು. ವಿಶೇಷವಾಗಿ ಆ ಪ್ರದೇಶದಲ್ಲಿ ಸಂಘರ್ಷ ಮತ್ತು ಅಸ್ಥಿರತೆಯ ಅವಧಿಯಲ್ಲಿ ಇದು ಅಫೀಮು ಗಸಗಸೆ ಕೃಷಿಯ ಪ್ರಾಥಮಿಕ ಮೂಲವಾಗಿತ್ತು,

ಆಧುನಿಕ ಸಂದರ್ಭ : ಇತ್ತೀಚಿನ ದಶಕಗಳಲ್ಲಿ ಅಫೀಮು ಕೃಷಿ ಮತ್ತು ವ್ಯಾಪಾರವು ಇಳಿಮುಖವಾಗಿದ್ದರೂ, ಗೋಲ್ಡನ್ ಟ್ರಯಾಂಗಲ್ ಮಾದಕವಸ್ತು ಕಳ್ಳಸಾಗಣೆ, ಸಂಘಟಿತ ಅಪರಾಧ, ಮತ್ತು ಮಾದಕ ವ್ಯಸನ ಮತ್ತು ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದಂತಹಾ ಸಮಸ್ಯೆಗಳನ್ನು ಎದುರಿಸುತ್ತಿದೆ.

ಆರ್ಥಿಕ ಚಟುವಟಿಕೆಗಳು: ಅಫೀಮು ವ್ಯಾಪಾರದೊಂದಿಗೆ ಅದರ ಐತಿಹಾಸಿಕ ಸಂಬಂಧದ ಜೊತೆಗೆ, ಗೋಲ್ಡನ್ ಟ್ರಯಾಂಗಲ್ ಈಗ ಅಕ್ರಮ ಟಿಂಬರ್ ವ್ಯಾಪಾರ, ಗಣಿಗಾರಿಕೆ ಮತ್ತು ಮೆಥಾಂಫೆಟಮೈನ್‌ನಂತಹ ಅಕ್ರಮ ಔಷಧಿಗಳ ಉತ್ಪಾದನೆಯಂತಹ ಕಾನೂನುಬಾಹಿರ ಚಟುವಟಿಕೆಗಳಿಗೆ ಹೆಸರುವಾಸಿಯಾಗಿದೆ.

ಪ್ರವಾಸೋದ್ಯಮ : ಈ ತೆರನಾದ ಕುಖ್ಯಾತಿಯ ಹೊರತಾಗಿಯೂ, ಗೋಲ್ಡನ್ ಟ್ರಯಾಂಗಲ್‌ನ ಪ್ರದೇಶಗಳು ಜನಪ್ರಿಯ ಪ್ರವಾಸಿ ತಾಣಗಳಾಗಿ ಮಾರ್ಪಟ್ಟಿವೆ. ಸಾಂಸ್ಕೃತಿಕ ಆಕರ್ಷಣೆಗಳು, ರಮಣೀಯ ಭೂದೃಶ್ಯಗಳು ಮತ್ತು ಸಾಹಸ ಪ್ರವಾಸೋದ್ಯಮಕ್ಕೆ ಇರುವ ಅವಕಾಶಗಳಿಂದಾಗಿ ಪ್ರವಾಸಿಗರನ್ನು ಆಕರ್ಷಿಸುತ್ತಿವೆ.

ಈ ಪ್ರತಿಯೊಂದು ಭೌಗೋಳಿಕ ಪ್ರದೇಶಗಳು ಭೌಗೋಳಿಕ, ಆರ್ಥಿಕ, ಐತಿಹಾಸಿಕ ಅಥವಾ ಸಾಂಸ್ಕೃತಿಕವಾಗಿ ತಮ್ಮದೇ ಆದ ವಿಶಿಷ್ಟವಾದ ಪ್ರಾಮುಖ್ಯತೆಯನ್ನು ಹೊಂದಿವೆ.



ಬಹುಆಯ್ಕೆಯ ಪ್ರಶ್ನೋತ್ತರಗಳು

1. ಲಕ್ಪತಿ ದೀದಿ ಕಾರ್ಯಕ್ರಮದ ಅಡಿಯಲ್ಲಿ ಕೆಳಗಿನ ಯಾವ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತದೆ?

1. ಡ್ರೋನ್ ಬಳಕೆಗೆ ಸಂಬಂಧಿಸಿದ ತರಬೇತಿ .
2. ಡ್ರೋನ್ ದುರಸ್ತಿಗೆ ಸಂಬಂಧಿಸಿದ ತರಬೇತಿ

ಕೋಡ್ ಬಳಸಿ ಸರಿ ಉತ್ತರವನ್ನು ಗುರುತಿಸಿ.

ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ.

ಉತ್ತರ : ಸಿ

2. ವಿಶ್ವಕರ್ಮ ಯೋಜನೆಯ ಅಡಿಯಲ್ಲಿ ಕೆಳಗಿನ ಯಾವ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ತರಬೇತಿ ನೀಡಲಾಗುತ್ತದೆ?

1. ಹೊಲಿಗೆ ಕೆಲಸ 2. ದೋಣಿ ತಯಾರಿಕೆ
3. ಕಮ್ಮಾರರು 4. ಶಿಲ್ಪಿಗಳು
5. ಕುಂಬಾರರು.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 1, 2, 3, 4 ಮತ್ತು 5
ಬಿ. 1, 2 ಮತ್ತು 3
ಸಿ. 2 ಮತ್ತು 3
ಡಿ. 3 ಮತ್ತು 4

ಉತ್ತರ : ಎ

3) ಕೃತಕ ಬುದ್ಧಿಮತ್ತೆ ಕುರಿತ ಜಾಗತಿಕ ಶೃಂಗಸಭೆ (INDIAai) 2024ರಲ್ಲಿ ಭಾರತದ ಯಾವ ನಗರದಲ್ಲಿ ನಡೆಯಿತು?

1. ಮುಂಬೈ
2. ನವದಹೆಲಿ
3. ಬೆಂಗಳೂರು
4. ಹೈದರಾಬಾದ್

ಉತ್ತರ: (2)

4) ಜಿಪಿಎಐಯ ಕಾರ್ಯದರ್ಶಿ ಮಂಡಳಿ (ಸೆಕ್ರೆಟರಿಯೇಟ್)ಯ ಆತಿಥ್ಯವನ್ನು ಯಾರು ವಹಿಸಿಕೊಂಡಿದ್ದಾರೆ?

1. ವಿಶ್ವಸಂಸ್ಥೆ
2. ವಿಶ್ವ ವಾಣಿಜ್ಯ ಸಂಸ್ಥೆ (WTO)
3. ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಘಟನೆ
4. ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ (IMF)

ಉತ್ತರ: (3)

5. ಅಂತರರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆಯು ತನ್ನ ಪ್ರಾದೇಶಿಕ ಕಚೇರಿಗಳನ್ನು ಯಾವ ಸ್ಥಳದಲ್ಲಿ ಹೊಂದಿದೆ?

1. ಜಿನಿವಾ 2. ನ್ಯೂಯಾರ್ಕ್
3. ಟೊರೆಂಟೊ 4. ಟೋಕಿಯೋ
5. ರೋಮ್

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 1, 2, 3 ಮತ್ತು 4
ಬಿ. 1, 2 ಮತ್ತು 4
ಸಿ. 2, 3 ಮತ್ತು 4
ಡಿ. 2 ಮತ್ತು 5

ಉತ್ತರ : ಎ

6. ಕೆಳಗಿನ ಯಾವ ವರ್ಷದಲ್ಲಿ ಭಾರತ ಅಂತರರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆಯ ಸದಸ್ಯತ್ವವನ್ನು ಪಡೆಯಿತು?

ಎ. 1967 ಬಿ.1957 ಸಿ. 1977 ಡಿ. 1987

ಉತ್ತರ : ಬಿ

7. ಕೆಳಗಿನ ಯಾವ ಅಂಶಗಳನ್ನು ರಾಷ್ಟ್ರೀಯ ಜಾನುವಾರು ಅಭಿಯಾನದ ಉಪ ಅಭಿಯಾನಗಳು ಎಂದು ಪರಿಗಣಿಸಬಹುದು?

1. ಜಾನುವಾರುಗಳ ಮೇವಿನ ಉಪ ಅಭಿಯಾನ.
2. ಜಾನುವಾರು ವಲಯದ ಅಭಿವೃದ್ಧಿ ಉಪ ಅಭಿಯಾನ.
3. ಈಶಾನ್ಯ ಪ್ರದೇಶದಲ್ಲಿ ಹಂದಿ ಅಭಿವೃದ್ಧಿ ಉಪ ಅಭಿಯಾನ.
4. ಕೌಶಲ ಅಭಿವೃದ್ಧಿ ಉಪ ಅಭಿಯಾನ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 1, 2, 3 ಮತ್ತು 4 ಬಿ. 2 ಮತ್ತು 4
ಸಿ. 3 ಮತ್ತು 4 ಡಿ. 2 ಮತ್ತು 3

ಉತ್ತರ : ಎ

8. ಮೊಟ್ಟೆ ಮತ್ತು ಮಾಂಸದ ಉತ್ಪಾದನೆಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?

1. ಮೊಟ್ಟೆ ಉತ್ಪಾದನೆಯಲ್ಲಿ ಭಾರತ ಜಾಗತಿಕ ಮಟ್ಟದಲ್ಲಿ ನಾಲ್ಕನೇ ಸ್ಥಾನವನ್ನು ಹೊಂದಿದೆ.
2. ಮಾಂಸ ಉತ್ಪಾದನೆಯಲ್ಲಿ ಭಾರತ ಜಾಗತಿಕ ಮಟ್ಟದಲ್ಲಿ ಎಂಟನೇ ಸ್ಥಾನವನ್ನು ಹೊಂದಿದೆ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ.1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ.

ಉತ್ತರ : ಬಿ

9. ಹಂಸ ಮೆಹತಾ ಅವರಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?

1. ಇವರು ಭಾರತದ ವಿದ್ವಾಂಸರು, ಶಿಕ್ಷಣ ತಜ್ಞರು ಮತ್ತು ಲೇಖಕರಾಗಿದ್ದರು.
2. ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯ ರಚನೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು.
3. 1946ರ ಅಖಿಲ ಭಾರತ ಮಹಿಳಾ ಸಮಾವೇಶದ ಅಧ್ಯಕ್ಷತೆಯನ್ನು ವಹಿಸಿದ್ದರು.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 1 ಮಾತ್ರ ಬಿ. 2 ಮಾತ್ರ
ಸಿ. 1, 2 ಮತ್ತು 3 ಡಿ. 2 ಮತ್ತು 3

ಉತ್ತರ : ಸಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಇಂಗ್ಲಿಷ್

Second Language ENGLISH
Unit-2 PROSE
There's a Girl by the Tracks!

Task 2: Choose the correct verb out of the two given in brackets:

1. Every leaf -------- fallen from this tree. (Has/ have)
2. Each of the boys ------------ done his home work. (Has / have)
3. He, as well as you, ----------- intelligent. (Is/are)
4. Bread and butter ------------- his daily diet. (Were/was)
5. Either you or he ----------- done it. (Has/have)
6. One of the boys----------- punished. (Was/were)
7. Neither the children nor their mothers --------- admitted to hospital. (Were / was).

Answer:

Wrong answer is struck out in bracket.

1. Neither he nor you ----------- wrong. (~~Is~~ /are)
2. His father and uncle --------- their own business. (~~Has~~/ have)
3. The first innings -------- very interesting. (Was/~~were~~)
4. Either Amrutha or her friends --------taken it. (~~Has~~ / have)
5. Every one of the boys --------------- sitting silent in the hall. (Was/~~were~~)
6. Every leaf -------- fallen from this tree. (Has/ ~~have~~)
7. Each of the boys ------------- done his home work. (have / ~~has~~)
8. Heis as well as you ----------- intelligent. (~~Is~~/are)
9. Bread and butter -------------- his daily diet. (~~Were~~/was)
10. Either you or he ----------- done it. (Has/~~have~~)
11. One of the boys----------- punished. (Was/~~were~~)
12. Neither the children nor their mothers --------- admitted to hospital. (Were / ~~was~~).

Task 3: Read the following paragraph. A blank is given after each number. If the underlined word is correct, then write (c) in the blank. If the underlined word is wrong, write the right form of the word in the blank.

Everyone who have (1) eg., has ever been to a graduation ceremony know (2) ....how exciting it can be for the graduates. In our town, nearly the whole population comes (3) .... each year. There are (4) .... one thing that both graduates and guests enjoy (5) .... the awarding of scholarships. This ceremony, along with concluding exercises makes (6) .... attending the graduation worthwhile. Several of the students who receives (7) .... awards plan (8) .... to attend the community college. Many former graduates is (9) .... grateful for opportunities that such an award provides (10) .... to them.

Ans: Right form of the word is written underlined and correct is written as (c).

Everyone who have (1) eg., has ever been to a graduation ceremony know (2) knows how exciting it can be for the graduates. In our town, nearly the whole population comes (3) (c) each year. There are (4) is one thing that both graduates and guests enjoy (5) (c) the awarding of scholarships. This ceremony, along with concluding exercises makes (6) (c) attending the graduation worthwhile. Several of the students who receives (7) received awards plan. (8) planed to attend the community college. Many former graduates (9) (are) grateful for opportunities that such an award provides (10) provided to them.

Make reference

Study the meanings of a word given in a dictionary

compose (verb) composed, composing- transitive verb

1. Consists of
2. Combine together to form
3. Make up
4. Write a piece of music
5. Write a letter or poem
6. Try hard to become calm after feeling very angry, upset or excited
7. To arrange the parts of a painting photograph or scene in a way that achieves a particular result.

Task 1: Some sentences are given below. In each sentence the word 'compose' is used. Identify the meaning given above and write the corresponding number in the boxes.

Nayana sat at the desk, taking several deep breaths to compose herself. ( )

1. Water is composed of hydrogen and oxygen.( )
2. A. R. Rehaman has composed of people and people make legal system. ( )
3. The legal system is composed of people and business sector of our economy. ( )
4. More than 17.6 million firms composed the business sector of our economy. ( )
5. I like the way Ravi composes photographs. ( )

Ans:-1. Nayana sat at the desk, taking several deep breaths to compose herself. (6) *(Contd.....)*

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC CHEMISTRY

The d- and f-Block Elements

1. Why does copper not replace hydrogen from acids?

Ans: Copper does not replace hydrogen from acids because Cu has a positive E° value, i.e., it is less reactive than hydrogen, which has an electrode potential of 0.0 V. So, Cu cannot replace hydrogen from acids.

2. Why are E- values for Mn, Ni and Zn more negative than expected?

Ans: The metals will quickly lose their electrons and get oxidised. A negative E value means that the oxidised species is more stable than the reduced species. Here, Mn^{2+} (3d5) and Zn^{2+} (3d10) have half-filled and fully filled d orbitals, giving them stability and, therefore, prefer to stay that way and not get reduced. Ni^{2+} (3d8) has very high negative hydration enthalpy, balanced by first and second ionisation enthalpy.

3. What are d-block elements?

Ans: The elements in which the added electron enters into $(n-1)$d orbitals are called d-block elements.

4. What are transition elements?

Ans: The elements which possess partially filled d-subshell either in the atomic state or in the oxidation state are called transition elements.

5. What is the position of d-block elements in the periodic table?

Ans: d-Block elements are placed in the middle of the periodic table i.e., between the s- and p-block elements.

6. Give reason: (1) d-block elements are called transition elements.

(2) Most of the transition metals have high melting point and boiling point

(3) Manganise exhibits a maximum oxidation state of +7

(4) The enithalpy of atomisation of the transition matals is high

Ans:(1) Because their properties are intermediate between s- and p-block elements.

(2) Because large number of electrons from (n-1)d and ns orbitals are involved in interatomic bonding

(3) Manganese (Mn) exhibits the highest oxidation state of +7 because of its electronic configuration, which is [(Ar)3d54s2]: Manganese exists in 6 different oxidation states i.e. from +2 to +7. This is the highest number for any element in the 3d-series. The reason for the existence of such a huge number of oxidation states in manganese is due to the presence of 5 unpaired electrons in its 3d subshell which can show easy transitions.

(4) Transition metals have high enthalpies of atomization because they have strong metal-metal bonding. This is due to their high effective nuclear charge, large number of valence electrons, and some unpaired electrons

7. Give the group number of d-block elements in the periodic table.

Ans: D block elements are the elements that can be found from the third group to the twelfth group of the modern periodic table

8. Write the general electronic configuration of d-block elements.

Ans: [Noble gas] $(n-1)d^{1-10}ns^{1-2}$.

where "n" represents the outermost shell.

9. Why is the first ionisation enthalpy of Cr is lower than that of Zn?

Ans: Ionisation enthalpy of Cr is less than that of Zn because Cr has a stable configuration. In the case of zinc, the electron comes out from wholly filled 4s orbital. So, the removal of an electron from zinc requires more energy as compared to chromium.

10. Transition elements show high melting points. Why?

Ans: The high melting points of transition metals are due to the involvement of a greater number of electrons of (n-1)d in addition to the ns electrons in the interatomic metallic bonding.

11. Write the valence shell electronic configuration of d-block elements.

Ans: $(n-1)d^{1-10}ns^{1-2}$.

12. Write the general electronic configuration of 3d series of elements.

Ans: $[Ar]3d^{1-10}4s^{1-2}$.

13. How many series of d-block elements are known?

Ans: **4 series (namely, 3d, 4d, 5d and 6d series).**

3d series or first transition series; $_{21}Sc$ to $_{30}Zn(3d^{1-10}4s^{1-2})$

4d series or second transition series; $_{39}Y$ to $_{48}Cd(4d^{1-10}5s^{1-2})$

5d series or third transition series; $_{57}La$ to $_{72}Hf - _{80}Hg(5d^{1-10}6s^{1-2})$

6d series or fourth transition series; $_{89}Ac$ to $_{104}Rb - _{111}Rg(6d^{1-10}7s^{1-2})$

ಪುಂಡರ ಹಾವಳಿ: ಸಂಚಾರಕ್ಕೆ ಆತಂಕ

ಒಂದು ವಾಹನ ಇನ್ನೊಂದು ವಾಹನಕ್ಕೆ ತಾಗಿದ ವಿಚಾರಕ್ಕೆ ರಸ್ತೆ ಮಧ್ಯೆ ಗಲಾಟೆ

• ಆದಿತ್ಯ ಕೆ.ಎ.



ಸರ್ಜಾಪುರ ರಸ್ತೆಯಲ್ಲಿ ಕಾರಿಗೆ ಹಾನಿಗೊಳಿಸಿದ ಕಿಡಿಗೇಡಿ

ಬೆಂಗಳೂರು: ನಗರದ ಹೊರವಲಯದ ರಸ್ತೆಗಳು, ಒಳಭಾಗದ ಕೆಲವು ರಸ್ತೆ ಹಾಗೂ ಜಂಕ್ಷನ್‌ಗಳಲ್ಲಿ ರಾತ್ರಿ ವೇಳೆ ಪುಂಡರ ಹಾವಳಿ ಮಿತಿಮೀರಿದ್ದು, ರಾತ್ರಿಪಾಳಿಯ ಉದ್ಯೋಗಸ್ಥರು, ವ್ಯಾಪಾರಿಗಳು, ಫುಡ್ ಡೆಲಿವರಿ ಹುಡುಗರು, ಹೊರ ಊರುಗಳಿಂದ ರಾತ್ರಿ ವೇಳೆ ನಗರಕ್ಕೆ ಬರುವ ಪ್ರಯಾಣಿಕರಿಗೆ ಆತಂಕ ತಂದೊಡ್ಡಿದೆ.

ದಿಢೀರ್ ಎದುರಾಗುವ ಕಿಡಿಗೇಡಿಗಳ ಗುಂಪು ವಾಹನ ಚಾಲಕರು ಹಾಗೂ ಬೈಕ್ ಸವಾರರನ್ನು ಅಡ್ಡಗಟ್ಟಿ ಹಣ ಹಾಗೂ ಮೊಬೈಲ್ ಸುಲಿಗೆ ಮಾಡುವ ಜತೆಗೆ ಸವಾರರನ್ನು ಭೀತಿಗೆ ಒಳಪಡಿಸುವ ಘಟನೆಗಳೂ ನಗರದಲ್ಲಿ ನಡೆಯುತ್ತಿವೆ.

ಒಂದು ವಾಹನವು ಮತ್ತೊಂದು ವಾಹನಕ್ಕೆ ತಾಗಿದ ವಿಚಾರಕ್ಕೆ ರಸ್ತೆಯಲ್ಲಿಯೇ ಸವಾರರ ಮೇಲೆ ಹಲ್ಲೆ ನಡೆಸುತ್ತಿರುವ ಪ್ರಕರಣಗಳು ಹೆಚ್ಚು ವರದಿ ಆಗುತ್ತಿವೆ. ಪ್ರಶ್ನಿಸಿದರೆ ವಾಹನಗಳ ಗಾಜು ಪುಡಿ ಮಾಡುವುದು, ವಾಹನಕ್ಕೆ ಹಾನಿ ಮಾಡುತ್ತಿರುವ ಪ್ರಕರಣಗಳು ಸಿಲಿಕಾನ್ ಸಿಟಿಯಲ್ಲಿ ಹೆಚ್ಚಾಗಿದ್ದು ಸಂಚಾರದ ಸುರಕ್ಷತೆಯ ಬಗ್ಗೆ ಪ್ರಶ್ನೆ ಎದ್ದಿದೆ.

ಹಲವು ಮೇಲ್ಸೇತುವೆಗಳಲ್ಲಿ ವ್ಹೀಲಿ ನಡೆಸಿ ಕಿರಿಕಿರಿ ಉಂಟು ಮಾಡುತ್ತಿರುವ ಪ್ರಕರಣಗಳೂ ಕಡಿಮೆ ಆಗಿಲ್ಲ. ವ್ಹೀಲಿಯಿಂದ ಅಪಘಾತ ಸಂಭವಿಸಿ ಮತ್ತೊಬ್ಬರ ಜೀವಕ್ಕೂ ಹಾನಿ ಆಗುತ್ತಿದ್ದು, ಪುಂಡರ ಹಾವಳಿಗೆ ಕಡಿವಾಣ ಬಿದ್ದಿಲ್ಲ ಎಂದು ನಿವಾಸಿಗಳು ಹೇಳಿದರು.

ಕಿಡಿಗೇಡಿಗಳ ಹಾವಳಿ ತಡೆಗಟ್ಟಲು ನಗರ ಪೊಲೀಸರು ಮುಂದಾಗಿದ್ದು, ಈ ರೀತಿ ಕೃತ್ಯ ಎಸಗಿದ್ದ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳುತ್ತಿದ್ದಾರೆ. ಪುಂಡರನ್ನು ಪತ್ತೆಹಚ್ಚಿ ಜೈಲಿಗೆ ಕಳುಹಿಸಲು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವಿಶೇಷ ತಂಡ ರಚಿಸಲಾಗಿದೆ ಎಂದು ಮೂಲಗಳು ಹೇಳಿವೆ.

ರಸ್ತೆಯಲ್ಲಿ ಕರ್ಕಶ ಹಾರ್ನ್ ಮಾಡಿಕೊಂಡು ವಾಹನಗಳನ್ನು ಹಿಂದಿಕ್ಕುವುದು, ಮುಂದೆ ಚಲಿಸುತ್ತಿದ್ದ ವಾಹನದ ಸವಾರರು ಜಾಗ ಬಿಡದಿದ್ದರೆ ಅಂತಹ ವಾಹನವನ್ನು ಅಡ್ಡಗಟ್ಟಿ ಸವಾರರ ಮೇಲೆ ಹಲ್ಲೆ ಮಾಡುವುದು, ವಾಹನಕ್ಕೆ ಹಾನಿ ಮಾಡುವ ಪ್ರಕರಣಗಳು ನಡೆಯುತ್ತಿವೆ ಎಂದು ಚಾಲಕರು ಆತಂಕ ವ್ಯಕ್ತಪಡಿಸಿದ್ದಾರೆ.

ರಾತ್ರಿ ಪಾಳಿಯ ಕೆಲಸಕ್ಕೆ ತೆರಳುವುದಕ್ಕೆ ಭಯ: 'ಕಂಪನಿಗಳಲ್ಲಿ ಮನೆಯಿಂದ ಕೆಲಸ ಮಾಡುವುದಕ್ಕೆ ಬಹುತೇಕ ವಿರಾಮ ಬಿದ್ದಿದೆ. ಹೀಗಾಗಿ ಕೆಲವೊಮ್ಮ ರಾತ್ರಿ ಪಾಳಿ ಇರುತ್ತದೆ. ಕೆಲಸ ಮುಗಿಸಿಕೊಂಡು ಮುಂಜಾನೆ ಕಂಪನಿಯಿಂದ ಮನೆಗೆ ಹೋಗಲು ಭಯವಾಗುತ್ತಿದೆ. ಪ್ರಮುಖ ಜಂಕ್ಷನ್, ಮಾರ್ಗ ಹಾಗೂ ಹೊರವಲಯದಲ್ಲಿ ಪೊಲೀಸ್ ಗಸ್ತು ಸಿಬ್ಬಂದಿ ಕಾಣಿಸುವುದಿಲ್ಲ. ಅಲ್ಲಲ್ಲಿ ಹೊಯ್ಸಳ ವಾಹನ ಓಡಾಟ ನಡೆಸಿದರೆ ಪುಂಡರ ಹಾವಳಿ ಕಡಿಮೆ ಆಗಲಿದೆ' ಎಂದು ಸಾಫ್ಟ್‌ವೇರ್ ಕಂಪನಿಯೊಂದರ ಉದ್ಯೋಗಿ ಸುಷ್ಮಾ ಹೇಳಿದರು.

ಚಾಕು ತೋರಿಸಿ ಬೆದರಿಸಿದ್ದ ಆರೋಪಿಗಳು: ಕೆಲವು ದಿನಗಳ ಹಿಂದಷ್ಟೇ ಸುದ್ದಗುಂಟೆಪಾಳ್ಯ ಪೊಲೀಸ್ ಠಾಣಾ ವ್ಯಾಪ್ತಿಯ ಡಬಲ್ ಡೆಕ್ಕರ್ ಮೇಲ್ಸೇತುವೆಯಲ್ಲಿ ದ್ವಿಚಕ್ರ ವಾಹನಗಳಲ್ಲಿ ವ್ಹೀಲಿ ನಡೆಸಿ ಆ ರಸ್ತೆಯಲ್ಲಿ ಚಲಿಸುತ್ತಿದ್ದ ಕಾರಿನ ಚಾಲಕನಿಗೆ ಹಗಲು ವೇಳೆಯೇ ಚಾಕು ತೋರಿಸಿ ಬೆದರಿಸಿದ್ದರು. ಕಾರಿನ ಗಾಜಿಗೆ ಒದ್ದು ಹಾನಿಗೊಳಿಸಿದ್ದರು. ಹಿಂದೆ ಮತ್ತೊಂದು ವಾಹನದಲ್ಲಿ ಬರುತ್ತಿದ್ದ ವ್ಯಕ್ತಿಯೊಬ್ಬರು ಈ ದೃಶ್ಯವನ್ನು ತಮ್ಮ ಮೊಬೈಲ್‌ನಲ್ಲಿ ಚಿತ್ರೀಕರಿಸಿದ್ದರು. ಅದನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡಿದ್ದರು. ಹೀಗಾಗಿ ಆರೋಪಿಗಳನ್ನು ಪತ್ತೆಹಚ್ಚಲು ಸಾಧ್ಯವಾಗಿತ್ತು.

ಮಂಗಳವಾರ ಜಯನಗರದ ಸೌತ್ ಎಂಡ್ ಸರ್ಕಲ್ ಬಳಿ ಫುಡ್ ಡೆಲಿವರಿ ಹುಡುಗನಿಗೆ ಹಿಗ್ಗಾಮುಗ್ಗಾ ಥಳಿಸಲಾಗಿದೆ. ಫುಡ್ ಡೆಲಿವರಿಗೆ ಹೋಗುವ ವೇಳೆ ಆಟೊವೊಂದಕ್ಕೆ ಬೈಕ್ ತಾಗಿದೆ. ಇದೇ ವಿಚಾರಕ್ಕೆ ಆಟೊ ಚಾಲಕರ ಗುಂಪು ಹಲ್ಲೆ ನಡೆಸಿದೆ. ಗ್ರಾಹಕರಿಗೆ ನೀಡಲು ಕೊಂಡೊಯ್ಯುತ್ತಿದ್ದ ಆಹಾರ ಪದಾರ್ಥವು ಚೆಲ್ಲಾಪಿಲ್ಲಿಯಾಗಿ ಬಿದ್ದಿತ್ತು.

ಸರ್ಜಾಪುರ ಮುಖ್ಯರಸ್ತೆಯ ದೊಡ್ಡಕನ್ನೆಹಳ್ಳಿಯಲ್ಲಿ ಸೋಮವಾರ ಮದ್ಯದ ಅಮಲಿನಲ್ಲಿ ಯುವಕನೊಬ್ಬ ಕಾರಿನ ಗ್ಲಾಸ್ ಒಡೆದು ಹಾಕಿ ಭೀತಿ ಸೃಷ್ಟಿಸಿದ್ದ. ಕಾರಿನ ಒಳಗೆ ಮಹಿಳೆ ಹಾಗೂ ಪುಟ್ಟ ಮಗುವಿದೆ ಎಂದು ಚಾಲಕ ವಿನಮ್ರತೆಯಿಂದ ಮನವಿ ಮಾಡಿದ್ದರೂ ಆರೋಪಿ ದುರ್ವರ್ತನೆ ತೋರಿದ್ದ ಎಂದು ಸ್ಥಳೀಯರು ತಿಳಿಸಿದ್ದಾರೆ.

ಡ್ರಗ್ಸ್, ಮದ್ಯದ ಅಮಲು

ಕಿಡಿಗೇಡಿಗಳು ಮದ್ಯ ಹಾಗೂ ಡ್ರಗ್ಸ್ ತೆಗೆದುಕೊಂಡು ಸವಾರರಿಗೆ ಕಿರುಕುಳ ನೀಡುತ್ತಿದ್ದಾರೆ. ಪ್ರಶ್ನಿಸಿದರೆ ಹಲ್ಲೆ ನಡೆಸುತ್ತಾರೆ. ಯುವಕರ ಕೈಗೆ ಸುಲಭವಾಗಿ ಡ್ರಗ್ಸ್ ಸಿಗುತ್ತಿದೆ. ಡ್ರಗ್ಸ್ ಪೂರೈಕೆದಾರರ ವಿರುದ್ಧ ಪೊಲೀಸರು ಕ್ರಮ ತೆಗೆದು ಕೊಳ್ಳಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

> **ರಸ್ತೆಗಳಲ್ಲಿ ಹಲ್ಲೆ ನಡೆಸಿ, ಗಲಾಟೆ ಮಾಡಿದರೆ ಅಂತಹ ವ್ಯಕ್ತಿಗಳನ್ನು ರೌಡಿಪಟ್ಟಿಗೆ ಸೇರಿಸಲಾಗುವುದು**
> **ಬಿ.ದಯಾನಂದ**
> ನಗರ ಪೊಲೀಸ್ ಕಮಿಷನರ್

> **ಜಯನಗರದಲ್ಲಿ ಫುಡ್ ಡೆಲಿವರಿ ಹುಡುಗನ ಮೇಲೆ ಹಲ್ಲೆ ನಡೆಸಿದವರು ಡ್ರಗ್ಸ್ ತೆಗೆದುಕೊಂಡಿರುವ ಅನುಮಾನ ಇದೆ**
> **ಮೂರ್ತಿ**
> ಜಯನಗರದ ನಿವಾಸಿ

ಮಲಗಿದ್ದ ವೃದ್ಧೆ ಮೇಲೆ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಚಿಂತಾಮಣಿ (ಚಿಕ್ಕಬಳ್ಳಾಪುರ): ಇಲ್ಲಿಯ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿರುವ ಶೆಡ್‌ನಲ್ಲಿ ಮಲಗಿದ್ದ 65 ವರ್ಷದ ವೃದ್ಧೆಯ ಮೇಲೆ ಮಂಗಳವಾರ ರಾತ್ರಿ ಚಿಕಿತ್ಸೆಗೆ ಬಂದಿದ್ದ ವ್ಯಕ್ತಿ ಅತ್ಯಾಚಾರ ಎಸಗಿದ್ದಾನೆ.

ಅತ್ಯಾಚಾರ ಆರೋಪಿ ಚಿಂತಾಮಣಿಯ ಇರ್ಫಾನ್ (24) ಎಂಬಾತನನ್ನು ಆಸ್ಪತ್ರೆಯ ಸಿಬ್ಬಂದಿ ಸ್ಥಳದಲ್ಲಿಯೇ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ಆರೋಪಿಯು ನಡುರಾತ್ರಿ 12.40ಕ್ಕೆ ಆಸ್ಪತ್ರೆಗೆ ಬಂದು ಹೊರರೋಗಿ ಚೀಟಿ ಪಡೆದು ಚಿಕಿತ್ಸೆ ಪಡೆದಿದ್ದ. ವಾಪಸ್ ತೆರಳುವಾಗ ಶೆಡ್‌ನಲ್ಲಿ ಮಲಗಿದ್ದ ವೃದ್ಧೆಯ ಮೇಲೆ ಅತ್ಯಾಚಾರ ನಡೆಸಿದ್ದಾನೆ.

ವೃದ್ಧೆ ಕಿರುಚಾಟ ಕೇಳಿ ಸ್ಥಳಕ್ಕೆ ಧಾವಿಸಿದ ಡಾ.ವಾಣಿ ಹಾಗೂ ಸಿಬ್ಬಂದಿ ಆರೋಪಿಯನ್ನು ಹಿಡಿದಿದ್ದಾರೆ. ಆಸ್ಪತ್ರೆಯ ಮಹಿಳಾ ವಾರ್ಡ್‌ಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ಸಂತೋಷ್ ಕುಮಾರ್ ಬುಧವಾರ ನಗರಠಾಣೆಗೆ ದೂರು ನೀಡಿದ್ದಾರೆ.

ಸಂತ್ರಸ್ತೆಯನ್ನು ಚಿಂತಾಮಣಿ ತಾಲ್ಲೂಕಿನ ಗ್ರಾಮವೊಂದರ ನಿವಾಸಿ ಎನ್ನಲಾಗಿದ್ದು, ಆಗಾಗ ಆಸ್ಪತ್ರೆ ಆವರಣದಲ್ಲಿರುವ ಶೆಡ್‌ನಲ್ಲಿ ತಂಗುತ್ತಿದ್ದರು.

ಆಮ್ಲಜನಕ ಘಟಕದ ಪಕ್ಕದ ಈ ಶೆಡ್‌ನಲ್ಲಿ ಭಿಕ್ಷುಕರು ಹಾಗೂ ನಿರಾಶ್ರಿತರು ರಾತ್ರಿ ತಂಗುತ್ತಾರೆ. ರಾತ್ರಿ ವೇಳೆ ಆಸ್ಪತ್ರೆಯಲ್ಲಿ ಭದ್ರತೆಗಾಗಿ ಪೊಲೀಸರನ್ನು ನಿಯೋಜಿಸಬೇಕು ಎಂದು ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಮನವಿ ಮಾಡಿದ್ದಾರೆ.

ತಡವಾಗಲಿರುವ ರೈಲು ಸಂಚಾರ

ಬೆಂಗಳೂರು: ಎಂಜಿನಿಯರಿಂಗ್ ಕೆಲಸ ಹಮ್ಮಿಕೊಂಡಿರುವುದರಿಂದ ರಾಜ್ಯದ ವಿವಿಧ ಭಾಗಗಳಿಂದ ಹೊರಡುವ ನಾಲ್ಕು ರೈಲುಗಳು ನಿಗದಿತ ಸಮಯಕ್ಕಿಂತ 15 ನಿಮಿಷ ತಡವಾಗಿ ಸಂಚರಿಸಲಿವೆ.

ಸೆ.5ರಂದು ಮೈಸೂರು–ವಾರಾಣಸಿ ರೈಲು, ಸೆ.6 ಮತ್ತು 13ರಂದು ಹುಬ್ಬಳ್ಳಿ–ಬನಾರಸ್ ರೈಲು, ಸೆ.13ರಂದು ನವದೆಹಲಿ–ಕೆಎಸ್‌ಆರ್ ಬೆಂಗಳೂರು ರೈಲುಗಳು ತಲಾ 15 ನಿಮಿಷ ತಡವಾಗಿ ಸಂಚರಿಸಲಿವೆ.

ಈಜುಕೊಳದಲ್ಲಿ ಮುಳುಗಿ ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ



ದಯಾನಂದ

ಬೆಂಗಳೂರು: ರಾಜರಾಜೇಶ್ವರಿ ನಗರದ ಬೆಸ್ಟ್ ಕ್ಲಬ್‌ನಲ್ಲಿ ಈಜಲು ತೆರಳಿದ್ದ ವ್ಯಕ್ತಿಯೊಬ್ಬರು ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಖಾಸಗಿ ಕಂಪನಿ ಉದ್ಯೋಗಿ ದಯಾನಂದ(41) ಮೃತಪಟ್ಟವರು.

ಪ್ರಕರಣದ ಸಂಬಂಧ ಮೃತ ವ್ಯಕ್ತಿಯ ಪತ್ನಿ ಅಕ್ಷತಾ ದಯಾನಂದ ಅವರು ರಾಜರಾಜೇಶ್ವರಿ ನಗರ ಠಾಣೆಗೆ ದೂರು ನೀಡಿದ್ದು, ಪೊಲೀಸರು ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

'ಆರ್.ಆರ್.ನಗರದ ಗೊಟ್ಟಿಗೆರೆಯ ಅವನಿ ಹಿಲ್ಸ್ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ನಲ್ಲಿ ದಯಾನಂದ ಅವರು ಕುಟುಂಬದವರ ಜತೆಗೆ ನೆಲೆಸಿದ್ದರು. ಅಪಾರ್ಟ್‌ಮೆಂಟ್‌ನ ಸ್ನೇಹಿತರಾದ ಸಂದೀಪ್, ಶರತ್ ಹಾಗೂ ವಿರೂಪಾಕ್ಷ ಅವರ ಜತೆಗೆ ಈಜುಕೊಳಕ್ಕೆ ತೆರಳಿದ್ದರು. ನಂತರ, ಶರತ್ ಅವರ ಪತ್ನಿ ಪಲ್ಲವಿ ಮನೆಗೆ ಬಂದು ದಯಾನಂದ ಅವರು ನೀರಿನಲ್ಲಿ ಮುಳುಗಿ ಅಸ್ವಸ್ಥರಾಗಿದ್ದು, ಆಸ್ಪತ್ರೆಗೆ ಸೇರಿಸಲಾಗಿದೆ ಎಂಬುದಾಗಿ ಮಾಹಿತಿನೀಡಿದ್ದರು.

ಆಸ್ಪತ್ರೆಗೆ ತೆರಳಿ ನೋಡಿದಾಗ ತುರ್ತು ನಿಗಾ ಘಟಕದಲ್ಲಿ ಅವರನ್ನು ಇಡಲಾಗಿತ್ತು. ಅವರು ಪ್ರಜ್ಞೆ ತಪ್ಪಿದ್ದರು' ಎಂದು ದೂರಿನಲ್ಲಿ ತಿಳಿಸಿದ್ದಾರೆ.

ದಯಾನಂದ ಅವರ ಜತೆಗೆ ಈಜಲು ತೆರಳಿದ್ದವರನ್ನು ವಿಚಾರಿಸಿದಾಗ, ಈಜುಕೊಳದ ಆಳ ಪ್ರದೇಶಕ್ಕೆ ಹೋಗಿ ಮುಳುಗಿದ್ದರು. ಮೇಲ್ವಿಚಾರಕರ ಸಹಾಯದಿಂದ ಅವರನ್ನು ಮೇಲಕ್ಕೆತ್ತಿ ಆಸ್ಪತ್ರೆಗೆ ಕರೆತಂದು ಸೇರಿಸಲಾಗಿದೆ ಎಂದು ಹೇಳಿದ್ದಾರೆ. ಆಸ್ಪತ್ರೆಯಲ್ಲಿ ಅವರು ಮೃತಪಟ್ಟಿದ್ದು ಸಾವಿನ ಬಗ್ಗೆ ಅನುಮಾನವಿದ್ದು ತನಿಖೆ ನಡೆಸುವಂತೆ ಅವರು ದೂರಿನಲ್ಲಿ ಕೋರಿದ್ದಾರೆ.

ಆಟೊ ಚಾಲಕನಿಗೆ ಚಾಕು ಇರಿತ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ವಿವಾಹಿತ ಮಹಿಳೆಗೆ ಪೀಡಿಸುತ್ತಿದ್ದ ಆಟೊ ಚಾಲಕನಿಗೆ ಮಹಿಳೆಯ ಪತಿ ಹಾಗೂ ಸಹೋದರ ಚಾಕುವಿನಿಂದ ಇರಿದಿದ್ದು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ.

ಬ್ಯಾಟರಾಯನಪುರ ಠಾಣಾ ವ್ಯಾಪ್ತಿಯ ನಾಯಂಡಹಳ್ಳಿ ಪಂತರಪಾಳ್ಯದಲ್ಲಿ ಘಟನೆ ನಡೆದಿದೆ.

ಹೊಸಗುಡ್ಡದಹಳ್ಳಿ ನಿವಾಸಿ ಕಾರ್ತಿಕ್(26) ಇರಿತಕ್ಕೆ ಒಳಗಾದವರು.

ಸದ್ಯ ಕಾರ್ತಿಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಅಪಾಯದಿಂದ ಪಾರಾಗಿದ್ದಾರೆ. ಘಟನೆ ಸಂಬಂಧ ಮಹಿಳೆಯ ಪತಿ ಸತೀಶ್, ಸಹೋದರ ವಿನೋದ್ ಮತ್ತು ಸೂರ್ಯ ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದ್ದು, ಆರೋಪಿಗಳಿಗಾಗಿ ಶೋಧ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು.

ಆಟೊ ಚಾಲಕನಾಗಿರುವ ಕಾರ್ತಿಕ್, ಪಂತರಪಾಳ್ಯದ ವಿವಾಹಿತ ಮಹಿಳೆಯೊಂದಿಗೆ ಸಲುಗೆ ಬೆಳೆಸಲು ಮುಂದಾಗಿದ್ದ. ಅವರು ಬುದ್ಧಿಮಾತು ಹೇಳಿದ್ದರೂ ತೊಂದರೆ ಕೊಡುತ್ತಿದ್ದ. ಆತನ ವರ್ತನೆಯಿಂದ ಬೇಸತ್ತಿದ್ದ ಆಕೆ ಪತಿ ಹಾಗೂ ಸಹೋದರನಿಗೆ ಮಾಹಿತಿ ನೀಡಿದ್ದರು. ಈ ವಿಚಾರ ತಿಳಿದ ಮಹಿಳೆಯ ಪತಿ ಮತ್ತು ಸಹೋದರ, ಕಾರ್ತಿಕ್‌ಗೆ ಬುದ್ಧಿ ಹೇಳಿದ್ದರು. ಆದರೂ ಆತ ವರ್ತನೆ ಮುಂದುರಿಸಿದ್ದ. ಕೋಪಗೊಂಡ ಆರೋಪಿಗಳು ಸೋಮವಾರ ರಾತ್ರಿ ಚಾಕುವಿನಿಂದ ಇರಿದಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ



ಬೆಂಗಳೂರು: ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್ ವತಿಯಿಂದ 2024–25ನೇ ಸಾಲಿನ ವಿದ್ಯಾರ್ಥಿವೇತನಕ್ಕಾಗಿ ಅರ್ಹ ವಿದ್ಯಾರ್ಥಿಗಳಿಂದ (ಪರಿಶಿಷ್ಟ ಜಾತಿ ಮತ್ತು ಪಂಗಡದವರನ್ನು ಹೊರತುಪಡಿಸಿ) ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕದ ಯಾವುದೇ ವಿಶ್ವವಿದ್ಯಾಲಯದಲ್ಲಿ ಜೈನಾಲಜಿ, ಪ್ರಾಕೃತ, ಜೈನಾಗಮ ವಿಭಾಗದಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವವರು, ಶಾಸ್ತ್ರಿಯವರ ಜೀವನ ಮತ್ತು ಸಾಹಿತ್ಯದ ವಿಷಯದಲ್ಲಿ ಸಂಶೋಧನೆ ಮಾಡಲು ಮುಂದಾಗುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಕನ್ನಡ, ಸಂಸ್ಕೃತ, ಪ್ರಾಕೃತ ವಿಷಯಗಳಲ್ಲಿ ಎಂ.ಎ. ಮಾಡುತ್ತಿರುವ ವಿದ್ಯಾರ್ಥಿಗಳು, ಸಂಗೀತ, ಭಜನೆ, ಜಿನಭಕ್ತಿ ಗೀತಗಾಯನ ಅಭಿರುಚಿಯಿದ್ದು, ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳೂ ಅರ್ಜಿ ಸಲ್ಲಿಸಬಹುದು.

ಅರ್ಹರು ಕಲಿಕಾ ವಿವರ ಮತ್ತು ವಿಳಾಸ ನೀಡಿ ಅರ್ಜಿ ನಮೂನೆ ಪಡೆದು ಭರ್ತಿ ಮಾಡಿ ಸೆ.20ರ ಒಳಗೆ ಅಂಚೆ ಮೂಲಕ 'ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್, ಶಾಂತಿ, 369, 42ನೇ ಅಡ್ಡರಸ್ತೆ, ಜಯನಗರ, 8ನೇ ಬ್ಲಾಕ್, ಬೆಂಗಳೂರು' ಇಲ್ಲಿಗೆ ಸಲ್ಲಿಸಬೇಕು ಎಂದು ಟ್ರಸ್ಟ್ ಚೇರ್ಮನ್ ಎಸ್. ಜಿತೇಂದ್ರ ಕುಮಾರ್ ತಿಳಿಸಿದ್ದಾರೆ.

ದರ್ಶನ್ ವಿರುದ್ಧ ಪ್ರಬಲ ಸಾಕ್ಷ್ಯ ಲಭ್ಯ: ಮೊದಲ ಆರೋಪಿಯಾಗಿಸುವ ಸಾಧ್ಯತೆ

ರೇಣುಕಸ್ವಾಮಿ ಕೈಮುಗಿದ ಫೋಟೊ ಸಂಗ್ರಹ?

ಪ್ರಜಾವಾಣಿ ವಾರ್ತೆ





ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಅವರು ಕೊಲೆಗೀಡಾಗುವ ಮುನ್ನ, ಹಲ್ಲೆ ಕೋರರ ಎದುರು ಕೈಮುಗಿದು ಕಣ್ಣೀರಿಡುತ್ತಿರುವ ಫೋಟೊ, ನಾಲ್ಕು ಮತ್ತು ಎಂಟು ಸೆಕೆಂಡಿನ ಎರಡು ವಿಡಿಯೊಗಳನ್ನು ಹೈದರಾಬಾದ್‌ನ ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ತಜ್ಞರು ಮರು ಸಂಗ್ರಹಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಸೇರಿದಂತೆ 17 ಆರೋಪಿಗಳಿಂದ ಜಪ್ತಿ ಮಾಡಲಾಗಿದ್ದ ಮೊಬೈಲ್‌ನಲ್ಲಿದ್ದ ದತ್ತಾಂಶ ಮರು ಸಂಗ್ರಹಕ್ಕೆ ಹೈದರಾಬಾದ್ ಹಾಗೂ ಬೆಂಗಳೂರಿನ ಎಫ್‌ಎಸ್‌ಎಲ್‌ಗೆ ರವಾನೆ ಮಾಡಲಾಗಿತ್ತು. ಪ್ರದೂಷ್ ಸೇರಿದಂತೆ ಇಬ್ಬರು ಆರೋಪಿಗಳ ಐ–ಫೋನ್‌ನಲ್ಲಿದ್ದ ದತ್ತಾಂಶವನ್ನು ಎಫ್‌ಎಸ್‌ಎಲ್ ತಜ್ಞರು ಮರುಸಂಗ್ರಹಿಸಲು ಯಶಸ್ವಿ ಆಗಿದ್ದಾರೆ.

ಆರೋಪಿ ದರ್ಶನ್, ಪವಿತ್ರಾಗೌಡ ಅವರ ಮೊಬೈಲ್‌ನಲ್ಲಿ ದತ್ತಾಂಶ ಮರುಸಂಗ್ರಹ ಕಾರ್ಯ ಪ್ರಗತಿಯಲ್ಲಿದೆ ಎಂದು ಮೂಲಗಳು ತಿಳಿಸಿವೆ.

ಜೂನ್ 8ರ ಮಧ್ಯಾಹ್ನ ಚಿತ್ರದುರ್ಗದಿಂದ ರೇಣುಕಸ್ವಾಮಿ ಅವರನ್ನು ಅಪಹರಿಸಿ ನಗರದ ಪಟ್ಟಣಗೆರೆಯ ಶೆಡ್‌ಗೆ ಕರೆತಂದಿದ್ದ ಆರೋಪಿಗಳು, ಬ್ಯಾಟ್ ಹಾಗೂ ದೊಣ್ಣೆಯಿಂದ ಹಲ್ಲೆ ನಡೆಸಿದ್ದರು. ಎಲೆಕ್ಟ್ರಿಕ್ ಶಾಕ್ ನೀಡಿ ಹತ್ಯೆ ಮಾಡಿದ್ದರು. ನಂತರ, ರಾಜಕಾಲುವೆಗೆ ಮೃತದೇಹ ಎಸೆದಿದ್ದರು. ಶೆಡ್‌ನಲ್ಲಿ ಹಲ್ಲೆ ನಡೆಸುವಾಗ ಕೆಲವು ಆರೋಪಿಗಳು ಮೊಬೈಲ್‌ನಲ್ಲಿ ಫೋಟೊ ತೆಗೆದುಕೊಂಡಿದ್ದರು. ವಿಡಿಯೊ ಚಿತ್ರೀಕರಿಸಿಕೊಂಡಿದ್ದರು. ರೇಣುಕಸ್ವಾಮಿ ಮೃತಪಟ್ಟ ಮೇಲೆ ಮೊಬೈಲ್ ಶಾಪ್‌ಗೆ ತೆರಳಿ ಎಲ್ಲ ಫೋಟೊ ಹಾಗೂ ವಿಡಿಯೊ ಡಿಲೀಟ್ ಮಾಡಿಸಿದ್ದರು.

ದರ್ಶನ್ ವಿರುದ್ಧ ಪ್ರಬಲ ಸಾಕ್ಷ್ಯ?: ಕೊಲೆ ಪ್ರಕರಣದಲ್ಲಿ ತನಿಖೆ ನಡೆಸಿದ ಪಶ್ಚಿಮ ವಿಭಾಗದ ಪೊಲೀಸರಿಗೆ ನಟ ದರ್ಶನ್ ಅವರ ವಿರುದ್ಧ ಪ್ರಬಲವಾದ ಸಾಕ್ಷ್ಯಗಳು ಲಭಿಸಿವೆ ಎನ್ನಲಾಗಿದೆ. ತಾಂತ್ರಿಕ ಸಾಕ್ಷ್ಯಾಧಾರ, ಎಫ್‌ಎಸ್‌ಎಲ್ ವರದಿ ಸಹಿತ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಲು ತನಿಖಾಧಿಕಾರಿಗಳು ಮುಂದಾಗಿದ್ದಾರೆ.

'ಕೊಲೆ ಪ್ರಕರಣದ ಆರಂಭಿಕ ತನಿಖೆಯಲ್ಲಿ ಲಭಿಸಿದ ಸಾಕ್ಷ್ಯಾಧಾರದಂತೆ ಪವಿತ್ರಾಗೌಡ ಅವರನ್ನು ಮೊದಲನೇ ಆರೋಪಿ, ದರ್ಶನ್ ಅವರನ್ನು ಎರಡನೇ ಆರೋಪಿ ಮಾಡಿ ನ್ಯಾಯಾಲಯಕ್ಕೆ ರಿಮ್ಯಾಂಡ್ ಅರ್ಜಿ ಸಲ್ಲಿಸಲಾಗಿತ್ತು. ಪ್ರದೂಷ್ ಐ–ಫೋನ್‌ನಲ್ಲಿ ಎರಡು ವಿಡಿಯೊಗಳು ಮರುಸಂಗ್ರಹವಾಗಿದ್ದು, ಇವು ದರ್ಶನ್ ಪಾತ್ರದ ಬಗ್ಗೆ ಪ್ರಬಲ ಸಾಕ್ಷ್ಯವಾಗಿವೆ. ಈಗ ದರ್ಶನ್ ಅವರನ್ನೇ ಮೊದಲ ಆರೋಪಿಯಾಗಿಸಿ ಆರೋಪ ಪಟ್ಟಿ ಸಲ್ಲಿಸುವ ಸಾಧ್ಯತೆಯಿದೆ' ಎಂದು ಮೂಲಗಳು ತಿಳಿಸಿವೆ.

ಕೊಲೆ ಪ್ರಕರಣದ ತನಿಖೆಯು ಅಂತಿಮ ಹಂತಕ್ಕೆ ಬಂದಿದ್ದು, ಕಾಮಾಕ್ಷಿಪಾಳ್ಯ ಠಾಣೆಯ ಪೊಲೀಸರು ಸೆಪ್ಟೆಂಬರ್ ಮೊದಲ ವಾರದಲ್ಲಿ 24ನೇ ಎಸಿಸಿಎಂ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಲು ಸಿದ್ಧತೆ ನಡೆಸಿದ್ದಾರೆ. ಬೆಂಗಳೂರು ಹಾಗೂ ಹೈದರಾಬಾದ್‌ನ ಎಫ್‌ಎಸ್‌ಎಲ್‌ನಿಂದ ಶೇ 70ರಷ್ಟು ವರದಿಗಳು ತನಿಖಾಧಿಕಾರಿಗಳ ಕೈಸೇರಿವೆ. ಉಳಿದ ವರದಿಗಳು ಬಂದ ಕೂಡಲೇ ಅಂತಿಮ ಆರೋಪ ಪಟ್ಟಿ ಸಲ್ಲಿಸಲಾಗುವುದು ಎಂದು ತನಿಖಾ ಮೂಲಗಳು ತಿಳಿಸಿವೆ.

ಎರವಲು ಸೇವೆಯ ಗರಿಷ್ಠ ಅವಧಿ ಮುಗಿದರೂ ಪಾಲಿಕೆಯಲ್ಲೇ ಠಿಕಾಣಿ

ಬಿಬಿಎಂಪಿ ಬಿಡದ ಅರಣ್ಯ ಅಧಿಕಾರಿಗಳು

● ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿಯಲ್ಲಿ ಎರವಲು ಸೇವೆಯ ಗರಿಷ್ಠ ಅವಧಿ ಮುಗಿದಿದ್ದರೂ ಕಾನೂನುಬಾಹಿರವಾಗಿ ಅರಣ್ಯ ಇಲಾಖೆಯ 11 ಅಧಿಕಾರಿಗಳು ಪಾಲಿಕೆಯಲ್ಲೇ ಉಳಿದಿದ್ದಾರೆ.

ಬಿಬಿಎಂಪಿ ಕಾಯ್ದೆ– 2020ರ ನಿಯೋಜನಾ ನೀತಿ ಅನ್ವಯ, ವಿವಿಧ ಇಲಾಖೆಗಳಿಂದ ಎರವಲು ಸೇವೆ ಮೇಲೆ ಪಾಲಿಕೆಗೆ ಬರುವವರ ಅವಧಿಯನ್ನು, ಮೊದಲ ಮೂರು ವರ್ಷ ಮತ್ತು ನಂತರ ಇನ್ನೆರಡು ವರ್ಷ ವಿಸ್ತರಣೆ ಸೇರಿದಂತೆ ಗರಿಷ್ಠ ಐದು ವರ್ಷಕ್ಕೆ ನಿಗದಿಪಡಿಸಲಾಗಿದೆ. ಆದರೆ, ಅರಣ್ಯ ಇಲಾಖೆಯಿಂದ 2015ರಲ್ಲಿ ನಿಯೋಜನೆಗೊಂಡಿರುವ ಅಧಿಕಾರಿಗಳು ಇನ್ನೂ ವಾಪಸ್ ಹೋಗಿಲ್ಲ.

ಸರ್ಕಾರಿ ನೌಕರರ ನಿಯೋಜನೆ ಸುತ್ತೋಲೆಯಲ್ಲೂ ನಿಯೋಜನಾ ಅವಧಿಯನ್ನು ಐದು ವರ್ಷಗಳಿಗಿಂತ ಹೆಚ್ಚು ವಿಸ್ತರಿಸದಂತೆ ಸೂಚಿಸಲಾಗಿದೆ. ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದರೂ, ವಿಶೇಷ ಆದೇಶಗಳಿದ್ದರೂ ಐದು ವರ್ಷಕ್ಕಿಂತ ಹೆಚ್ಚು ಅವಧಿ ಇರಬಾರದು. ಆದ್ದರಿಂದ, ನಿಯೋಜನೆ ಅವಧಿ ಪೂರ್ಣಗೊಂಡಿರುವ 11 ಮಂದಿಯನ್ನು ಮಾತೃ ಇಲಾಖೆಗೆ ವಾಪಸ್ ಕಳುಹಿಸಬೇಕು ಎಂದು ಬಿಬಿಎಂಪಿ ಆಡಳಿತದ ಉಪ ಆಯುಕ್ತರು ನಗರಾಭಿವೃದ್ಧಿ ಇಲಾಖೆಗೆ ಮೇ 16ರಂದು ಪತ್ರ ಬರೆದಿದ್ದಾರೆ.

‘ಒಟ್ಟಾಗಿ 11 ಮಂದಿಯನ್ನೂ ವಾಪಸ್ ಕರೆಯಿಸಿಕೊಂಡರೆ ಬಿಬಿಎಂಪಿಯಲ್ಲಿ ಅರಣ್ಯ ವಿಭಾಗದ ಕೆಲಸಗಳಿಗೆ ತೊಂದರೆಯಾಗುತ್ತದೆ. ಆದ್ದರಿಂದ ಇವರ ಹುದ್ದೆಗೆ ಬೇರೆಯವರನ್ನು ನಿಯೋಜಿಸಿ, ಮಾತೃ ಇಲಾಖೆಗೆ ಹಿಂದಿರುಗಿಸಬೇಕು’ ಎಂದು ಉಪ ಆಯುಕ್ತರು ಬರೆದಿರುವ ಪತ್ರದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ. ಇಷ್ಟಾದರೂ ತಮ್ಮ ‘ಪ್ರಭಾವ’ದಿಂದ 11 ಮಂದಿ ಈವರೆಗೂ ಪಾಲಿಕೆಯಲ್ಲೇ ಕಾರ್ಯನಿರ್ವಹಿಸುತ್ತಿದ್ದಾರೆ.

ಅರಣ್ಯ ಇಲಾಖೆಯಿಂದ ವಿನಯ್ ಕುಮಾರ್ ಹಾಗೂ ಶಿವಣ್ಣ ಅವರನ್ನು ಬಿಬಿಎಂಪಿಯ ಉಪ ವಲಯ ಅರಣ್ಯಾಧಿಕಾರಿ ಹುದ್ದೆಗೆ ಜೂನ್ 7ರಂದು ನಿಯೋಜಿಸಲಾಗಿದೆ. ಈ ಇಬ್ಬರು ಬಂದ ನಂತರ ಗರಿಷ್ಠ ಅವಧಿ ಪೂರೈಸಿರುವ 11 ಮಂದಿಯಲ್ಲಿ ಇಬ್ಬರಾದರೂ ಮಾತೃ ಇಲಾಖೆಗೆ ವಾಪಸ್ ಹೋಗಬೇಕಿತ್ತು. ಆದರೆ, 2015, 2018ರಿಂದ ಇರುವ ವಿ. ಚಂದ್ರಪ್ಪ, ಜಿ.ಆರ್. ಮಹೇಶ್, ನರೇಂದ್ರ ಬಾಬು ಅವರು ಇನ್ನೂ ಪಾಲಿಕೆಯಲ್ಲೇ ಉಳಿದುಕೊಂಡಿದ್ದಾರೆ.

‘ಅಧಿಕಾರಿಗಳ ಮೇಲೆ ತಮ್ಮ ಪ್ರಭಾವ ಬೀರಿ ಬಿಬಿಎಂಪಿಯ ಒಂದು ವಲಯದಿಂದ ಮತ್ತೊಂದು ವಲಯಕ್ಕೆ ವರ್ಗಾವಣೆ ಪಡೆದು ಕಣ್ಣಾಮುಚ್ಚಾಲೆಯಾಡುತ್ತಿದ್ದಾರೆ. 11 ಮಂದಿಯಲ್ಲಿ ಒಂಬತ್ತು ಮಂದಿ ಉಪ ವಲಯ ಅರಣ್ಯಾಧಿಕಾರಿಗಳಾಗಿದ್ದು (ಡಿಆರ್‌ಎಫ್‌ಒ), ಅವರೇ ವಲಯ ಅರಣ್ಯಾಧಿಕಾರಿಯ (ಆರ್‌ಎಫ್‌ಒ) ಹುದ್ದೆಯ ಹೆಚ್ಚುವರಿ ಪ್ರಭಾರವನ್ನೂ ಹೊಂದಿದ್ದಾರೆ’ ಎಂದು ಪಾಲಿಕೆಯಲ್ಲಿರುವ ಅರಣ್ಯ ಸಿಬ್ಬಂದಿಯೇ ದೂರುತ್ತಾರೆ.

‘ಅವಧಿ ಮೀರಿ ಬಿಬಿಎಂಪಿಯಲ್ಲಿರುವ ಸಿಬ್ಬಂದಿಯನ್ನು ಹಿಂಪಡೆಯಬೇಕು’ ಎಂದು ಅರಣ್ಯ ಇಲಾಖೆಗೆ ನಗರಾಭಿವೃದ್ಧಿ ಇಲಾಖೆಯಿಂದ ಆಗಸ್ಟ್ 1ರಂದು ಮತ್ತೊಮ್ಮೆ ಪತ್ರ ಬರೆದಿದ್ದರೂ ಯಾವುದೇ ಕ್ರಮವಾಗಿಲ್ಲ.

ಎರಡು ಹುದ್ದೆ!

‘ವಲಯ ಅರಣ್ಯಾಧಿಕಾರಿಗಳು ನಿಯೋಜನೆಗೊಂಡಿದ್ದರೂ, ಉಪ ವಲಯ ಅರಣ್ಯಾಧಿಕಾರಿಗಳಿಗೇ ಹೆಚ್ಚುವರಿಯಾಗಿ ವಲಯ ಅರಣ್ಯಾಧಿಕಾರಿ ಹುದ್ದೆಯ ಪ್ರಭಾರವನ್ನೂ ವಹಿಸಲಾಗಿದೆ. ಎರಡು ಹುದ್ದೆಯನ್ನು ಕಾನೂನುಬಾಹಿರವಾಗಿ ನಿರ್ವಹಿಸುತ್ತಿದ್ದಾರೆ’ ಎಂದು ಬಿಬಿಎಂಪಿ ಸಿಬ್ಬಂದಿ ಆರೋಪಿಸುತ್ತಾರೆ.

‘ಬಿಬಿಎಂಪಿಯ ಇಲಾಖೆಗಳಲ್ಲಿ ಗರಿಷ್ಠ ಅವಧಿ ಮೀರಿದ್ದರೂ ಎರವಲು ಸೇವೆಯಲ್ಲಿ ಹಲವು ಅಧಿಕಾರಿಗಳು ಮುಂದುವರಿದಿದ್ದಾರೆ. ಅವರನ್ನೆಲ್ಲ ವಾಪಸ್ ಕಳುಹಿಸಬೇಕು’ ಎಂದು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ಒತ್ತಾಯಿಸಿದರು.

ಎರವಲು ಸೇವೆ ಅವಧಿ ಮುಗಿಸಿರುವ ಅಧಿಕಾರಿಗಳು

ಹೆಸರು	ಹುದ್ದೆ	ಪಾಲಿಕೆಗೆ ನಿಯೋಜನೆಗೊಂಡ ದಿನ
ವಿ. ಚಂದ್ರಪ್ಪ	ಡಿಆರ್‌ಎಫ್‌ಒ	9 ನವೆಂಬರ್ 2015
ಜಿ.ಆರ್. ಮಹೇಶ್	ಡಿಆರ್‌ಎಫ್‌ಒ	18 ಜನವರಿ 2018
ನರೇಂದ್ರಬಾಬು ಎನ್.ಆರ್	ಡಿಆರ್‌ಎಫ್‌ಒ	9 ಜುಲೈ 2018
ಶಿವರಾಮು	ಆರ್‌ಎಫ್‌ಒ	11 ಸೆಪ್ಟೆಂಬರ್ 2018
ಹರೀಶ್ ಎಚ್.ಆರ್	ಡಿಆರ್‌ಎಫ್‌ಒ	13 ಮಾರ್ಚ್ 2019
ನಾಗೇಂದ್ರ ಪಿ	ಅರಣ್ಯ ರಕ್ಷಕ	18 ಸೆಪ್ಟೆಂಬರ್ 2019
ಕೆ.ಎಸ್. ರವೀಂದ್ರನಾಥ್	ಡಿಆರ್‌ಎಫ್‌ಒ	18 ಸೆಪ್ಟೆಂಬರ್ 2019
ತಿಮ್ಮಪ್ಪ	ಡಿಆರ್‌ಎಫ್‌ಒ	13 ಜುಲೈ 2020
ವಿ. ಜಗದೀಶ್	ಡಿಆರ್‌ಎಫ್‌ಒ	8 ಮೇ 2021
ಮುತ್ತುರಾಜ್	ಡಿಆರ್‌ಎಫ್‌ಒ	12 ಜುಲೈ 2021
ಸುದರ್ಶನ್ ಎ	ಡಿಆರ್‌ಎಫ್‌ಒ	2 ನವೆಂಬರ್ 2021

ಅವಧಿ ಮೀರಿರುವವರನ್ನು ಮಾತೃ ಇಲಾಖೆಗೆ ವಾಪಸ್ ಕಳುಹಿಸಲು ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆಯಲಾಗಿದೆ. ಇನ್ನೂ ಉತ್ತರ ಬಂದಿಲ್ಲ

ಬಿ.ಎಸ್. ಮಂಜುನಾಥ ಸ್ವಾಮಿ
ಉಪ ಆಯುಕ್ತ (ಆಡಳಿತ), ಬಿಬಿಎಂಪಿ



ನಗರದಲ್ಲಿ ಬುಧವಾರ ಮುಖ್ಯಮಂತ್ರಿ.ಸಿದ್ದರಾಮಯ್ಯ ಅವರನ್ನು ಬೆಂಬಲಿಸಿ, ಬಿಜೆಪಿ ಮತ್ತು ಜೆಡಿಎಸ್ ನಡೆ ಖಂಡಿಸಿ ಕರ್ನಾಟಕ ಶೋಷಿತ ಸಮುದಾಯಗಳ ಮಹಾಒಕ್ಕೂಟ ಆಯೋಜಿಸಿದ್ದ ಪಂಜಿನ ಮೆರವಣಿಗೆಯಲ್ಲಿ ವಿದ್ಯಾರ್ಥಿಗಳು ಮತ್ತು ಸಮುದಾಯದ ನಾಯಕರು ಭಾಗವಹಿಸಿದ್ದರು – ಪ್ರಜಾವಾಣಿ ಚಿತ್ರ

ಸಿ.ಎಂ ಬೆಂಬಲಿಸಿ ಪಂಜಿನ ಮೆರವಣಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯಪಾಲರೇ, ಕೇಂದ್ರ ಸರ್ಕಾರದ ಕೈಗೊಂಬೆಯಾಗದೆ ಸಾಂವಿಧಾನಿಕವಾಗಿ ನಡೆದುಕೊಳ್ಳಿ’ ಎಂದು ಆಗ್ರಹಿಸಿ ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ನೇತೃತ್ವದಲ್ಲಿ ಬುಧವಾರ ಪಂಜಿನ ಮೆರವಣಿಗೆ ನಡೆಯಿತು.

ಸಿದ್ದರಾಮಯ್ಯ ಬೆಂಬಲಿಸಿ, ಬಿಜೆಪಿ ಮತ್ತು ಜೆಡಿಎಸ್ ನಡೆ ಖಂಡಿಸಿ ಈ ಮೆರವಣಿಗೆಯನ್ನು ಕರ್ನಾಟಕ ಶೋಷಿತ ಸಮುದಾಯಗಳ ಮಹಾಒಕ್ಕೂಟ ಹಮ್ಮಿಕೊಂಡಿತ್ತು.

ಸಾಮಾಜಿಕ ನ್ಯಾಯದ ಪರವಾಗಿರುವ ಸಿದ್ದರಾಮಯ್ಯನವರ ವಿರುದ್ಧದ ಪಿತೂರಿಯನ್ನು ಇಲ್ಲಿಗೆ ನಿಲ್ಲಿಸಬೇಕು. ಸಂವಿಧಾನದ ರಕ್ಷಕರಾಗಿರುವ ರಾಜ್ಯಪಾಲರು ಸಂವಿಧಾನ ವಿರುದ್ಧ ನಡೆಯನ್ನು ತೋರಬಾರದು. ಬಿಜೆಪಿ ಮತ್ತು ಜೆಡಿಎಸ್ ಸೇರಿ ಮಾಡುತ್ತಿರುವ ಕುತಂತ್ರಕ್ಕೆ ಒಳಗಾಗಬಾರದು. ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿಯ ವಿರುದ್ಧ ತನಿಖೆಗೆ ಅನುಮತಿ ನೀಡುವ ಮೂಲಕ ಸಮಾನವಾಗಿ ನಡೆದುಕೊಳ್ಳಬೇಕು ಎಂದು ಒತ್ತಾಯಿಸಲಾಯಿತು.

ಸಾಮಾಜಿಕ ನ್ಯಾಯದ ನಾಯಕತ್ವ ಉಳಿಸಲು ಆ.27ರಂದು ನಡೆಯಲಿರುವ ರ‍್ಯಾಲಿ ಮತ್ತು ಮಹಾಸಮಾವೇಶದಲ್ಲಿ ಎಲ್ಲ ಶೋಷಿತರು, ಹಿಂದುಳಿದವರು, ವಿದ್ಯಾರ್ಥಿಗಳು ಭಾಗವಹಿಸಲು ನಿರ್ಧರಿಸಲಾಯಿತು.

ಶಿರೂರು ದುರಂತ: ರಕ್ಷಣಾ ಕಾರ್ಯ ಸ್ಥಗಿತ–ಸರ್ಕಾರ

ಬೆಂಗಳೂರು: ‘ಉತ್ತರ ಕನ್ನಡ ಜಿಲ್ಲೆ ಅಂಕೋಲಾ ತಾಲ್ಲೂಕಿನ ಶಿರೂರು ಗ್ರಾಮ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ-66ರ ಅಂಚಿನಲ್ಲಿ ಸಂಭವಿಸಿದ ಗುಡ್ಡ ಕುಸಿತದ ಪ್ರಕರಣದಲ್ಲಿ; ನಾಪತ್ತೆಯಾದವರ ಹುಡುಕಾಟ ಹಾಗೂ ಇತರೆ ರಕ್ಷಣಾ ಕಾರ್ಯಗಳನ್ನು ಸದ್ಯಕ್ಕೆ ಸ್ಥಗಿತಗೊಳಿಸಲಾಗಿದೆ’ ಎಂದು ರಾಜ್ಯ ಸರ್ಕಾರ, ಹೈಕೋರ್ಟ್‌ಗೆ ತಿಳಿಸಿದೆ.

ಈ ಸಂಬಂಧ ಹೈಕೋರ್ಟ್ ವಕೀಲ ಶಿಜಿ ಮಲಯಾಳಿ ಹಾಗೂ ನವದೆಹಲಿಯ ಕೆ.ಆರ್.ಸುಭಾಷ್ ಚಂದ್ರನ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಹಾಜರಾಗಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ, ‘ಮಣ್ಣಿನಡಿ ಸಿಲುಕಿದ್ದ 11 ಜನರ ಪೈಕಿ 8 ಜನರ ಮೃತ ದೇಹಗಳನ್ನು ಪತ್ತೆ ಹಚ್ಚಿ ಹೊರತೆಗೆಯಲಾಗಿದ್ದು, ಇನ್ನೂ ಮೂವರ ಪತ್ತೆಯಾಗಬೇಕಿದೆ. ಆದರೆ, ನದಿಯಲ್ಲಿ ನೀರಿನ ಪ್ರಮಾಣ ಹಾಗೂ ರಭಸ ಹೆಚ್ಚಾಗಿದೆ. ಕೆಲವು ಪ್ರತಿಕೂಲ ಸಂದರ್ಭಗಳು ಎದುರಾದ ಹಿನ್ನೆಲೆಯಲ್ಲಿ ಇದೇ 16ರಿಂದ ರಕ್ಷಣಾ ಕಾರ್ಯ ಸ್ಥಗಿತಗೊಳಿಸಲಾಗಿದೆ’ ಎಂದರು.



ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದ ‘ಜ್ಞಾನ ವಿಜ್ಞಾನ ಸಮಿತಿ’ಯ ಅಧ್ಯಕ್ಷರಾಗಿ ಆಯ್ಕೆಯಾದ ವಿಜಯಲಕ್ಷ್ಮಿ ಸತ್ಯಮೂರ್ತಿ ಅವರ ಪದಗ್ರಹಣ ಕಾರ್ಯಕ್ರಮದಲ್ಲಿ ಶಿಕ್ಷಣ ತಜ್ಞ ಎಚ್. ಎಸ್. ಗಣೇಶ ಭಟ್ಟ, ರಮಣಶ್ರೀ ಸಮೂಹ ಸಂಸ್ಥೆಗಳ ಅಧ್ಯಕ್ಷ ಎಸ್. ಷಡಕ್ಷರಿ, ಸಾಹಿತಿ ಭಾಗ್ಯಲಕ್ಷ್ಮಿ ಮಗ್ಗೆ, ಜ್ಞಾನ ವಿಜ್ಞಾನ ಸಮಿತಿಯ ಬೆಂಗಳೂರು ನಗರ ಜಿಲ್ಲಾ ಅಧ್ಯಕ್ಷ ನಾ. ಶ್ರೀಧರ್ ಇದ್ದರು

ಮೈಸೂರು ರೇಸ್

ರಾಯಲ್ ಡಿಫೆಂಡರ್ ಗೆಲ್ಲುವ ನಿರೀಕ್ಷೆ

ಮೈಸೂರು ರೇಸ್ ಕ್ಲಬ್ ಮಿಲಿಯನ್ ಗುರುವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ರಾಯಲ್ ಡಿಫೆಂಡರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ.

1ನೇ ರೇಸ್: ಸೂಪರ್ ಸೆಕ್ಸಿ 2, ಡಿ ಫೈಟರ್ 1, ಶೂಟಿಂಗ್ ವೀನಸ್ 6
2ನೇ ರೇಸ್: ನ್ಯಾಚುರಲ್ ಸ್ಪೀಡ್ 1, ಸರ್ವೋತ್ತಮ್ 7, ಡಿ ಲಾರ್ಡ್ 6
3ನೇ ರೇಸ್: ಸಿಲ್ವರ್ ಸ್ಪ್ರಿಂಗ್ 1, ಡಿ ರೋಮನ್ ರೀನ್ಸ್ 3, ಕಂಟ್ರಿ ಮ್ಯಾಜಿಕ್ 9
4ನೇ ರೇಸ್: ಕಾನ್ಫಿಡೆಂಟ್ ಗೇಮ್ 2, ಸೀ ಗಾಡ್ 10, ನ್ಯಾಚುರಲ್ ಗೋಲ್ಡ್ 8
5ನೇ ರೇಸ್: ರಾಯಲ್ ಡಿಫೆಂಡರ್ 1, ಆರ್ಟ್ ಆಫ್ ರೊಮಾನ್ಸ್ 6, ಕ್ರಿಮ್ಸನ್ ಫ್ಲೇಮ್ 7
6ನೇ ರೇಸ್: ಗೋಲ್ಡ್ ಕೈಟ್ 1, ಟಾಮ್ ಕ್ರೂಸರ್ 5, ಕಾಂಟ್ರಿಬ್ಯೂಟರ್ 8
7ನೇ ರೇಸ್: ಅಥುಲ್ಯ 2, ಹಿಸ್ ಎಮಿನೆನ್ಸ್ 1, ಎಕ್ಸುಬೆರನ್ಸ್ 3

ಉತ್ತಮ ಬೆಟ್: ಸಿಲ್ವರ್ ಸ್ಪ್ರಿಂಗ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

6 ವರ್ಷ ಹಿಂದಿನ ದೂರು: ಸಾರಿಗೆ ಇಲಾಖೆಗೆ ಹೈಕೋರ್ಟ್ ಖಡಕ್ ಎಚ್ಚರಿಕೆ

ಲೈಂಗಿಕ ಕಿರುಕುಳ: ಕ್ರಮಕ್ಕೆ ನಿರ್ಲಕ್ಷ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಓಲಾ ಕ್ಯಾಬ್‌ನ ಚಾಲಕ ನನಗೆ ಲೈಂಗಿಕ ಕಿರುಕುಳ ನೀಡಿದ್ದಾನೆ ಎಂದು ಆರೋಪಿಸಿ ಯುವತಿಯೊಬ್ಬರು ಆರು ವರ್ಷಗಳ ಹಿಂದೆ ನೀಡಿದ್ದ ದೂರಿಗೆ ಸಂಬಂಧಿಸಿದಂತೆ ಸರ್ಕಾರ ಈತನಕ ಯಾವುದೇ ಕ್ರಮ ಕೈಗೊಂಡಿಲ್ಲ’ ಎಂಬ ಆಕ್ಷೇಪಣೆಯನ್ನು ಗಂಭೀರವಾಗಿ ಪರಿಗಣಿಸಿರುವ ಹೈಕೋರ್ಟ್, ರಾಜ್ಯ ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.

ಈ ಸಂಬಂಧ 22 ವರ್ಷದ ಯುವತಿಯೊಬ್ಬರು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಜಿ.ಎಸ್.ಕಮಲ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಭವಿಷ್ಯದಲ್ಲಿ ಎದುರಾಗುವ ಎಲ್ಲ ಪರಿಣಾಮಗಳಿಗೂ ಸಿದ್ಧವಾಗಿರಿ’ ಎಂದು ಸಾರಿಗೆ ಇಲಾಖೆಯ ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಿದೆ.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು ಸಲ್ಲಿಸಿದ ಪ್ರಮಾಣ ಪತ್ರದ ವಿವರಣೆಗೆ ತೀವ್ರ ಅಸಮಾಧಾನ ಹೊರಹಾಕಿದ ನ್ಯಾಯಪೀಠ, ‘ಈ ಅರ್ಜಿಯು ಅರ್ಧ ದಶಕದಿಂದ ಬಾಕಿ ಇದೆ. ನ್ಯಾಯಪೀಠ ಗಂಟಲು ಶೋಷಣೆ ಮಾಡಿ ಕುಟುಕಿದ ಪರಿಣಾಮ ನೀವು ಈಗ ಈ ದಾಖಲೆಗಳ ಜೊತೆ ಬಂದಿದ್ದೀರಿ. ಆದರೆ, ನೀವು ಕೊಟ್ಟಿರುವ ಈ ದಾಖಲೆಗಳು ನಿರಾಶಾದಾಯಕವಾಗಿವೆ. ಇದನ್ನು ಗಮನಿಸಿದರೆ ನಿಮಗೆ ಈ ಪ್ರಕರಣದಲ್ಲಿ ಯಾವುದೇ ಕ್ರಮ ಕೈಗೊಳ್ಳುವ ಆಸಕ್ತಿ ಇದ್ದಂತೆ ಕಾಣುತ್ತಿಲ್ಲ’ ಎಂದು ನ್ಯಾಯಪೀಠ ಸರ್ಕಾರವನ್ನು ಝಾಡಿಸಿತು.

‘ಯುವತಿಯ ಮೇಲೆ ಓಲಾ ಚಾಲಕ ಲೈಂಗಿಕ ದೌರ್ಜನ್ಯ ಎಸಗಿರುವ ಘಟನೆಯನ್ನು ನಿಯಮದ ಪ್ರಕಾರ ಓಲಾ ಸಂಸ್ಥೆಯು ಸರ್ಕಾರದ ಗಮನಕ್ಕೆ ಏಕೆ ತಂದಿಲ್ಲ? ನೀವು ಸುಮ್ಮನೇ ಕುಳಿತಿದ್ದೀರಲ್ಲವೇ? ನಾವು ನಿಮ್ಮಿಂದ ಉತ್ತಮ ಉತ್ತರದ ನಿರೀಕ್ಷೆಯಲ್ಲಿದ್ದೆವು. ಆದರೆ, ಪ್ರಮಾಣ ಪತ್ರ ನೋಡಿದರೆ ಇದು ಕೇವಲ ಕಣ್ಣೊರೆಸುವ ತಂತ್ರವಾಗಿ ಗೋಚರಿಸುತ್ತಿದೆ’ ಎಂದು ಚಾಟಿ ಬೀಸಿತು.

‘ಓಲಾಕ್ಕೆ ನೋಟಿಸ್ ಜಾರಿ ಮಾಡುವುದಕ್ಕೂ ಮುನ್ನ ಏನಾಗಿದೆ ಎಂಬ ಮಾಹಿತಿಯೇ ನಿಮ್ಮ ಬಳಿ ಇಲ್ಲ. ಇದು ತೀರಾ ದುರದೃಷ್ಟಕರ. ಮುಂದೆ ಏನಾಗುತ್ತದೆ ಎಂಬುದಕ್ಕೆ ನಿಮ್ಮ ಅಧಿಕಾರಿಗಳಿಗೆ ಸಿದ್ಧವಾಗಿರಲು ಹೇಳಿ’ ಎಂದು ಎಚ್ಚರಿಕೆ ನೀಡಿ ಅರ್ಜಿ ವಿಚಾರಣೆ ಪೂರ್ಣಗೊಳಿಸಿದ ನ್ಯಾಯಪೀಠ ಆದೇಶ ಕಾಯ್ದಿರಿಸಿತು.

ಪ್ರಕರಣವೇನು?: ‘ಕೆಲಸದ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ ನಿಷೇಧ, ತಡೆ ಮತ್ತು ಪರಿಹಾರ ಕಾಯ್ದೆ–2013ರ ವಿವಿಧ ಕಲಂಗಳ ಅನ್ವಯ ಓಲಾ ಕ್ಯಾಬ್‌ನ ಮಾತೃ ಸಂಸ್ಥೆ ಎಎನ್‌ಐ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್‌ನ ಆಂತರಿಕ ದೂರು ಸಮಿತಿಗೆ 2018ರ ಸೆಪ್ಟೆಂಬರ್ 30ರಂದು ನೀಡಿರುವ ದೂರಿನ ತನಿಖೆ ನಡೆಸಲು ನಿರ್ದೇಶಿಸಬೇಕು’ ಎಂದು ಕೋರಿ ಯುವತಿ ಹೈಕೋರ್ಟ್‌ಗೆ ಈ ಅರ್ಜಿ ಸಲ್ಲಿಸಿದ್ದಾರೆ.

ಮಹೇಶ್ ಶೆಟ್ಟಿ ತಿಮರೋಡಿ ಖುದ್ದು ಹಾಜರಿಗೆ ಹೈಕೋರ್ಟ್ ಆದೇಶ

ಬೆಂಗಳೂರು: ಭೂ ಕಬಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ಖುದ್ದು ಹಾಜರಾಗುವಂತೆ ಮಹೇಶ್ ಶೆಟ್ಟಿ ತಿಮರೋಡಿ ಮತ್ತು ಅವರ ಪತ್ನಿಗೆ ಹೈಕೋರ್ಟ್ ಆದೇಶಿಸಿದೆ.

ಉಜಿರೆಯ ಜಯಪ್ರಕಾಶ್ ಶೆಟ್ಟಿ ದಾಖಲಿಸಿರುವ ಸಿವಿಲ್ ನ್ಯಾಯಾಂಗ ನಿಂದನೆ ಮೊಕದ್ದಮೆಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ಸೋಮಶೇಖರ್ ನೇತೃತ್ವದ ವಿಭಾಗೀಯ ನ್ಯಾಯಪೀಠವು ಈ ಕುರಿತಂತೆ ಆದೇಶಿಸಿದೆ. ವಿಚಾರಣೆ ವೇಳೆ ಅರ್ಜಿದಾರರ ಪರ ಹಾಜರಿದ್ದ ಹಿರಿಯ ವಕೀಲ ಕೆ.ಚಂದ್ರನಾಥ ಆರಿಗ ಅವರು, ‘ಪ್ರತಿವಾದಿಗಳಾದ ಮಹೇಶ್ ಶೆಟ್ಟಿ ತಿಮರೋಡಿ ಹಾಗೂ ಇತರರು 2019ರ ಜುಲೈ18ರಂದು ರಿಟ್ ಅರ್ಜಿಯೊಂದರಲ್ಲಿ ಹೈಕೋರ್ಟ್‌ನ ಏಕಸದಸ್ಯ ನ್ಯಾಯಪೀಠ ನೀಡಿರುವ ಆದೇಶವನ್ನು ಉಲ್ಲಂಘಿಸಿದ್ದಾರೆ’ ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು. ಇದನ್ನು ಪರಿಗಣಿಸಿದ ನ್ಯಾಯಪೀಠವು ಪ್ರತಿವಾದಿಗಳು ಖುದ್ದು ಹಾಜರಾಗುವಂತೆ ಆದೇಶಿಸಿ ವಿಚಾರಣೆಯನ್ನು ಇದೇ 29ಕ್ಕೆ ಮುಂದೂಡಿತು.

ಪ್ರತಿಭಟನೆ ವೇಳೆ ಕೃಷಿಕ ಸಾವು



ತರೀಕೆರೆ (ಚಿಕ್ಕಮಗಳೂರು ಜಿಲ್ಲೆ): ಅರಣ್ಯ ಇಲಾಖೆ ಅಧಿಕಾರಿಗಳು ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ರೈತರು ಮತ್ತು ವಿವಿಧ ಪಕ್ಷಗಳ ಮುಖಂಡರು ನಡೆಸಿದ ಪ್ರತಿಭಟನೆಯ ಸಂದರ್ಭದಲ್ಲಿ ಲಕ್ಕವಳ್ಳಿ ಹೋಬಳಿಯ ಗುರುಪುರ ಗ್ರಾಮದ ಕೃಷಿಕ ಮಣಿ ಬಿನ್ ವೇಲಾಯುಧನ್ (28) ಸಾವಿಗೀಡಾಗಿದ್ದಾರೆ.

ಲಕ್ಕವಳ್ಳಿ ವಲಯ ಅರಣ್ಯಾಧಿಕಾರಿ ಕಚೇರಿಯ ಮುಂದೆ ರೈತರ ಹಿತರಕ್ಷಣಾ ಸಮಿತಿ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಿತ್ತು. ಭದ್ರಾವತಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಮನವಿ ಪತ್ರ ಸ್ವೀಕರಿಸಿ ಮಾತನಾಡುತ್ತಿದ್ದಾಗ ಮಣಿ ಕುಸಿದು ಬಿದ್ದಿದ್ದಾರೆ. ಲಕ್ಕವಳ್ಳಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಸಾಗಿಸುವಾಗ ಮಾರ್ಗಮಧ್ಯೆ ಕೊನೆಯುಸಿರೆಳೆದಿದ್ದಾರೆ. ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ.



ಮಂತ್ರಾಲಯದ ಶ್ರೀಮಠದ ಆವರಣದಲ್ಲಿ ಸ್ವರ್ಣ ರಥದಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ ಚಿನ್ನದ ಉತ್ಸವಮೂರ್ತಿ ಇಟ್ಟು ಬುಧವಾರ ಭವ್ಯ ಮೆರವಣಿಗೆ ಮಾಡಲಾಯಿತು

ರಾಯರ ರಥೋತ್ಸವ

ಮಂತ್ರಾಲಯ (ರಾಯಚೂರು): ಶ್ರೀ ಗುರು ರಾಘವೇಂದ್ರ ಸ್ವಾಮಿಗಳ 353ನೇ ಆರಾಧನಾ ಮಹೋತ್ಸವ ಅಂಗವಾಗಿ ಮಂತ್ರಾಲಯದಲ್ಲಿ ಬುಧವಾರ ಗುರು ರಾಯರ ಮಧ್ಯಾರಾಧನೆ ವಿಜೃಂಭಣೆಯಿಂದ ಜರುಗಿತು.

ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಸ್ವಾಮಿಗಳ ನೇತೃತ್ವದಲ್ಲಿ ಬೆಳಿಗ್ಗೆ ವಿಶೇಷ ಮಹಾಪಂಚಾಮೃತ ಅಭಿಷೇಕ ಹಾಗೂ ಪೂಜೆ ನಡೆಯಿತು. ಮಠದ ಪ್ರಾಂಗಣದಲ್ಲಿ ಚಿನ್ನದ ರಥೋತ್ಸವ ನಡೆಯಿತು. ರಥೋತ್ಸವದಲ್ಲಿ ದೇಶದ ವಿವಿಧೆಡೆಯ ಭಕ್ತರು ಪಾಲ್ಗೊಂಡು ಸಂಭ್ರಮಿಸಿದರು.

ಸ್ವರ್ಣ ಕವಚ ರಾಯರ ವೃಂದಾವನಕ್ಕೆ ಪುಷ್ಪಗಳಿಂದ ಅಲಂಕರಿಸಲಾಗಿತ್ತು. ಬೆಳಗಿನ ಜಾವದಿಂದಲೇ ಮಠದಲ್ಲಿ ಪೂಜಾ ಕೈಂಕರ್ಯಗಳು ಅದ್ದೂರಿಯಾಗಿ ಸಂಪನ್ನಗೊಂಡವು. ರಾತ್ರಿ ಪ್ರಸಿದ್ಧ ಕಲಾವಿದರಿಂದ ಸಂಗೀತ, ನೃತ್ಯ ಕಾರ್ಯಕ್ರಮಗಳು ನಡೆದವು.

‘ಕೃಷ್ಣಾ ನ್ಯಾಯಮಂಡಳಿ ಅಂತಿಮ ತೀರ್ಪು; ಪ್ರಧಾನಿ ಶೀಘ್ರ ತೀರ್ಮಾನಿಸಲಿ’

ಗೆಜೆಟ್ ಅಧಿಸೂಚನೆಗೆ ಸಿ.ಎಂ ಒತ್ತಾಯ

ಪ್ರಜಾವಾಣಿ ವಾರ್ತೆ

ವಿಜಯಪುರ: ‘ಕೃಷ್ಣಾ ನ್ಯಾಯಮಂಡಳಿ ಅಂತಿಮ ತೀರ್ಪು ಹೊರಡಿಸುವ ಬಗ್ಗೆ ಪ್ರಧಾನಿಯವರು ತಕ್ಷಣವೇ ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ ಮತ್ತು ಮಹಾರಾಷ್ಟ್ರ ರಾಜ್ಯಗಳ ಸಭೆ ಕರೆದು ಚರ್ಚಿಸಿ, ತೀರ್ಮಾನಿಸಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಒತ್ತಾಯಿಸಿದರು.

ಆಲಮಟ್ಟಿಯಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ ಸಾಗರಕ್ಕೆ ಬುಧವಾರ ಗಂಗಾಪೂಜೆ ಸಲ್ಲಿಸಿ, ಕೃಷ್ಣಾ ನದಿಗೆ ಬಾಗಿನ ಅರ್ಪಿಸಿದ ಬಳಿಕ ಅವರು ಸುದ್ದಿಗಾರರ ಜೊತೆ ಮಾತನಾಡಿದರು.

‘ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತದ ಕಾಮಗಾರಿಗೆ ಸಂಬಂಧಿಸಿದಂತೆ ಭೂಸ್ವಾಧೀನ, ಪುನರ್ವಸತಿಗೆ ರಾಜ್ಯ ಸರ್ಕಾರ ಸಿದ್ಧವಿದೆ. ಈ ಸಂಬಂಧ ಪ್ರತಿ ವರ್ಷ ₹20 ಸಾವಿರ ಕೋಟಿಯಂತೆ ₹1 ಲಕ್ಷ ಕೋಟಿ ಅನುದಾನ ಮೀಸಲಿಡುವ ಉದ್ದೇಶವಿದೆ’ ಎಂದು ಅವರು ಹೇಳಿದರು.

‘ಆಲಮಟ್ಟಿ ಅಣೆಕಟ್ಟೆಯನ್ನು 519.60 ಮೀಟರ್‌ನಿಂದ 524.25 ಮೀಟರ್‌ಗೆ ಎತ್ತರಿಸಲು ಕೇಂದ್ರ ಸರ್ಕಾರ ಗೆಜೆಟ್ ಅಧಿಸೂಚನೆ ಹೊರಡಿಸಬೇಕು. ಆಗ ಅಣೆಕಟ್ಟೆ ಎತ್ತರ ಹೆಚ್ಚಿಸಿ, ನಮ್ಮ ಪಾಲಿನ ನೀರು ಪಡೆಯಬಹುದು’ ಎಂದರು.

‘ಆಲಮಟ್ಟಿ ಅಣೆಕಟ್ಟೆ ಎತ್ತರಿಸುವುದರ ಜೊತೆಗೆ ಭೂಸ್ವಾಧೀನ, ಪುನರ್ವಸತಿ, ಪುನರ್‌ನಿರ್ಮಾಣದ ಬಗ್ಗೆ ಚರ್ಚಿಸಲು ಶೀಘ್ರದಲ್ಲೇ ವಿಜಯಪುರ, ಬಾಗಲಕೋಟೆ, ರಾಯಚೂರು, ಕಲಬುರಗಿ, ಯಾದಗಿರಿ, ರಾಯಚೂರು ಜಿಲ್ಲೆಗಳ ಜನಪ್ರತಿನಿಧಿಗಳ ಸಭೆ ಕರೆಯಲಾಗುವುದು’ ಎಂದು ಸಿದ್ದರಾಮಯ್ಯ ತಿಳಿಸಿದರು.



ಬುಧವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಜಯಪುರ ಜಿಲ್ಲೆಯ ಆಲಮಟ್ಟಿಯಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ ಸಾಗರಕ್ಕೆ ಬಾಗಿನ ಅರ್ಪಿಸಿದರು. ವಿಧಾನ ಪರಿಷತ್ ಸದಸ್ಯ ಪ್ರಕಾಶ ರಾಠೋಡ,ಶಾಸಕರಾದ ಜೆ.ಟಿ.ಪಾಟೀಲ, ಸಚಿವ ಶಿವಾನಂದ ಪಾಟೀಲ, ಶಾಸಕ ಅಶೋಕ ಮನಗೂಳಿ, ಸಿ.ಎಸ್.ನಾಡಗೌಡ, ಸಚಿವ ಎಂ.ಬಿ.ಪಾಟೀಲ,ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವ ಆರ್‌.ಬಿ.ತಿಮ್ಮಾಪುರ, ಶಾಸಕ ಯಶವಂತರಾಯಗೌಡ ಪಾಟೀಲ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

‘ಕೃಷ್ಣಾ ಆರತಿಗೆ ಶೀಘ್ರ ಕ್ರಮ’

‘ಗಂಗಾ ಆರತಿ ಮಾದರಿಯಲ್ಲಿ ಕೃಷ್ಣಾ ನದಿಗೂ ಆರತಿ ಮಾಡಲು ಈ ಭಾಗದ ಜನಪ್ರತಿನಿಧಿಗಳ ಬೇಡಿಕೆ ಇದೆ. ಅಲ್ಲದೇ, ಪ್ರವಾಸೋದ್ಯಮಕ್ಕೂ ಅನುಕೂಲ ಆಗುವುದರಿಂದ ಕೃಷ್ಣಾ ಆರತಿ ಏರ್ಪಡಿಸಲು ಶೀಘ್ರ ಕ್ರಮಕೈಗೊಳ್ಳಲಾಗುವುದು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

‘ರಾಜ್ಯದ ಅಣೆಕಟ್ಟುಗಳ ಸುರಕ್ಷತೆ ಪರಿಶೀಲನೆಗೆ ಕೇಂದ್ರ ತಂಡ ಮತ್ತು ಕೇಂದ್ರ ನೀರು ಆಯೋಗದ ಮಾಜಿ ಸದಸ್ಯರ ಒಳಗೊಂಡ ತಾಂತ್ರಿಕ ಸಮಿತಿ ರಚಿಸಲಾಗಿದೆ. ಈ ತಂಡ ಈಗಾಗಲೇ ಈಗಾಗಲೇ ಪ್ರವಾಸ ಕೈಗೊಂಡಿದೆ. ಸಮಿತಿಯ ವರದಿಯ ಆಧರಿಸಿ, ಅಣೆಕಟ್ಟುಗಳ ಸುರಕ್ಷತೆಗೆ ಸರ್ಕಾರವು ಕಾರ್ಯ ನಿರ್ವಹಿಸಲಿದೆ’ ಎಂದರು.

ಬುರ್ರಕಥಾ ದರೋಜಿ ಈರಮ್ಮ ಪ್ರಶಸ್ತಿಗೆ ಆಯ್ಕೆ



ಬಲಗೊಲ್ಲ ಮಾರೆಪ್ಪ



ಬುರ್ರಕಥಾ ಶಿವಮ್ಮ



ನಿಂಗಪ್ಪ ಮುದೇನೂರು




ಚೋರನೂರು ಕೊಟ್ರಪ್ಪ

ಬಳ್ಳಾರಿ: ನಾಡೋಜ ಬುರ್ರಕಥಾ ದರೋಜಿ ಈರಮ್ಮ ರಾಷ್ಟ್ರೀಯ ಪ್ರಶಸ್ತಿಗೆ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ,ಸಾಹಿತಿ ಡಾ. ನಿಂಗಪ್ಪ ಮುದೇನೂರು, ನಿವೃತ್ತ ಅಧಿಕಾರಿ ಚೋರನೂರು ಟಿ. ಕೊಟ್ರಪ್ಪ, ಬುರ್ರಕಥಾ ಕಲಾವಿದರಾದ ಶಿವಮ್ಮ ಮತ್ತು ಬಲಗೊಲ್ಲ ಮಾರೆಪ್ಪ ಆಯ್ಕೆಯಾಗಿದ್ದಾರೆ.

‘ಬುರ್ರಕಥಾ ಈರಮ್ಮನವರ 10ನೇ ಪುಣ್ಯಸ್ಮರಣೆ ಪ್ರಯುಕ್ತ ನಗರದ ಕೊಟ್ಟೂರುಸ್ವಾಮಿ ಶಿಕ್ಷಣ ಮಹಾವಿದ್ಯಾಲಯದ ಸಭಾಂಗಣದಲ್ಲಿ ಆಗಸ್ಟ್ 24ರಂದು ನಡೆಯುವ ವಿಚಾರಸಂಕಿರಣದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು’ ಎಂದು ನಾಡೋಜ ಬುರ್ರಕಥಾ ದರೋಜಿ ಈರಮ್ಮ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಡಾ. ಅಶ್ವರಾಮು ತಿಳಿಸಿದ್ದಾರೆ.

‘ರಾಯಚೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಹರೀಶ್ ರಾಮಸ್ವಾಮಿ ಪ್ರಶಸ್ತಿ ಪ್ರದಾನ ಮಾಡುವರು. ಜಾನಪದ ವಿದ್ವಾಂಸ ಪ್ರೊ.ಚಲುವರಾಜು ವಿಶೇಷ ಉಪನ್ಯಾಸ ನೀಡುವರು’ ಎಂದರು.


ವಿನಾಯಕ ತೊರವಿಗೆ ಬಸವರಾಜ ರಾಜಗುರು ಪ್ರಶಸ್ತಿ



ವಿನಾಯಕ ತೊರವಿ



ಮೊಹಸಿನ್ ಖಾನ್



ವಿಶಾಲ ಹೆಗಡೆ


ಧಾರವಾಡ: ನಗರದ ಸ್ವರ ಸಾಮ್ರಾಟ ಪಂಡಿತ ಬಸವರಾಜ ರಾಜಗುರು ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ನೀಡುವ ಸ್ವರ ಸಾಮ್ರಾಟ ಪಂಡಿತ ಬಸವರಾಜ ರಾಜಗುರು ರಾಷ್ಟ್ರೀಯ ಪ್ರಶಸ್ತಿಗೆ ಗಾಯಕ ಬೆಂಗಳೂರಿನ ವಿನಾಯಕ ತೊರವಿ, ರಾಷ್ಟ್ರೀಯ ಯುವ ಪ್ರಶಸ್ತಿಗೆ ಧಾರವಾಡದ ಸಿತಾರ್ ವಾದಕ ಮೊಹಸಿನ್ ಖಾನ್ ಮತ್ತು ಉತ್ತರ ಕನ್ನಡ ಜಿಲ್ಲೆಯ ಹಿಂದೂಸ್ಥಾನಿ ಶಾಸ್ತ್ರೀಯ ಗಾಯಕ ವಿಶಾಲ ಹೆಗಡೆ ಆಯ್ಕೆಯಾಗಿದ್ದಾರೆ. ರಾಷ್ಟ್ರೀಯ ಪ್ರಶಸ್ತಿ ₹1 ಲಕ್ಷ ನಗದು, ಫಲಕ ಮತ್ತು ರಾಷ್ಟ್ರೀಯ ಯುವ ಪ್ರಶಸ್ತಿ ತಲಾ ₹25 ಸಾವಿರ ನಗದು, ಫಲಕ ಒಳಗೊಂಡಿದೆ.

ಧಾರವಾಡದಲ್ಲಿ ಆಗಸ್ಟ್ 24ರಂದು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಬೆಳಗಾವಿ: 24ರಿಂದ ಕನ್ನಡ ವೈದ್ಯ ಬರಹಗಾರರ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕನ್ನಡ ವೈದ್ಯ ಬರಹಗಾರರ 5ನೇ ರಾಜ್ಯ ಸಮ್ಮೇಳನವು ಬೆಳಗಾವಿಯ ಕೆಎಲ್‌ಇ ಶತಮಾನೋತ್ಸವ ಭವನದ ಎಚ್‌. ಬಿ.ರಾಜಶೇಖರ ಸಭಾಂಗಣದಲ್ಲಿ ಆಗಸ್ಟ್ 24 ಮತ್ತು 25ರಂದು ನಡೆಯಲಿದೆ. ವೈದ್ಯ ಸಾಹಿತಿ ಡಾ. ನಾ.ಸೋಮೇಶ್ವರ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.



ನಾ.ಸೋಮೇಶ್ವರ

ಕೆಎಲ್‌ಇ ವಿಶ್ವವಿದ್ಯಾಲಯದ ಕನ್ನಡ ಬಳಗ, ಭಾರತೀಯ ವೈದ್ಯಕೀಯ ಸಂಘ ಹಾಗೂ ಕನ್ನಡ ವೈದ್ಯ ಬರಹಗಾರರ ಸಮಿತಿ ಸಹಯೋಗದಲ್ಲಿ ನಡೆಯುವ ಈ ಸಮ್ಮೇಳನವನ್ನು ಸಾಹಿತಿ ಜಯಂತ್ ಕಾಯ್ಕಿಣಿ ಉದ್ಘಾಟಿಸುವರು. ಕೆಎಲ್‌ಇ ಸಂಸ್ಥೆ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ, ಭಾರತೀಯ ವೈದ್ಯಕೀಯ ಸಂಘದ ರಾಜ್ಯ ಶಾಖೆ ಅಧ್ಯಕ್ಷ ಡಾ.ಶ್ರೀನಿವಾಸ, ನಿಯೋಜಿತ ರಾಜ್ಯ ಘಟಕದ ಅಧ್ಯಕ್ಷ ಡಾ.ವಿ. ವಿ.ಚಿನಿವಾಲರ, ಕೆಎಲ್‌ಇ ವಿಶ್ವವಿದ್ಯಾಲಯದ ಕುಲಪತಿ ಡಾ.ನಿತಿನ್ ಗಂಗನೆ ಮತ್ತು ಪ್ರಮುಖರು ಪಾಲ್ಗೊಳ್ಳುವರು.

‘ಕನ್ನಡ ವೈದ್ಯ ಸಾಹಿತ್ಯದ ಕುರಿತು 8 ಗೋಷ್ಠಿಗಳು, ಕಾವ್ಯ ಮತ್ತು ಕಥಾ ಕಾರ್ಯಾಗಾರ, ವೈದ್ಯ ಕವಿಗೋಷ್ಠಿ, ರಸಪ್ರಶ್ನೆ ಕಾರ್ಯಕ್ರಮ ನಡೆಯಲಿದೆ’ ಎಂದು ಸಮ್ಮೇಳನದ ಕಾರ್ಯದರ್ಶಿ ಡಾ.ಅವಿನಾಶ ಕವಿ ತಿಳಿಸಿದರು.

ಮಳೆಗೆ ತುಂಬಿದ ಹಳ್ಳ –ಕೊಳ್ಳ

ಪ್ರಜಾವಾಣಿ ವಾರ್ತೆ



ಚಳ್ಳಕೆರೆಯ ರಹೀಂ ನಗರದಲ್ಲಿ ಮನೆಗಳಿಗೆ ನೀರು ನುಗ್ಗಿತ್ತು

ಚಿತ್ರದುರ್ಗ: ಜಿಲ್ಲೆಯಾದ್ಯಂತ ಮಂಗಳವಾರ ತಡರಾತ್ರಿ ಉತ್ತಮ ಮಳೆಯಾಗಿದ್ದು, ಹಳ್ಳ-ಕೊಳ್ಳಗಳು ತುಂಬಿ ಹರಿದಿವೆ. ಕೆಲವೆಡೆ ಮನೆಗಳಿಗೆ ನೀರು ನುಗ್ಗಿ ಜನಜೀವನ ಅಸ್ತವ್ಯಸ್ತವಾಗಿತ್ತು.

ಚಳ್ಳಕೆರೆ ತಾಲ್ಲೂಕಿನ ಬೇಡರೆಡ್ಡಿಹಳ್ಳಿಯಲ್ಲಿ 11 ಸೆಂ.ಮೀ. ಮಳೆಯಾಗಿದೆ. ಇದು ಬುಧವಾರ ರಾಜ್ಯದಲ್ಲೇ ಅತೀ ಹೆಚ್ಚಿನ ಪ್ರಮಾಣದಲ್ಲಿ ಸುರಿದ ಮಳೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ನಾಯಕನಹಟ್ಟಿ ಪೊಲೀಸ್ ಠಾಣೆ ಹಾಗೂ ಮನಮೈನಹಟ್ಟಿ ಗ್ರಾಮದ ಏಕಾಂತೇಶ್ವರ ಮಠದ ಮುಂಭಾಗದ ಜನವಸತಿ ಪ್ರದೇಶಕ್ಕೆ, ಚಳ್ಳಕೆರೆ ನಗರದ ರಹೀಂ ನಗರದಲ್ಲಿ 30ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿದೆ.

ಪಾವಗಡ ರಸ್ತೆಯಲ್ಲಿ ಹಳ್ಳ ತುಂಬಿ ಹರಿದಿದ್ದು, ರೈಲ್ವೆ ಗೇಟ್, ಕಾಟಪ್ಪನಹಟ್ಟಿ, ಹಳೆ ಟೌನ್ ರಸ್ತೆ ಸಂಪರ್ಕ ಕಳೆದುಕೊಂಡಿದೆ. ಚಿತ್ರದುರ್ಗದ ಸಿಹಿ ನೀರು ಹೊಂಡ ಕೋಡಿ ಬಿದ್ದ ಪರಿಣಾಮ ಸಂತೆಹೊಂಡ ಭರ್ತಿಯಾಗಿದೆ.

ಶಿವಮೊಗ್ಗ ವರದಿ: ಜಿಲ್ಲೆಯ ಆನಂದಪುರ ಹೋಬಳಿ ವ್ಯಾಪ್ತಿಯಲ್ಲಿ ಬುಧವಾರ ಬಿರುಗಾಳಿ, ಗುಡುಗು ಸಹಿತ ಭಾರಿ ಮಳೆಯಾಗಿದ್ದು, ಮನೆಗಳು, ಅಂಗಡಿ ಮುಂಗಟ್ಟುಗಳಿಗೆ ನೀರು ನುಗ್ಗಿ ಜನರು ಪರದಾಡುವಂತಾಯಿತು.

ದಾವಣಗೆರೆ ವರದಿ: ನಗರವೂ ಸೇರಿ ಜಿಲ್ಲೆಯ ವಿವಿಧೆಡೆ ಬುಧವಾರ ಉತ್ತಮ ಮಳೆಯಾಗಿದೆ. ಬಸವಾಪಟ್ಟಣ ಸಮೀಪ ಹಳ್ಳವೊಂದು ಮೈದುಂಬಿ ಹರಿದಿದೆ.

ಬಳ್ಳಾರಿ/ ಹೊಸಪೇಟೆ ವರದಿ: ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ ಕೆಲವೆಡೆ ಬುಧವಾರ ನಸುಕಿನಲ್ಲಿ ವ್ಯಾಪಕ ಮಳೆಯಾಗಿದೆ. ಕಂಪ್ಲಿ ತಾಲ್ಲೂಕಿನಲ್ಲಿ ಮತ್ತೆ ಏಳು ಮನೆಗಳು ಕುಸಿದಿವೆ ಹಾಗೂ ಕಂಪ್ಲಿ ಸಕ್ಕರೆ ಕಾರ್ಖಾನೆ-ಚಿಕ್ಕಜಾಯಿಗನೂರು ಹಾಗೂ ಜವುಕು-ಜೀರಿಗನೂರು ಸಂಪರ್ಕ ಸೇತುವೆಗಳು ಕೊಚ್ಚಿ ಹೋಗಿವೆ.

ಬಿಜೆಪಿಗೆ ಸಿಗದ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನ

ಪ್ರಜಾವಾಣಿ ವಾರ್ತೆ

ಹಾಸನ: ಇಲ್ಲಿನ ನಗರಸಭೆ ಹಾಗೂ ಅರಕಲಗೂಡು ಪಟ್ಟಣ ಪಂಚಾಯಿತಿ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಕ್ಕೆ ಬುಧವಾರ ನಡೆದ ಚುನಾವಣೆಯು, ಸ್ಥಳೀಯ ಮಟ್ಟದಲ್ಲಿ ಬಿಜೆಪಿ-ಜೆಡಿಎಸ್ ಹೊಂದಾಣಿಕೆ ಸಾಧ್ಯವಿಲ್ಲ ಎಂಬುದನ್ನು ಸಾಬೀತುಪಡಿಸಿತು.

ನಗರಸಭೆಯಲ್ಲಿ ಅಧ್ಯಕ್ಷ ಸ್ಥಾನವನ್ನು ಜೆಡಿಎಸ್‌ಗೆ ಬಿಟ್ಟುಕೊಟ್ಟಿದ್ದ ಬಿಜೆಪಿ, ಉಪಾಧ್ಯಕ್ಷ ಸ್ಥಾನಕ್ಕೆ ಬೇಡಿಕೆ ಇಟ್ಟಿತ್ತು. ಆದರೆ, ಆ ಸ್ಥಾನಕ್ಕೆ ಸ್ಪರ್ಧಿಸಿದ್ದ ಬಿಜೆಪಿ ಅಭ್ಯರ್ಥಿ ಸೋತರು. ಜೆಡಿಎಸ್‌ನ ಎಂ. ಚಂದ್ರೇಗೌಡ ಅಧ್ಯಕ್ಷರಾಗಿ ಹಾಗೂ ಬಿಜೆಪಿಯಿಂದ ಗೆದ್ದು ಜೆಡಿಎಸ್ ಜೊತೆ ಗುರುತಿಸಿಕೊಂಡಿರುವ ಲತಾ ದೇವಿ ಉಪಾಧ್ಯಕ್ಷೆಯಾಗಿ ಆಯ್ಕೆಯಾದರು.

ಇನ್ನೊಂದೆಡೆ, ಅರಕಲಗೂಡು ಪಟ್ಟಣ ಪಂಚಾಯಿತಿಯಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿಕೂಟಕ್ಕೆ ಸ್ಪಷ್ಟ ಬಹುಮತವಿದ್ದರೂ, ಅಧ್ಯಕ್ಷರಾಗಿ ಕಾಂಗ್ರೆಸ್‌ನ ಪ್ರದೀಪ್‌ಕುಮಾರ್ ಆಯ್ಕೆಯಾದರು. ಮೈತ್ರಿಕೂಟದ ಸುಭಾನ್ ಷರೀಫ್ ಅವರಿಗೆ ಉಪಾಧ್ಯಕ್ಷ ಸ್ಥಾನ ದೊರೆಯಿತು.

ಕಾಂಗ್ರೆಸ್ ಬೆಂಬಲದೊಂದಿಗೆ ಉಪಾಧ್ಯಕ್ಷೆಯಾದ ಬಿಜೆಪಿ ಸದಸ್ಯೆ

(ಕೊಪ್ಪಳ ವರದಿ): ಬಿಜೆಪಿ ಹಾಗೂ ಕಾಂಗ್ರೆಸ್ ನಾಯಕರು ರಾಜಕೀಯ ಎದುರಾಳಿಗಳಾಗಿ ನಿತ್ಯ ಜಿದ್ದಾಜಿದ್ದಿ ನಡೆಸುತ್ತಿದ್ದರೆ ಕೊಪ್ಪಳ ನಗರಸಭೆಯಲ್ಲಿ ಕಾಂಗ್ರೆಸ್ ಬೆಂಬಲದೊಂದಿಗೆ ಬಿಜೆಪಿ ಸದಸ್ಯೆ ಅಶ್ವಿನಿ ಗದಗಿನಮಠ ಬುಧವಾರ ಉಪಾಧ್ಯಕ್ಷೆಯಾಗಿ ಆಯ್ಕೆಯಾದರು.

ಸ್ಥಳೀಯ ಶಾಸಕ ಕಾಂಗ್ರೆಸ್‌ನ ರಾಘವೇಂದ್ರ ಹಿಟ್ನಾಳ ಆಪ್ತ ಅಮ್ಜದ್ ಪಟೇಲ್ ಅವರು ಅಧ್ಯಕ್ಷರಾಗಿ ಆಯ್ಕೆಯಾದರು.

ಕರಾವಳಿ: ಭಾರಿ ಮಳೆ ಸಾಧ್ಯತೆ

ಬೆಂಗಳೂರು (ವರದಿ): ರಾಜ್ಯದ ಕರಾವಳಿ ಭಾಗದಲ್ಲಿ ಗುರುವಾರ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ‘ಯೆಲ್ಲೊ ಅಲರ್ಟ್’ ಘೋಷಿಸಿದೆ.

ಉತ್ತರ ಹಾಗೂ ದಕ್ಷಿಣ ಒಳನಾಡಿನ ಜಿಲ್ಲೆಗಳ ಕೆಲ ಸ್ಥಳಗಳಲ್ಲಿ ಸಾಧಾರಣ ಮಳೆ, ಇದೇ 25ರವರೆಗೂ ಕರಾವಳಿ ಭಾಗದಲ್ಲಿ ಭಾರಿ ಮಳೆ ಮುಂದುವರಿಯುವ ಸಂಭವವಿದ್ದು, ಶುಕ್ರವಾರದಿಂದ ಮೂರು ದಿನಗಳು ಉಡುಪಿ, ದಕ್ಷಿಣ ಕನ್ನಡದ ಜತೆಗೆ ಉತ್ತರ ಕನ್ನಡ ಜಿಲ್ಲೆಗೂ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ.



ಸುಭಾಷಿತ

ಅಜ್ಞಾನದ ಗಾಳಿಯು ಬೀಸುವ ಕಡೆ ಜ್ಞಾನದ ಜ್ಯೋತಿಯು ಬೆಳಗುವುದಿಲ್ಲ.

-ವಿಲಿಯಂ ಷೇಕ್ಸ್‌ಪಿಯರ್

ದೊಡ್ಡ ಆರ್ಥಿಕ ಹೊರೆ ಸೃಷ್ಟಿಸುವ ತೆರಿಗೆ ಪೂರ್ವಾನ್ವಯ ನ್ಯಾಯಯುತವಲ್ಲ

ಗಣಿ ಗುತ್ತಿಗೆ ಪ್ರದೇಶಗಳು ಮತ್ತು ಖನಿಜಗಳಿರುವ ಜಮೀನುಗಳ ಮೇಲೆ ಪೂರ್ವಾನ್ವಯವಾಗುವಂತೆ ತೆರಿಗೆ ವಿಧಿಸಲು ರಾಜ್ಯ ಸರ್ಕಾರಗಳಿಗೆ ಅಧಿಕಾರವಿದೆ ಎಂದು ಸುಪ್ರೀಂ ಕೋರ್ಟ್ ಕಳೆದ ವಾರ ನೀಡಿರುವ ತೀರ್ಪು ಹಲವು ವಿಷಯಗಳಲ್ಲಿ ಋಣಾತ್ಮಕ ಪರಿಣಾಮಗಳನ್ನು ಉಂಟುಮಾಡುವ ಸಾಧ್ಯತೆ ಇದೆ. ಗಣಿಗಳು ಮತ್ತು ಖನಿಜ ಸಂಪತ್ತಿನ ಮೇಲೆ ತೆರಿಗೆ ವಿಧಿಸುವ ಅಧಿಕಾರ ರಾಜ್ಯಗಳಿಗೂ ಇದೆ ಎಂದು ಸುಪ್ರೀಂ ಕೋರ್ಟ್ ಜುಲೈ 25ರಂದು ತೀರ್ಪು ನೀಡಿತ್ತು. ಈ ತೀರ್ಪಿನ ಆಧಾರದಲ್ಲಿ 2005ರ ಏಪ್ರಿಲ್ 1ರ ನಂತರದ ಗಣಿಗಾರಿಕೆ ಚಟುವಟಿಕೆಗಳಿಗೆ ಪೂರ್ವಾನ್ವಯವಾಗುವಂತೆ ತೆರಿಗೆ ವಿಧಿಸಬಹುದು ಎಂದು ಸುಪ್ರೀಂ ಕೋರ್ಟ್ ಕಳೆದ ವಾರ ಸ್ಪಷ್ಟಪಡಿಸಿದೆ. ತಮ್ಮ ಆರ್ಥಿಕ ಅಧಿಕಾರವನ್ನು ವ್ಯಾಪಕವಾಗಿ ಮೊಟಕುಗೊಳಿಸಲಾಗುತ್ತಿದೆ ಎಂದು ರಾಜ್ಯ ಸರ್ಕಾರಗಳು ದೂರುತ್ತಿರುವ ಸಂದರ್ಭದಲ್ಲೇ ಒಕ್ಕೂಟ ವ್ಯವಸ್ಥೆಯ ವಿಷಯದ ತತ್ವಗಳನ್ನು ಎತ್ತಿ ಹಿಡಿಯುವಂತಹ ಈ ತೀರ್ಪನ್ನು ದೊಡ್ಡ ಪ್ರಮಾಣದಲ್ಲಿ ಸ್ವಾಗತಿಸಲಾಗಿತ್ತು. ಗಣಿಗಾರಿಕೆ ಚಟುವಟಿಕೆಗಳ ಮೇಲಿನ ರಾಯಧನ ಮತ್ತು ತೆರಿಗೆ ಎರಡೂ ಬೇರೆಯಾದವು ಎಂದು ಸ್ಪಷ್ಟಪಡಿಸಿದ್ದ ನ್ಯಾಯಾಲಯವು ರಾಜ್ಯ ಸರ್ಕಾರಗಳು ತಮ್ಮ ಸಂಪತ್ತಿನ ಮೇಲೆ ತೆರಿಗೆ ವಿಧಿಸುವ ಅಧಿಕಾರವನ್ನು ಹೊಂದಿವೆ ಎಂದು ಹೇಳಿದೆ. ಗಣಿಗಾರಿಕೆಗೆ ಸಂಬಂಧಿಸಿದ ಚಟುವಟಿಕೆಗಳ ಮೇಲೆ ತೆರಿಗೆ ವಿಧಿಸುವ ಅಧಿಕಾರ ರಾಜ್ಯಗಳಿಗೆ ಇಲ್ಲ ಎಂದು 1991ರಲ್ಲಿ ತಾನೇ ನೀಡಿದ್ದ ತೀರ್ಪನ್ನು ಸುಪ್ರೀಂ ಕೋರ್ಟ್ ಅಸಿಂಧುಗೊಳಿಸಿದೆ. ಗಣಿಗಾರಿಕೆ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಪೂರ್ವಾನ್ವಯವಾಗುವಂತೆ ತೆರಿಗೆ ವಿಧಿಸಿ, ವಸೂಲಿ ಮಾಡುವ ಅಧಿಕಾರವನ್ನು ರಾಜ್ಯ ಸರ್ಕಾರಗಳಿಗೆ ನೀಡಿದೆ. ಪೂರ್ವಾನ್ವಯವಾಗಿ ತೆರಿಗೆ ವಿಧಿಸುವುದು ತಾತ್ವಿಕವಾಗಿ ಕೆಟ್ಟ ಮತ್ತು ನ್ಯಾಯಯುತವಲ್ಲದ ಕ್ರಮ. ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ ಜಾರಿಯಲ್ಲಿರುವ ಕಾನೂನುಗಳ ಆಧಾರದಲ್ಲಿ ಕಂಪನಿಗಳು ಮತ್ತು ವ್ಯಕ್ತಿಗಳು ತೆರಿಗೆಗೆ ಸಂಬಂಧಿಸಿದಂತೆ ತಮ್ಮ ನಿರ್ಧಾರಗಳನ್ನು ಕೈಗೊಂಡಿರುತ್ತಾರೆ. ಈಗ ಅವರಿಗೆ ಹೊರೆಯಾಗುವ ರೀತಿಯಲ್ಲಿ ಕಾನೂನಿನ ಬದಲಾವಣೆ ಮಾಡುವುದು ತಪ್ಪು. ಅಂತಹ ಕ್ರಮಗಳಿಗೆ ಸುಪ್ರೀಂ ಕೋರ್ಟ್ ಈ ಹಿಂದೆ ಅಸಮ್ಮತಿ ವ್ಯಕ್ತಪಡಿಸಿತ್ತು. ಕೇನ್ ಮತ್ತು ವೊಡಾಫೋನ್ ಪ್ರಕರಣಗಳಲ್ಲಿ ಪೂರ್ವಾನ್ವಯ ಆಗುವಂತೆ ತೆರಿಗೆ ವಿಧಿಸುವ ಕ್ರಮಕ್ಕೆ ವಿರುದ್ಧವಾಗಿ ಅಂತರರಾಷ್ಟ್ರೀಯ ನ್ಯಾಯಮಂಡಳಿಗಳು ಆದೇಶ ನೀಡಿವೆ. ಕೇಂದ್ರ ಸರ್ಕಾರವು 2021ರಲ್ಲಿ ಕಾನೂನು ರೂಪಿಸುವ ಮೂಲಕ ಪೂರ್ವಾನ್ವಯವಾಗಿ ತೆರಿಗೆ ವಿಧಿಸುವ ಕ್ರಮವನ್ನು ರದ್ದುಪಡಿಸಿತ್ತು. ಆದರೆ, ಈಗ ಸುಪ್ರೀಂ ಕೋರ್ಟ್ ತೀರ್ಪಿನಿಂದಾಗಿ ಆ ಕ್ರಮವು ಮತ್ತೆ ಚಾಲ್ತಿಗೆ ಬಂದಿದೆ. ಅಸ್ಥಿರ ಮತ್ತು ಊಹಿಸಲಾಗದಂತಹ ತೆರಿಗೆ ಪದ್ಧತಿಯು ದೇಶದ ಆರ್ಥಿಕ ಹಿತದೃಷ್ಟಿಯಿಂದ ಒಳ್ಳೆಯದಲ್ಲ. ಇದು ದೇಶವು ಹೂಡಿಕೆದಾರರನ್ನು ಆಕರ್ಷಿಸುವಲ್ಲಿ ವಿಫಲವಾಗಲು ಕಾರಣವಾಗಬಹುದು.



ಅಸ್ಥಿರ ಮತ್ತು ಊಹಿಸಲಾಗದಂತಹ ತೆರಿಗೆ ಪದ್ಧತಿಯು ದೇಶದ ಆರ್ಥಿಕ ಹಿತದೃಷ್ಟಿಯಿಂದ ಒಳ್ಳೆಯದಲ್ಲ

ಈ ತೀರ್ಪು ಗಣಿ ಕಂಪನಿಗಳ ಮೇಲೆ ದೊಡ್ಡ ಪ್ರಮಾಣದ ಆರ್ಥಿಕ ಹೊರೆಯನ್ನು ಹೊರಿಸಲಿದೆ. ಅಲ್ಲದೇ ಇದು ಖನಿಜ ಉತ್ಪನ್ನಗಳ ದರ ಏರಿಕೆಗೆ ಮತ್ತು ಆ ಮೂಲಕ ಹಣದುಬ್ಬರದ ಹೆಚ್ಚಳಕ್ಕೆ ಕಾರಣವಾಗುವ ಸಾಧ್ಯತೆಯೂ ಇದೆ. ಕಲ್ಲಿದ್ದಲಿನ ದರ ಹೆಚ್ಚಳವಾಗಲಿದ್ದು, ಅದರ ಪರಿಣಾಮವಾಗಿ ವಿದ್ಯುತ್ ದರವೂ ಏರಿಕೆಯಾಗಲಿದೆ. ಇದರಿಂದ ವಿದ್ಯುತ್ ಪೂರೈಕೆಯ ಮೇಲೆ ದುಷ್ಪರಿಣಾಮವಾಗಲಿದೆ. ಕೈಗಾರಿಕೆಗಳಿಗೆ ವಿದ್ಯುತ್ ಅತ್ಯವಶ್ಯಕವಾಗಿರುವುದರಿಂದ ಈ ಬೆಳವಣಿಗೆಯು ಹಣದುಬ್ಬರದಲ್ಲಿ ಏರಿಳಿತಕ್ಕೆ ಕಾರಣವಾಗಲಿದೆ. ತೆರಿಗೆ ಹೆಚ್ಚಳದಿಂದ ಕಲ್ಲಿದ್ದಲಿನ ದರ ಏರಿಕೆಯಾಗಿ ಕಂಪನಿಗಳು ಕಲ್ಲಿದ್ದಲು ಆಮದಿಗೆ ಮುಂದಾಗುವ ಸಾಧ್ಯತೆಯೂ ಇದೆ. ಈ ತೀರ್ಪಿನ ಕಾರಣದಿಂದ ಗಣಿ ಕಂಪನಿಗಳು ಪಾವತಿಸಬೇಕಾದ ಹಿಂಬಾಕಿ ಮೊತ್ತ ದೊಡ್ಡ ಪ್ರಮಾಣದಲ್ಲಿ ಇರಲಿದೆ. ಕೆಲವು ಕಂಪನಿಗಳ ನಿವ್ವಳ ಮೌಲ್ಯಕ್ಕಿಂತ ಅವುಗಳ ತೆರಿಗೆ ಹಿಂಬಾಕಿಯೇ ಹೆಚ್ಚಾಗಬಹುದು ಎಂಬ ಅಂದಾಜೂ ಇದೆ. ತೆರಿಗೆಯನ್ನು ಪೂರ್ವಾನ್ವಯ ಮಾಡುವುದರಿಂದ ಆಗಬಹುದಾದ ಆರ್ಥಿಕ ಪರಿಣಾಮಗಳನ್ನು ಒಪ್ಪಿಕೊಂಡಿರುವ ನ್ಯಾಯಾಲಯವು ಈ ಕಾರಣಕ್ಕಾಗಿಯೇ 1991ರ ಬದಲಿಗೆ 2005ರಿಂದ ಈ ಆದೇಶವನ್ನು ಪೂರ್ವಾನ್ವಯ ಮಾಡುವಂತೆ ನಿರ್ದೇಶನ ನೀಡಿದೆ. ಜುಲೈ 25ರವರೆಗಿನ ಬಡ್ಡಿ ಮತ್ತು ದಂಡವನ್ನು ಮನ್ನಾ ಮಾಡಿರುವ ಸುಪ್ರೀಂ ಕೋರ್ಟ್, 12 ವರ್ಷಗಳ ಅವಧಿಯಲ್ಲಿ ಕಂತುಗಳಲ್ಲಿ ಮರುಪಾವತಿಗೂ ಅವಕಾಶ ಕಲ್ಪಿಸಿದೆ. ಆದರೂ ಗಣಿ ಚಟುವಟಿಕೆಗಳ ಮೇಲಿನ ತೆರಿಗೆಯನ್ನು ಪೂರ್ವಾನ್ವಯ ಮಾಡುವುದರಿಂದ ಕಂಪನಿಗಳ ಮೇಲೆ ದೊಡ್ಡ ಹೊರೆ ಬೀಳಲಿದ್ದು, ಆರ್ಥಿಕತೆಯೂ ದುಷ್ಪರಿಣಾಮ ಎದುರಿಸಲಿದೆ.

ಹಿಂಬಾಕಿ ವಸೂಲಿ ಮಾಡುವ ವಿಚಾರದಲ್ಲಿ ರಾಜ್ಯ ಸರ್ಕಾರಗಳಿಗೆ ವಿವೇಚನಾ ಅಧಿಕಾರವನ್ನು ಸುಪ್ರೀಂ ಕೋರ್ಟ್ ನೀಡಿದೆ. ಈಗ ನ್ಯಾಯಾಲಯದ ತೀರ್ಪನ್ನು ಅನುಷ್ಠಾನಕ್ಕೆ ತರಬೇಕೆ ಎಂಬುದನ್ನು ರಾಜ್ಯ ಸರ್ಕಾರಗಳೇ ನಿರ್ಧರಿಸಬೇಕಿದೆ. ಒಡಿಶಾ ಸರ್ಕಾರವು ಈ ತೆರಿಗೆ ರೂಪದಲ್ಲಿ ₹ 1 ಲಕ್ಷ ಕೋಟಿಯಷ್ಟು ವರಮಾನ ನಿರೀಕ್ಷಿಸಿದೆ. ಗಣಿಗಾರಿಕೆ ಚಟುವಟಿಕೆ ದೊಡ್ಡ ಪ್ರಮಾಣದಲ್ಲಿ ನಡೆಯುವ ಜಾರ್ಖಂಡ್, ಛತ್ತೀಸ್‌ಗಢ, ಕರ್ನಾಟಕ, ಆಂಧ್ರಪ್ರದೇಶ, ರಾಜಸ್ಥಾನ ಮತ್ತು ಮಧ್ಯಪ್ರದೇಶ ರಾಜ್ಯಗಳಿಗೂ ವರಮಾನ ಲಭಿಸಲಿದೆ. ಕರ್ನಾಟಕವು ಹಲವು ಸಾವಿರ ಕೋಟಿ ರೂಪಾಯಿಗಳಷ್ಟು ವರಮಾನ ಗಳಿಸಲಿದೆ. ಬಹುತೇಕ ರಾಜ್ಯಗಳಿಗೆ ವರಮಾನ ಬೇಕಿದೆ. ಯಾವ ರಾಜ್ಯವೂ ಆದಾಯವನ್ನು ಕಳೆದುಕೊಳ್ಳಲು ಇಚ್ಛಿಸುವುದಿಲ್ಲ.

ದಿನದ ಟ್ವೀಟ್

ಸ್ಥಳೀಯ ಪ್ರವಾಸೋದ್ಯಮ ಗರಿಗೆದರಲಿ



ಕರ್ನಾಟಕದ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ಸಲುವಾಗಿ, ಅದ್ಭುತ ವಾಸ್ತುಶಿಲ್ಪವಿರುವ ಹಂಪಿ ನಗರದ ಕುರಿತು ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಜಾಹೀರಾತು ಪ್ರದರ್ಶಿಸಲಾಗುತ್ತಿದೆ. ನಮ್ಮ ಸಮೃದ್ಧ ಐತಿಹಾಸಿಕ ವಾಸ್ತುಶಿಲ್ಪ ಸೌಂದರ್ಯವನ್ನು ವಿಮಾನ ನಿಲ್ದಾಣಗಳಲ್ಲಿ ಪ್ರದರ್ಶಿಸುವುದು ಮಹತ್ವದ ಉಪಕ್ರಮ.

ನಾಗೇಂದ್ರ ಗೌತಮ್, ಎಂಜಿನಿಯರ್

ಕಿಡಿನುಡಿ



ಭಾರತದಲ್ಲಿ ಜೀವಕ್ಕೆ ಯಾವ ಬೆಲೆ ಇದೆ? ಆಂಧ್ರಪ್ರದೇಶದ ಕಡಪ ನಗರದ ಬೀದಿಯಲ್ಲಿ ನೇತಾಡುತ್ತಿದ್ದ ವಿದ್ಯುತ್ ಪ್ರವಹಿಸುತ್ತಿದ್ದ ವೈರ್‌ಗಳು ಇಬ್ಬರು ವಿದ್ಯಾರ್ಥಿಗಳಿಗೆ ಮಾರಕವಾಗಿ ಪರಿಣಮಿಸಿವೆ. 10 ಮತ್ತು 8ನೇ ತರಗತಿಯಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳು ಸೈಕಲ್‌ನಲ್ಲಿ ಶಾಲೆಗೆ ತೆರಳುತ್ತಿದ್ದಾಗ ತುಂಡಾದ ವೈರ್‌ಗಳ ಮೇಲೆ ಸೈಕಲ್ ಚಲಿಸಿದೆ. ಒಬ್ಬ ಬಾಲಕ ಮೃತಪಟ್ಟಿದ್ದು ಮತ್ತೊಬ್ಬನ ಸ್ಥಿತಿ ಚಿಂತಾಜನಕವಾಗಿದೆ.

ನಬಿಲಾ ಜಮಾಲ್, ಪತ್ರಕರ್ತೆ

25 ವರ್ಷಗಳ ಹಿಂದೆ

ಭಾನುವಾರ, 22-8-1999

● **ನಾಲ್ವರು ಸಚಿವರು, 10 ಮಾಜಿ ಶಾಸಕರಿಗೆ ಕೊಕ್**

ಬೆಂಗಳೂರು, ಆ. 21– ಜನತಾದಳ ವಿಭಜನೆಯ ಸಂದರ್ಭದಲ್ಲಿ ಜೆ.ಎಚ್. ಪಟೇಲ್ ಅವರ ಜತೆ ಗುರುತಿಸಿಕೊಂಡಿದ್ದ ನಾಲ್ವರು ಸಚಿವರು ಸೇರಿದಂತೆ ವಿಸರ್ಜಿತ ವಿಧಾನಸಭೆಯ ದಳದ ಒಟ್ಟು 14 ಮಂದಿ ಸದಸ್ಯರಿಗೆ ಮತ್ತೆ ಸ್ಪರ್ಧಿಸಲು ಟಿಕೆಟ್ ನಿರಾಕರಿಸಲಾಗಿದೆ.

ಬಿಜೆಪಿ ಮತ್ತು ದಳ (ಯು) ನಡುವೆ ಆಗಿರುವ ಚುನಾವಣಾ ಹೊಂದಾಣಿಕೆ ಪ್ರಕಾರ, ವಿಸರ್ಜಿತ ವಿಧಾನಸಭೆಯಲ್ಲಿ ದಳದ ಸದಸ್ಯರು ಪ್ರತಿನಿಧಿಸುತ್ತಿದ್ದ 12 ಕ್ಷೇತ್ರಗಳು ಬಿಜೆಪಿ ಪಾಲಾಗಿದ್ದರೆ, ಇನ್ನೆರಡು ಕ್ಷೇತ್ರಗಳು ದಳ (ಯು)ಕ್ಕೆ ದೊರೆತರೂ ಆ ಕ್ಷೇತ್ರಗಳ ಟಿಕೆಟ್ ಬೇರೆಯವರ ಪಾಲಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಲೀಲಾದೇವಿ ಆರ್. ಪ್ರಸಾದ್ (ಅಥಣಿ) ಮತ್ತು ಅಬಕಾರಿ ಸಚಿವ ಪಿ.ಎಸ್.ಜೈವಂತ್ (ಶಿರಸಿ) ಅವರ ಕ್ಷೇತ್ರಗಳು ಬಿಜೆಪಿ ಪಾಲಾಗಿದ್ದರೆ, ಮಾಹಿತಿ ತಂತ್ರಜ್ಞಾನ ಸಚಿವ ಅನಂತನಾಗ್ (ಮಲ್ಲೇಶ್ವರ) ಮತ್ತು ಗ್ರಾಮೀಣ ಅಭಿವೃದ್ಧಿ ಸಚಿವ ಎಂ.ಸಿ. ಮನಗೂಳಿ (ಸಿಂದಗಿ) ಅವರ ಕ್ಷೇತ್ರಗಳು ದಳ (ಯು)ಕ್ಕೆ ದಕ್ಕಿದ್ದರೂ, ಈ ಎರಡು ಕ್ಷೇತ್ರಗಳಲ್ಲಿ ಅವರ ಬದಲಿಗೆ ಲೋಕಶಕ್ತಿ ಮೂಲದ ಅಭ್ಯರ್ಥಿಗಳಿಗೆ ಟಿಕೆಟ್ ನೀಡಲಾಗಿದೆ.

● **ಸೋನಿಯಾ, ಸುಷ್ಮಾ ಸೇರಿ 72 ಮಂದಿ ಲೋಕಸಭೆ ಕಣದಲ್ಲಿ**

ಬೆಂಗಳೂರು, ಆ. 21– ಲೋಕಸಭೆಗೆ ಸೆಪ್ಟೆಂಬರ್ ಐದರಂದು ನಡೆಯಲಿರುವ ಮೊದಲ ಹಂತದ ಚುನಾವಣೆಗೆ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ, ಬಿಜೆಪಿಯ ನಾಯಕಿ ಸುಷ್ಮಾ ಸ್ವರಾಜ್, ಕೇಂದ್ರ ಸಚಿವ ಅನಂತಕುಮಾರ್, ಮಾಜಿ ಸಚಿವರಾದ ಆರ್.ಎಲ್. ಜಾಲಪ್ಪ, ಎಂ.ವಿ. ಚಂದ್ರಶೇಖರ ಮೂರ್ತಿ ಹಾಗೂ ಎಚ್.ಡಿ. ಕುಮಾರಸ್ವಾಮಿ ಸೇರಿದಂತೆ ಒಟ್ಟು 72 ಮಂದಿ ಅಭ್ಯರ್ಥಿಗಳು ಅಂತಿಮವಾಗಿ ಕಣದಲ್ಲಿದ್ದಾರೆ.

ಅದೇ ದಿನ ರಾಜ್ಯ ವಿಧಾನಸಭೆಯ 120 ಕ್ಷೇತ್ರಗಳಿಗೆ ನಡೆಯುವ ಚುನಾವಣೆಗೆ ಮುಖ್ಯಮಂತ್ರಿ ಜೆ.ಎಚ್. ಪಟೇಲ್ (ಚನ್ನಗಿರಿ), ಸಚಿವರಾದ ಬಿ. ಸೋಮಶೇಖರ್ (ಮಳವಳ್ಳಿ), ಸಿ. ಬೈರೇಗೌಡ (ವೇಮಗಲ್), ಎಂ.ಪಿ. ಪ್ರಕಾಶ್ (ಹೂವಿನಹಡಗಲಿ), ಪಿ.ಜಿ.ಆರ್. ಸಿಂಧ್ಯ (ಕನಕಪುರ), ಜನತಾದಳದ (ಯು) ಡಾ. ಜೀವರಾಜ ಆಳ್ವ (ಜಯಮಹಲ್), ಕಾಂಗ್ರೆಸ್‌ನ ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್), ಧರ್ಮಸಿಂಗ್ (ಜೇವರ್ಗಿ) ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ ಹಲವಾರು ಘಟಾನುಘಟಿಗಳು ತಮ್ಮ ಅದೃಷ್ಟ ಪರೀಕ್ಷೆಗೆ ಸಜ್ಜಾಗಿದ್ದಾರೆ.

ಸಂಸತ್ತಿನ ಜಂಟಿ ಸದನ ಸಮಿತಿಯು ಮಸೂದೆಯನ್ನು ಪರಿಶೀಲಿಸಲಿರುವುದು ಉತ್ತಮ ನಡೆ

ವಕ್ಫ್ ಕಾಯ್ದೆ ಪರಿಷ್ಕರಣೆಗೆ ಸಕಾಲ



ಸೂರ್ಯ-ನಮಸ್ಕಾರ

ಎ. ಸೂರ್ಯ ಪ್ರಕಾಶ್

‘**ವಕ್ಫ್** ತಿದ್ದುಪಡಿ ಮಸೂದೆ- 2024’ ಸಂಸತ್ತಿನಲ್ಲಿ ಮಂಡನೆಯಾಗಿದೆ. ಇದು ನಿರೀಕ್ಷೆಯಂತೆಯೇ ತೀವ್ರ ರಾಜಕೀಯ ಚರ್ಚೆಗಳನ್ನು ಹುಟ್ಟುಹಾಕಿದೆ. ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟವನ್ನು (ಎನ್‌ಡಿಎ) ವಿರೋಧಿಸುವ ರಾಜಕೀಯ ಪಕ್ಷಗಳ ಮುಸ್ಲಿಂ ಹಾಗೂ ಮುಸ್ಲಿಮೇತರ ರಾಜಕಾರಣಿಗಳು ಈ ಮಸೂದೆಯಲ್ಲಿನ ತಿದ್ದುಪಡಿಗಳನ್ನು ವಿರೋಧಿಸಿದ್ದಾರೆ. ಸರ್ಕಾರದ ಭಾಗವಾಗಿರುವವರು ಬದಲಾವಣೆಗಳನ್ನು ಸ್ವಾಗತಿಸಿದ್ದಾರೆ.

ಮಸೂದೆಗೆ ವಿವಿಧ ರಾಜಕೀಯ ಪಕ್ಷಗಳಿಂದ ಆರಂಭದಲ್ಲಿ ಬಂದಿರುವ ಪ್ರತಿಕ್ರಿಯೆಗಳು ವಿಷಯದ ಬಗ್ಗೆ ಬೆಳಕು ಚೆಲ್ಲುವುದಕ್ಕಿಂತಲೂ, ವಿಷಯದ ಸುತ್ತ ಕಾವು ಹೆಚ್ಚಿಸುವ ಕೆಲಸ ಮಾಡಿವೆ. ಏಕೆಂದರೆ ಮೊದಲಿಗೆ ಬರುವ ಪ್ರತಿಕ್ರಿಯೆಗಳು ಸಾಮಾನ್ಯವಾಗಿ ಹೆಚ್ಚಿನ ಆಲೋಚನೆ ಇಲ್ಲದೆ ಬರುವಂಥವು. ಭೀತಿ ಹಾಗೂ ಪೂರ್ವಗ್ರಹಗಳ ಪರಿಣಾಮವಾಗಿ ಅಂತಹ ಪ್ರತಿಕ್ರಿಯೆಗಳು ಬರುತ್ತವೆ; ಅವು ತರ್ಕಬದ್ಧವಾದ ಅಭಿಪ್ರಾಯದ ಪರಿಣಾಮವಾಗಿ ಬರುವಂಥವಲ್ಲ. ಹೀಗಾಗಿ, ಮಸೂದೆಯನ್ನು ಪರಿಶೀಲಿಸಲು ಜಂಟಿ ಸಂಸದೀಯ ಸಮಿತಿಯನ್ನು ಸರ್ಕಾರವು ರಚಿಸಿರುವುದು ಸ್ವಾಗತಾರ್ಹ ನಡೆ. ಇದರಿಂದಾಗಿ ಎಲ್ಲ ಪಕ್ಷಗಳಿಗೂ ಮಸೂದೆಯನ್ನು ಪರಿಶೀಲಿಸಲು ಹಾಗೂ ಹೊಟ್ಟು ಮತ್ತು ಗಟ್ಟಿ ಕಾಳನ್ನು ಪ್ರತ್ಯೇಕಿಸಲು ಸಾಧ್ಯವಾಗುತ್ತದೆ.

ವಕ್ಫ್ ಕಾಯ್ದೆ–1995ರ ಅಂಶಗಳನ್ನು ಸಂವಿಧಾನದ ಮೂಲ ಆಶಯಗಳೊಂದಿಗೆ ಸರಿಹೊಂದುವಂತೆ ಮಾಡುವುದು, ದೇಶದಲ್ಲಿ ಮುಸ್ಲಿಮರ ಸ್ಥಿತಿಗತಿ ಕುರಿತು ಅಧ್ಯಯನ ನಡೆಸಿದ ಸಾಚಾರ್ ಸಮಿತಿಯ ಶಿಫಾರಸುಗಳನ್ನು ಒಳಗೊಳ್ಳುವುದು ಹಾಗೂ ರಾಜ್ಯಸಭೆಯ ಉಪ ಸಭಾಪತಿಯಾಗಿದ್ದ ಕೆ. ರೆಹಮಾನ್ ಖಾನ್ ನೇತೃತ್ವದ ಸಂಸತ್ ಸಮಿತಿಯು ಹೇಳಿದ್ದ ಕೆಲವು ಮಾತುಗಳನ್ನು ಒಳಗೊಳ್ಳುವುದು ಸರ್ಕಾರದ ಉದ್ದೇಶ ಎಂಬುದು ವಕ್ಫ್ ಕಾಯ್ದೆಯನ್ನು ಹಾಗೂ ಪ್ರಸ್ತಾವಿತ ತಿದ್ದುಪಡಿಗಳನ್ನು ಪರಿಶೀಲಿಸಿದರೆ ಗೊತ್ತಾಗುತ್ತದೆ.


ವಕ್ಫ್ ಕಾಯ್ದೆಯನ್ನು ಇನ್ನಷ್ಟು ವಿಸ್ತರಿಸಿ, ಅದು ಮುಸ್ಲಿಮರಲ್ಲಿನ ಇತರ ಗುಂಪುಗಳಿಗೂ ಅನ್ವಯವಾಗುವಂತೆ ಮಾಡುವುದು ತಿದ್ದುಪಡಿಗಳಲ್ಲಿನ ಪ್ರಮುಖವಾದ ಒಂದು ಅಂಶ. ಶಿಯಾ ಹಾಗೂ ಸುನ್ನಿ ಸಮುದಾಯಗಳ ಬಗ್ಗೆ ಮಾತ್ರ ಉಲ್ಲೇಖವಿರುವ, ಈ ಕಾಯ್ದೆಯ ಸೆಕ್ಷನ್ 5ಕ್ಕೆ ತಿದ್ದುಪಡಿ ತಂದು, ಆಗಾಖಾನಿ, ಬೊಹ್ರಾ ವಕ್ಫ್‌ಗಳನ್ನೂ ಈ ಕಾನೂನು ಒಳಗೊಳ್ಳುವಂತೆ ಮಾಡುವುದು, ಬೊಹ್ರಾ ಹಾಗೂ ಆಗಾಖಾನಿ ಸಮುದಾಯಗಳಿಗೆ ಪ್ರತ್ಯೇಕ ವಕ್ಫ್ ಮಂಡಳಿ ರಚಿಸಲು ಅವಕಾಶ ಕಲ್ಪಿಸುವುದು ಸರ್ಕಾರದ ಉದ್ದೇಶ. ಶಿಯಾ, ಸುನ್ನಿ, ಬೊಹ್ರಾ, ಆಗಾಖಾನಿ ಮತ್ತು ಮುಸ್ಲಿಮರಲ್ಲಿನ ಇತರ ಹಿಂದುಳಿದ ವರ್ಗಗಳಿಗೆ ಪ್ರಾತಿನಿಧ್ಯ ನೀಡುವ ಪ್ರಸ್ತಾವ ಕೂಡ ತಿದ್ದುಪಡಿಯಲ್ಲಿ ಇದೆ. ಇಸ್ಲಾಂನಲ್ಲಿನ ವಿಭಿನ್ನ ಪಂಗಡಗಳ ನಡುವಿನ ತಾರತಮ್ಯವನ್ನು ಕೊನೆಗೊಳಿಸುವ ಉದ್ದೇಶದ ಇವು ಬಹಳ ಮುಖ್ಯ. ಇವು ಸಮಾನತೆಯನ್ನು ಹೇಳುವ ಸಂವಿಧಾನದ 14ನೇ ವಿಧಿ, ತಾರತಮ್ಯವನ್ನು ನಿಷೇಧಿಸುವ 15ನೇ ವಿಧಿಗೆ ಅನುಗುಣವಾಗಿವೆ.

ತಿದ್ದುಪಡಿ ಮಸೂದೆಯಲ್ಲಿನ ಕೆಲವು ಪ್ರಮುಖ ಅಂಶಗಳು ಮಹಿಳೆಯರ ಸಬಲೀಕರಣದ ಉದ್ದೇಶ ಹೊಂದಿವೆ. ಉದಾಹರಣೆಗೆ, ಕೇಂದ್ರ ಹಾಗೂ ರಾಜ್ಯಗಳ ವಕ್ಫ್ ಮಂಡಳಿಗಳಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ಕಲ್ಪಿಸುವ ಉದ್ದೇಶ ಇದೆ. ಅಲ್ಲದೆ, ಆಸ್ತಿಯನ್ನು ವಕ್ಫ್ ಎಂದು ಘೋಷಿಸುವ ಮೂಲಕ ಮಹಿಳೆಯರಿಗೆ ವಂಶಪಾರಂಪರ್ಯವಾಗಿ ಬರಬೇಕಿರುವ ಆಸ್ತಿಯನ್ನು ನಿರಾಕರಿಸುವ ಕೆಲಸವನ್ನು ತಡೆಯುವ ಉದ್ದೇಶವನ್ನೂ ಇದು ಹೊಂದಿದೆ. ಧರ್ಮನಿರಪೇಕ್ಷ, ಪ್ರಜಾತಾಂತ್ರಿಕ ಹಾಗೂ ಉದಾರವಾದಿ ದೇಶದ ಯಾವುದೇ ಪ್ರಜೆ ಇಂತಹ ಪ್ರಸ್ತಾವಗಳನ್ನು ವಿರೋಧಿಸುವುದು ಹೇಗೆ?

ದಾಖಲೆಗಳನ್ನು ನಿರ್ವಹಿಸುವ ಪ್ರಕ್ರಿಯೆಯನ್ನು ಆಧುನೀಕರಣಗೊಳಿಸುವ, ಕೇಂದ್ರೀಕೃತ ದತ್ತಾಂಶದ ಮೂಲಕ ವಕ್ಫ್ ಆಸ್ತಿಗಳ ನೋಂದಣಿಯನ್ನು ಸುವ್ಯವಸ್ಥಿತವಾಗಿಸುವ, ಮ್ಯುಟೇಷನ್‌ಗೆ ವಿಸ್ತೃತವಾದ ಪ್ರಕ್ರಿಯೆಯನ್ನು ಕಂದಾಯ ಕಾನೂನುಗಳಿಗೆ ಅನುಗುಣವಾಗಿ ರೂಪಿಸುವ ಉದ್ದೇಶ ಕೂಡ ಇದಕ್ಕೆ ಇದೆ.

‘ಪರಿಸೀಮಾ’ ಕಾಯ್ದೆಯ (ಲಿಮಿಟೇಷನ್ ಆ್ಯಕ್ಟ್) ಅಂಶಗಳು ವಕ್ಫ್ ಕಾಯ್ದೆ– 1995ಕ್ಕೆ ಅನ್ವಯವಾಗುವುದಿಲ್ಲ. ಅಂದರೆ, ಸಿವಿಲ್ ವಿಚಾರಗಳಲ್ಲಿ ದಾವೆ ಹೂಡುವುದಕ್ಕೆ ಇರುವ ಕಾಲಮಿತಿಯು ವಕ್ಫ್ ಆಸ್ತಿಗಳಿಗೆ ಅನ್ವಯವಾಗುವುದಿಲ್ಲ. ಹೀಗಾಗಿ ಈ ಅಂಶವನ್ನು ತೆಗೆಯಬೇಕಾಗುತ್ತದೆ.

ಭಾರತದಲ್ಲಿನ ಮುಸ್ಲಿಂ ಸಮುದಾಯದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿ ಬಗ್ಗೆ ಅಧ್ಯಯನ ನಡೆಸಲು 2005ರಲ್ಲಿ ಮನಮೋಹನ್ ಸಿಂಗ್ ನೇತೃತ್ವದ ಸರ್ಕಾರ ನೇಮಕ ಮಾಡಿದ್ದ ನ್ಯಾಯಮೂರ್ತಿ ರಾಜೇಂದ್ರ ಸಾಚಾರ್ ಸಮಿತಿಯು ವಕ್ಫ್‌ಗಳು ಹಾಗೂ ವಕ್ಫ್ ಕಾಯ್ದೆ–1995ರ ಬಗ್ಗೆಯೂ ಪರಿಶೀಲನೆ ನಡೆಸಿದೆ. ಮುಸ್ಲಿಂ ಸಮುದಾಯದ ಹಿರಿಯರಾದ ಸಯೀದ್ ಹಮೀದ್, ಎಂ.ಎ. ಬಸಿತ್, ಅಖ್ತರ್ ಮಜೀದ್ ಮತ್ತು ಅಬುಸಾಲೆ ಶರೀಫ್ ಅವರೂ ಈ ಸಮಿತಿಯ ಸದಸ್ಯರಾಗಿದ್ದರು. ಶರೀಫ್ ಅವರು ಸಮಿತಿಯ ಸದಸ್ಯ ಕಾರ್ಯದರ್ಶಿ ಆಗಿದ್ದರು.



‘ಬಹಳ ಆಳಕ್ಕೆ ತಲುಪಿರುವ ಬೇನೆಯೊಂದನ್ನು, ವಕ್ಫ್ ಆಸ್ತಿಗಳನ್ನು ವ್ಯಕ್ತಿಗಳು ಹಾಗೂ ಸಂಸ್ಥೆಗಳು ದುರ್ಬಳಕೆ ಮಾಡಿಕೊಳ್ಳುತ್ತಿರುವುದನ್ನು’ ವಕ್ಫ್‌ಗಳ ಕುರಿತ ಪರಿಶೀಲನೆಯು ತೆರೆದಿಟ್ಟಿದೆ ಎಂದು ಸಮಿತಿಯು ಹೇಳಿದೆ. ಅಲ್ಲದೆ, ‘ಸಂಘಟನಾತ್ಮಕವಾದ, ನಿರ್ವಹಣೆಗೆ ಸಂಬಂಧಿಸಿದ ಹಾಗೂ ಕಾನೂನಿಗೆ ಸಂಬಂಧಿಸಿದ ಹಲವು ಅಡ್ಡಿಗಳ ಕಾರಣದಿಂದಾಗಿ ಇಂತಹ ಪರಿಸ್ಥಿತಿ ಉಂಟಾಗಿದೆ’ ಎಂಬುದನ್ನು ಕೂಡ ಈ ಪರಿಶೀಲನೆಯು ತೆರೆದಿಟ್ಟಿದೆ ಎಂದು ಸಮಿತಿ ಹೇಳಿತ್ತು.

ಈ ಕಾರಣಗಳಿಂದಾಗಿ, ‘ಲೋಪಗಳನ್ನು ಸರಿಪಡಿಸುವ, ವಕ್ಫ್ ಆಸ್ತಿಗಳನ್ನು ಒಳ್ಳೆಯ ಉದ್ದೇಶಕ್ಕೆ ಬಳಸಿಕೊಳ್ಳುವ ಕ್ರಮಗಳು ಸರ್ಕಾರಗಳ ಕಡೆಯಿಂದ ಹಾಗೂ ಕಾನೂನು ವ್ಯವಸ್ಥೆಯ ಕಡೆಯಿಂದ ಆಗಬೇಕಿದೆ’ ಎಂದು ಅದು ಹೇಳಿತ್ತು. ಹಾಗೆಯೇ, ಲಿಂಗ ಸಮಾನತೆಯನ್ನು ಸಾಧ್ಯವಾಗಿಸಲು ಮಹಿಳೆಯರಿಗೆ ಪ್ರಾತಿನಿಧ್ಯ ಇರಬೇಕು ಎಂದು ಸಮಿತಿಯು ಬಲವಾದ ಆಗ್ರಹ ಮಂಡಿಸಿತ್ತು. ಕೇಂದ್ರ ವಕ್ಫ್ ಮಂಡಳಿ ಹಾಗೂ ರಾಜ್ಯ ವಕ್ಫ್ ಮಂಡಳಿಗಳಲ್ಲಿ ಕನಿಷ್ಠ ಇಬ್ಬರು ಮಹಿಳೆಯರಿಗೆ ಪ್ರಾತಿನಿಧ್ಯ ಕಲ್ಪಿಸಬೇಕಿರುವುದು ಬಹಳ ಮುಖ್ಯವಾದುದು ಎಂದು ಅದು ಹೇಳಿತ್ತು. ಇದರಿಂದ ಲಿಂಗ ಸಮಾನತೆ ಸಾಧ್ಯವಾಗುವುದಷ್ಟೇ ಅಲ್ಲದೆ, ಮಹಿಳೆಯರಿಗೆ ಹಾಗೂ ಮಕ್ಕಳಿಗೆ ಅಭಿವೃದ್ಧಿ ಕ್ರಮಗಳ ಪ್ರಯೋಜನ ನೇರವಾಗಿ ಸಿಗುವಂತೆ ಆಗುತ್ತದೆ ಎಂದೂ ಹೇಳಿತ್ತು.

ಆದರೆ, ಈ ಸಮಿತಿಯನ್ನು ನೇಮಕ ಮಾಡಿದ್ದ ಹಾಗೂ ಸಮಿತಿಯು ಕಂಡುಕೊಂಡ ಅಂಶಗಳ ಬಗ್ಗೆ ನಿರಂತರವಾಗಿ ಟಾಂಟಾಂ ಮಾಡಿಕೊಂಡು ತಿರುಗಾಡಿದ್ದ ಕಾಂಗ್ರೆಸ್ ಪಕ್ಷವು ಈಗ, ಈ ಸಮಿತಿಯ ಶಿಫಾರಸುಗಳನ್ನೇ ಅನುಷ್ಠಾನಕ್ಕೆ ತರಲು ಉದ್ದೇಶಿಸಿರುವ ತಿದ್ದುಪಡಿ ಮಸೂದೆಯನ್ನು ವಿರೋಧಿಸುತ್ತಿರುವುದು ವಿಚಿತ್ರ ಎಂದು ಅನಿಸುತ್ತಿಲ್ಲವೇ?

ರಾಜೇಂದ್ರ ಸಾಚಾರ್ ಸಮಿತಿ ಮಾತ್ರವೇ ಅಲ್ಲದೆ, ವಕ್ಫ್ ಆಸ್ತಿಗಳ ಬಗ್ಗೆ ಕೆ. ರೆಹಮಾನ್ ಖಾನ್ ನೇತೃತ್ವದ ಸಮಿತಿ ಕೂಡ ಪರಿಶೀಲನೆ ನಡೆಸಿದೆ. ರೆಹಮಾನ್ ಖಾನ್ ನೇತೃತ್ವದ ಸಮಿತಿಯೂ ಹಲವು ಶಿಫಾರಸುಗಳನ್ನು ಮಾಡಿದೆ. ನಂತರದಲ್ಲಿ, ರೆಹಮಾನ್ ಖಾನ್ ಅವರು ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕೂಡ ಆಗಿದ್ದರು. ಅವರೂ, ವಕ್ಫ್ ಕಾಯ್ದೆ–1995ರ ಲೋಪಗಳನ್ನು ಸರಿಪಡಿಸುವ ಉದ್ದೇಶದಿಂದ ‘ವಕ್ಫ್ ತಿದ್ದುಪಡಿ ಮಸೂದೆ–2013’ ಅನ್ನು ಸದನದಲ್ಲಿ ಮಂಡಿಸಿದ್ದರು.

ರಾಜಕಾರಣದ ಎರಡು ಗುಂಪುಗಳಲ್ಲಿ ಗುರುತಿಸಿಕೊಂಡಿರುವ ರಾಜಕಾರಣಿಗಳು ಈಗಿನ ಮಸೂದೆಗೆ ನೀಡಿರುವ ಪ್ರಾಥಮಿಕ ಪ್ರತಿಕ್ರಿಯೆಯು ಮಸೂದೆಯಲ್ಲಿನ ವಿಷಯಗಳ ಬದಲು, ತಿದ್ದುಪಡಿಗಳನ್ನು ತರುವಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಹೊಂದಿರುವ ಉದ್ದೇಶಗಳ ಕುರಿತಾಗಿ ಇರುವಂತಿದೆ. ಅದೇನೇ ಇರಲಿ, ವಿರೋಧ ಪಕ್ಷಗಳು ಸರ್ಕಾರದ ಉದ್ದೇಶದ ಬಗ್ಗೆ ಅನುಮಾನ ಹೊಂದಿವೆಯಾದ ಕಾರಣ, ಪ್ರಸ್ತಾವಿತ ಮಸೂದೆಯನ್ನು ಸಂಸತ್ತಿನ ಬೇರೆ ಬೇರೆ ರಾಜಕೀಯ ಪಕ್ಷಗಳ ಪ್ರಾತಿನಿಧ್ಯ ಇರುವ ಜಂಟಿ ಸಮಿತಿಯು ಪರಿಶೀಲಿಸುವುದು ಬಹಳ ಉತ್ತಮವಾದ ಕ್ರಮವಾಗುತ್ತದೆ. ಈಗ ನಾವು ಈ ಸಮಿತಿ ಸಲ್ಲಿಸುವ ವರದಿಗಾಗಿ ಕಾಯಬೇಕಿದೆ.

ಚುರುಮುರಿ



ಹಂಡ್ರಡ್ ಗ್ರಾಂ ‘ಹೆಚ್ಚು’ವರಿ!

● ತುರುವೇಕೆರೆ ಪ್ರಸಾದ್

‘ಪಾಪ! ವಿನೇಶ್‌ಗೆ ಕೊನೆಗೂ ಒಲಿಂಪಿಕ್ಸ್‌ಲ್ಲಿ ಬೆಳ್ಳಿ ಪದಕವೂ ದಕ್ಕಲೇ ಇಲ್ಲ, ನೂರು ಗ್ರಾಂ ಹೆಚ್ಚು ತೂಕ ಅವರಿಗೆ ಮುಳುವಾಗೋಯ್ತು’ ಎಂದು ಲೊಚಗುಟ್ಟಿದ ಮಾಲಿಂಗ.

‘ವೂ ಕಣ್ಲಾ, ನೆನೆಸ್ಕಂಡ್ರೆ ಕಳ್ಳು ಹಿಂಡಿದಂಗಾಯ್ತದೆ. ನನ್ ಲೈಫ್ನಾಗೂ ಇಂಗೇ ಈ ನೂರು ಗ್ರಾಂ ಶಾನೆ ಆಟ ಆಡೈತೆ’ ಎಂದು ಫ್ಲ್ಯಾಶ್‌ಬ್ಯಾಕ್ ಬಿಚ್ಚಿದ ಗುದ್ಲಿಂಗ.

‘ಕಾಲೇಜಲ್ಲಿದ್ದಾಗ ಶಾಮ್ಲಿನ ಲವ್ ಮಾಡಿದ್ನಾ? ಅವಳಿಗೊಂದು ಗಿಫ್ಟ್ ಪಾರ್ಸಲ್ ಮಾಡಿದ್ದೆ. ಅದು 100 ಗ್ರಾಂ ಜಾಸ್ತಿ ಇತ್ತು ಅಂತ ಡ್ಯೂ ಆಯ್ತು. ನೆಟ್ಟಗೆ ಸ್ಟಾಂಪ್ ಅಂಟ್ಸಕ್ಕೆ ಬರಲ್ಲ, ಇನ್ನೇನು ಇವ್ನ ಪ್ರೀತಿ ಮುದ್ರೆ ಒತ್ತಾನು ಅಂತ ಅವಳು ಗಿಫ್ಟ್ ರಿಜೆಕ್ಟ್ ಮಾಡಿ ನನ್ ಬಿಟ್ಟಾಕೇ ಬಿಟ್ಲು’.

‘ಅಯ್ಯೋ ಸಿವನೇ! ಇದೆಲ್ಲ ನಮ್ಗೆ ಗೊತ್ತಿರ್ಲೇ ಇಲ್ಲ ನೋಡು’.

‘ಮದ್ವೆ ಆದ್‌ಮ್ಯಾಕೆ ಮನೆಯಾಗೆ ‘ತುತ್ತಾ ಮುತ್ತಾ’ ನಾಟಕ ಶುರುವಾಯ್ತು. ಎರಡು ಚಿನ್ನದ ಸರ ಮಾಡುಸ್ದೆ. ಅಮ್ಮಂಗೊಂದು, ಹೆಂಡ್ರಿಗೊಂದು. ಆ ಒಡವೆ ಅಂಗಡಿಯೋನು ಅಮ್ಮ ಅಂದ್ರೆ ಬೆಲೆ ಜಾಸ್ತಿ ಅಂತ ಅಮ್ಮನ್ ಚೈನ್ಗೆ ನೂರು ಮಿಲಿ ಗ್ರಾಂ ಜಾಸ್ತಿ ಚಿನ್ನ ಹಾಕ್ಬುಟ್ಟಿದ್ದ. ಅದು ಹೆಂಡ್ತಿಗೆ ಗೊತ್ತಾಗಿ ಭಾರಿ ರಾದ್ಧಾಂತ ಆಗೋಯ್ತು. ಎಂಡ್ರು ಮನೆ ಬಿಟ್ ಒಂಟೋದ್ಲು... ಅಮ್ಮನೂ ನನ್ ತಂಗಿ ಮನೆಗೆ ಹೋದ್ಲು’.

‘ಆಮೇಲೆ...’

‘ಆಮೇಲ್ ಎಂಡ್ರು ಇಲ್ವಲ್ಲ ಅಂತ ಇಂಗೇ ಎಣ್ಣೆ ಆಕ್ತಿದ್ವಿ. 100 ಗ್ರಾಂ ಖಾರ ಮಿಕ್ಕಿತ್ತು ಅಂತ ಇನ್ನೊಂದು ಬಾಟಲ್ ಓಪನ್ ಮಾಡುದ್ವಿ. ಅದೆಲ್ಲಿದ್ಲೋ ನನ್ ಎಂಡ್ರು ಸೊಯ್ ಟಪಕ್ ಅಂತ ಪ್ರತ್ಯಕ್ಷ ಆಗ್ಬುಟ್ಲು. ಬಕೆಟ್‌ಗಟ್ಲೆ ನೀರು ಹುಯ್ದು ಮುಖಕ್ಕೆ ಮಂಗಳಾರತಿ ಮಾಡುದ್ಲು’.

‘ಅಯ್ಯೋ, ಛೇ! ಹೀಗಾಗ್ಬಾರ್ದಿತ್ತು ಕಣೋ’.

‘ಮುಂದಕ್ ಕೇಳು. ಮಾರನೇ ದಿನ ಕಬಡ್ಡಿ ಸೆಲೆಕ್ಷನ್ ಇತ್ತಾ? ಒಳಗೆ ಎಣ್ಣೆ, ಮೇಲೆ ಹೆಂಡ್ರು ನೀರು ಸುರ್ದಿದ್ದು, ಎಲ್ಲಾ ಸೇರಿ ಬಾಡಿ ನೆಂದು ಶೀತ ಆಗಿ, ಸರಿಯಾಗಿ ಆಡಕ್ಕಾಗ್ದೆ ಡಿಸ್‌ಕ್ವಾಲಿಫೈ ಆಗೋದೆ’.

‘ಆಮೇಲ್ ಏನ್ ಮಾಡ್ದೆ?’

‘ಇನ್ನೇನ್ ಮಾಡೋದು? ದುಃಖ ಮರೆಯೋಕೆ ನಿಮ್ ಜೊತೆ ಸೇರ್‍ಕಂಡ್ ಕುಡ್ದೆ. ಈಗ ಲಿವರ್ ಊದ್ಕಂಡು ನೂರು ಗ್ರಾಂ ಹೆಚ್ಚಾಗದೆ’ ಎಂದು ತಲೆ ಚಚ್ಚಿಕೊಂಡ ಗುದ್ಲಿಂಗ.

ಸಂಗತ

ಜೀವವುಳಿಸುವ ಜೀವಕ್ಕೇ ಜೀವಭಯ!

ವೈದ್ಯರು ತಮ್ಮ ಜೀವವನ್ನು ಪಣಕ್ಕೆ ಇಟ್ಟೇ ಇನ್ನೊಂದು ಜೀವವನ್ನು ಉಳಿಸುವ ಸವಾಲಿನ ಕರ್ತವ್ಯ ನಿರ್ವಹಿಸುವಂತಹ ಪರಿಸ್ಥಿತಿಯನ್ನು ಬದಲಿಸಬೇಕಾದ ತುರ್ತು ಅಗತ್ಯ ಇದೆ

● ಡಾ. ಲಕ್ಷ್ಮಣ ವಿ.ಎ.

ಅರುಣಾ ಶಾನುಭಾಗ್, ಭಾರತದ ವೈದ್ಯಕೀಯ ಇತಿಹಾಸದಲ್ಲಿ ಕಾಣಸಿಗುವ ದುರಂತಮಯ ಹೆಸರು. 1973ರಲ್ಲಿ ಮುಂಬೈನ ಕೆಇಎಂ ಆಸ್ಪತ್ರೆಯಲ್ಲಿ ನರ್ಸ್ ಆಗಿದ್ದ ಅರುಣಾ ಅದೇ ಆಸ್ಪತ್ರೆಯ ವಾರ್ಡ್‌ಬಾಯ್ ಸೋಹನ್ ಲಾಲ್ ಎಂಬ ದುರುಳನಿಂದ ದೈಹಿಕ ಹಲ್ಲೆ ಮತ್ತು ಅತ್ಯಾಚಾರಕ್ಕೊಳಗಾಗಿ ಅಖಂಡ ನಲವತ್ತೆರಡು ವರ್ಷ ಕೋಮಾದಲ್ಲೇ ಬದುಕಿದ್ದವರು. ಅದೇ ಆಸ್ಪತ್ರೆಯ ಸಿಬ್ಬಂದಿಯಿಂದ ಆರೈಕೆಗೊಳಗಾಗಿ ಕೊನೆಗೆ ಅಲ್ಲೇ ಕೊನೆಯುಸಿರೆಳೆದದ್ದು ವಿಷಾದಕರ ದಂತಕತೆ.

ದೊಂಬಿ, ಗಲಾಟೆ, ಅಪಘಾತ, ಸಾಮೂಹಿಕ ಹಿಂಸಾಚಾರದಂತಹ ಅತಿ ಸೂಕ್ಷ್ಮ ಸಂದರ್ಭಗಳಲ್ಲಿ ಗಾಯಾಳುಗಳಿಗೆ ಚಿಕಿತ್ಸೆ ನೀಡುವಾಗ ರೋಗಿಯ ಕಡೆಯವರ ಕೋಪಕ್ಕೆ ಸುಲಭವಾಗಿ ತುತ್ತಾಗುವವರು ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿ. ತುರ್ತು ವೈದ್ಯಕೀಯ ವಿಭಾಗ ಹಾಗೂ ಐಸಿಯುನಲ್ಲಿ ಈ ಬಗೆಯ ಹಲ್ಲೆಗಳ ಪ್ರಮಾಣ ಅತಿ ಹೆಚ್ಚು. ಹೀಗಾಗಿ, ಇಲ್ಲಿ ಕೆಲಸ ಮಾಡುವ ವೈದ್ಯರು ತಮ್ಮ ಜೀವವನ್ನು ಪಣಕ್ಕೆ ಇಟ್ಟೇ ಇನ್ನೊಂದು ಜೀವವನ್ನು ಉಳಿಸುವ ಸವಾಲಿನ ಕರ್ತವ್ಯ ನಿರ್ವಹಿಸುವಂತಹ ಪರಿಸ್ಥಿತಿ ಭಾರತದಲ್ಲಿದೆ. ಅದರಲ್ಲೂ ಎಷ್ಟೋ ಕಡೆ ರಾತ್ರಿ ಪಾಳಿಯ ಮಹಿಳಾ ಸಿಬ್ಬಂದಿಯಂತೂ ಭಯದಲ್ಲೇ ಕರ್ತವ್ಯ ನಿರ್ವಹಿಸಬೇಕಾಗಿದೆ.

ದುರದೃಷ್ಟವಶಾತ್, ಭಾರತದಲ್ಲಿ ವೈದ್ಯಕೀಯ ಸಿಬ್ಬಂದಿ ವಿರುದ್ಧದ ಹಿಂಸಾಚಾರವನ್ನು ನಿರ್ದಿಷ್ಟವಾಗಿ ಪತ್ತೆ ಹಚ್ಚುವ ಕೇಂದ್ರೀಕೃತ ವ್ಯವಸ್ಥೆ ಇಲ್ಲ. ಆದಾಗ್ಯೂ, ವಿವಿಧ ಅಧ್ಯಯನ ವರದಿಗಳು ಮತ್ತು ಸಂಶೋಧನೆಗಳಿಂದ ಕೆಲವು ಅಂಕಿಅಂಶಗಳು ಲಭ್ಯವಾಗಿವೆ. ಜರ್ನಲ್ ಆಫ್ ಕ್ಲಿನಿಕಲ್ ಮತ್ತು ಡಯಾಗ್ನೋಸ್ಟಿಕ್ ರಿಸರ್ಚ್‌ನಲ್ಲಿ ಪ್ರಕಟವಾದ 2020ರ ಅಧ್ಯಯನದ ಪ್ರಕಾರ, ಭಾರತದಲ್ಲಿ ಶೇ 46.4ರಷ್ಟು ಆರೋಗ್ಯ ಕಾರ್ಯಕರ್ತರು ದೈಹಿಕ ಹಿಂಸೆಯನ್ನು ಅನುಭವಿಸುತ್ತಾರೆ. ಶೇ 71.4ರಷ್ಟು ಮಂದಿ ಅವಾಚ್ಯ ಬೈಗುಳ ಹಾಗೂ ನಿಂದನೆಗೆ ಗುರಿಯಾಗುತ್ತಾರೆ.


ಭಾರತೀಯ ವೈದ್ಯಕೀಯ ಸಂಘದ (ಐಎಂಎ) 2019ರ ವರದಿ, ದೇಶದಲ್ಲಿ ವೈದ್ಯರು ತಮ್ಮ ಕೆಲಸದ ಅವಧಿಯಲ್ಲಿ ಹಿಂಸೆಗೆ ಒಳಗಾಗುವುದನ್ನು ವಿವರಿಸಿದೆ. ರೋಗಿಗಳು ಅಥವಾ ಅವರ ಸಂಬಂಧಿಕರಿಂದ ವೈದ್ಯರು ಹಲ್ಲೆಗೊಳಗಾಗುತ್ತಾರೆ ಎಂದು ಹೇಳಿದೆ. ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಕಮ್ಯುನಿಟಿ ಮೆಡಿಸಿನ್ ಆ್ಯಂಡ್ ಪಬ್ಲಿಕ್ ಹೆಲ್ತ್‌ನಲ್ಲಿ ಪ್ರಕಟವಾದ 2018ರ ಅಧ್ಯಯನವು ಭಾರತದಲ್ಲಿ ಶೇ 25.6ರಷ್ಟು ಶುಶ್ರೂಷಾ ಸಿಬ್ಬಂದಿ ದೈಹಿಕ ಹಿಂಸೆಯನ್ನು ಮತ್ತು ಶೇ 40.6ರಷ್ಟು ಮಂದಿ ಅವಾಚ್ಯ ಬೈಗುಳ, ನಿಂದನೆಯನ್ನು ಅನುಭವಿಸುತ್ತಾರೆ ಎಂದು ಹೇಳುತ್ತದೆ.

ದೇಶದಲ್ಲಿ ವೈದ್ಯಕೀಯ ಸಿಬ್ಬಂದಿಯನ್ನು ರಕ್ಷಿಸಲು ಹಲವಾರು ನಿಯಮಗಳು ಮತ್ತು ಕಾನೂನುಗಳಿದ್ದರೂ ಇಂತಹ ಹಿಂಸೆಗಳನ್ನು ತಡೆಯಲು ವ್ಯವಸ್ಥೆ ವಿಫಲವಾಗುತ್ತಿರುವುದು ತೀರಾ ಕಳವಳದ ಸಂಗತಿ. ಪೊಲೀಸು, ಕೋರ್ಟು, ಕಾನೂನಿನ ಭಯ, ಆರ್ಥಿಕ ಹೊರೆ, ಹೆಚ್ಚುವರಿ ಅಲೆದಾಟದ ಭಯ ಅಥವಾ ನ್ಯಾಯ ವ್ಯವಸ್ಥೆಯಲ್ಲಿ ನಂಬಿಕೆಯ ಕೊರತೆಯಿಂದಾಗಿ ಬಹಳಷ್ಟು ಪ್ರಕರಣಗಳು ವರದಿಯಾಗುವುದೇ ಇಲ್ಲ.

ಸ್ವತಃ ವೈದ್ಯಕೀಯ ಸಿಬ್ಬಂದಿಗೆ ಮತ್ತು ರೋಗಿಗಳ ಕುಟುಂಬಸ್ಥರಿಗೆ ಅಂತಹ ಪ್ರಕರಣಗಳನ್ನು ವರದಿ ಮಾಡುವ, ಕಾನೂನು ಕ್ರಮ ಕೈಗೊಳ್ಳುವ ಕಾನೂನುಗಳು ಹಾಗೂ ಕಾರ್ಯವಿಧಾನಗಳ ಬಗ್ಗೆ ಅರಿವು ಇರುವುದಿಲ್ಲ.

ಕೆಲವೊಮ್ಮೆ ತನಿಖೆಗಳು ಅಪೂರ್ಣ ಅಥವಾ ಪಕ್ಷಪಾತಿಯಾಗಿರಬಹುದು. ಕೆಲವು ಪ್ರಕರಣಗಳಲ್ಲಿ ತೀರ್ಪು ಬರಲು ವರ್ಷಗಳೇ ಆಗಬಹುದು. ಇದು ದೂರುದಾರರಲ್ಲಿ ಹತಾಶೆ ಮತ್ತು ಭ್ರಮನಿರಸನಕ್ಕೆ ಕಾರಣವಾಗುತ್ತದೆ.

ಐಎಂಎ 2020ರ ವರದಿಯ ಪ್ರಕಾರ, ವೈದ್ಯರ ವಿರುದ್ಧದ ಹಿಂಸಾಚಾರದ ಪ್ರತಿ ಐದು ಪ್ರಕರಣಗಳಲ್ಲಿ ಒಂದು ಮಾತ್ರ ಶಿಕ್ಷೆಗೆ ಗುರಿಯಾಗುತ್ತದೆ. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ 2019ರ ವರದಿ, ಆರೋಗ್ಯ ಕಾರ್ಯಕರ್ತರ ಮೇಲಿನ ಹಿಂಸಾಚಾರದ ಪ್ರಕರಣಗಳಲ್ಲಿ ಶಿಕ್ಷೆಯ ಪ್ರಮಾಣವು ಸುಮಾರು ಶೇ 10ರಷ್ಟು ಎಂಬುದನ್ನು ಕಂಡುಕೊಂಡಿದೆ.



ವೈದ್ಯಕೀಯ ಸಿಬ್ಬಂದಿಯ ಮೇಲಿನ ದೌರ್ಜನ್ಯಕ್ಕೆ ಗರಿಷ್ಠ ಶಿಕ್ಷೆಯನ್ನು ವಿಧಿಸುವುದು, ಇಂತಹ ಪ್ರಕರಣಗಳನ್ನು ವ್ಯವಹರಿಸಲು ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸುವುದು, ಹಿಂಸಾಚಾರ ತಡೆಗಟ್ಟಲು ಮತ್ತು ತನಿಖೆಗಳಲ್ಲಿ ಸಹಾಯ ಮಾಡಲು ಆಸ್ಪತ್ರೆಗಳು, ಆರೋಗ್ಯ ಸೌಲಭ್ಯಗಳಲ್ಲಿ ಸಿ.ಸಿ. ಟಿ.ವಿ. ಕ್ಯಾಮೆರಾಗಳನ್ನು ಅಳವಡಿಸಿದರೆ ಹಿಂಸಾತ್ಮಕ ಪ್ರಕರಣಗಳನ್ನು ತಡೆಗಟ್ಟಲು ಮತ್ತು ಸಾಕ್ಷ್ಯ ಸಂಗ್ರಹಿಸಲು ಅನುಕೂಲವಾಗಬಹುದು. ಈ ಕ್ರಮಗಳನ್ನು ಅನುಷ್ಠಾನಗೊಳಿಸುವ ಮೂಲಕ, ನಾವು ವೈದ್ಯಕೀಯ ಸಿಬ್ಬಂದಿಗೆ ಸುರಕ್ಷಿತ ವಾತಾವರಣವನ್ನು ಸೃಷ್ಟಿಸಬಹುದು. ಕೋಲ್ಕತ್ತ ವೈದ್ಯಕೀಯ ಕಾಲೇಜು ವಿದ್ಯಾರ್ಥಿನಿಯ ಮೇಲಾದಂತಹ ಹೀನ ಕೃತ್ಯಗಳನ್ನು ತಡೆಗಟ್ಟಬಹುದು.

ಕರ್ನಾಟಕದವರೇ ಆದ ಅರುಣಾ ಶಾನುಭಾಗ್ ದೌರ್ಜನ್ಯಕ್ಕೊಳಗಾಗಿ ಈಗ ಐವತ್ತು ವರ್ಷಗಳೇ ಕಳೆದಿವೆ. ಅಂದಿನಿಂದ ಇಂದಿನ ತನಕ ಕಾಲಕಾಲಕ್ಕೆ ಕಾನೂನುಗಳು ಬಲಗೊಳ್ಳುತ್ತಲೇ ಬಂದಿವೆ. ದುರದೃಷ್ಟವೆಂದರೆ, ಇಂತಹ ದುರ್ಘಟನೆಗಳನ್ನು ತಡೆಯಲು ಇಂದಿಗೂ ಸಾಧ್ಯ ಆಗಿಲ್ಲ. ಜೀವವನ್ನು ರಕ್ಷಿಸುವ ಜೀವವೇ ಅಪಾಯದಲ್ಲಿ ಇರುವ ಸಂದರ್ಭಗಳು ಮರುಕಳಿಸದಿರಲಿ.

ವಾಚಕರ ವಾಣಿ

ಎಚ್‌ಡಿಕೆ ವಿರುದ್ಧದ ಆರೋಪ: ತ್ವರಿತ ನ್ಯಾಯ ಸಿಗಲಿ

ನಿಯಮ ಉಲ್ಲಂಘಿಸಿ ಕಂಪನಿಯೊಂದಕ್ಕೆ ಗಣಿ ಗುತ್ತಿಗೆ ಮಂಜೂರು ಮಾಡಿದ ಆರೋಪದಲ್ಲಿ ಜೆಡಿಎಸ್ ಮುಖಂಡ ಎಚ್.ಡಿ.ಕುಮಾರಸ್ವಾಮಿ ಅವರ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ಲೋಕಾಯುಕ್ತಕ್ಕೆ ಅನುಮತಿ ನೀಡದ ರಾಜ್ಯಪಾಲರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಮಾತ್ರ ತನಿಖೆಗೆ ಅನುಮತಿ ನೀಡಿರುವುದು ವಿವಾದಕ್ಕೆ ಈಡಾಗಿ, ಕೆಲವರ ಅನುಮಾನಕ್ಕೆ ಕಾರಣವಾಗಿದೆ. ಜೊತೆಗೆ ಕುಮಾರಸ್ವಾಮಿ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಒಂದು ವರ್ಷದಿಂದ ಕೇಳುತ್ತಿದ್ದರೂ ರಾಜ್ಯಪಾಲರು ಅನುಮತಿ ನೀಡಿಲ್ಲ. ಅನುಮತಿ ನೀಡುವುದಕ್ಕೇ ವರ್ಷಗಳು ಕಳೆದರೆ ಪರಿಶೀಲನೆ, ತನಿಖೆ, ಸಾಕ್ಷ್ಯ, ವಾದ, ವಿವಾದದಂತಹ ಹಂತಗಳು ಮುಗಿದು ನ್ಯಾಯ ದೊರಕುವಷ್ಟರಲ್ಲಿ ಮತ್ತಷ್ಟು ವರ್ಷಗಳೇ ಉರುಳಿರುತ್ತವೆ. ಈ ರೀತಿ ನ್ಯಾಯ ವಿಳಂಬವಾದರೆ ಹೇಗೆ? ತನಿಖೆಗೆ ಸಮಯ ಬೇಕು ನಿಜ. ಆದರೆ ಅನುಮತಿ ಹಂತದಲ್ಲೇ ಅನವಶ್ಯಕ ವಿಳಂಬ ಕೂಡದು. ಇಂತಹ ವಿಳಂಬಗಳಿಂದಲೇ ‘ತಪ್ಪು ಮಾಡೋಣ, ಸಿಲುಕಿಕೊಂಡರೂ ಹತ್ತಾರು ವರ್ಷ ಎಳೆದಾಡಬಹುದು’ ಎಂಬ ಮನೋಭಾವಕ್ಕೆ ಅಧಿಕಾರಾರೂಢರು ಬರುವ ಸಾಧ್ಯತೆ ಇದೆ.

ತಪ್ಪಿತಸ್ಥರು ಸಾಮಾನ್ಯ ವ್ಯಕ್ತಿಯೇ ಆಗಲಿ ಅಥವಾ ಮಂತ್ರಿ ಮಹೋದಯರು, ಅಧಿಕಾರಿಗಳೇ ಆಗಲಿ ವಿನಾ ಕಾಲಹರಣ ಕೂಡದು. ನ್ಯಾಯ ತ್ವರಿತವಾಗಿ ದೊರೆಯುವಂತಾಗಲಿ, ತಪ್ಪಿತಸ್ಥರಿಗೆ ಶಿಕ್ಷೆ ಆಗಲಿ. ತಪ್ಪಿಲ್ಲದಿದ್ದರೆ ದೋಷಮುಕ್ತರು ಎಂದು ತೀರ್ಪು ಬರಲಿ. ಯಾವುದೇ ಪ್ರಕರಣವಾದರೂ ಒಂದು ತಾರ್ಕಿಕ ಅಂತ್ಯ ಕಾಣಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ವೇತನ ಪರಿಷ್ಕರಣೆ: ಹುಸಿಯಾದ ನಿರೀಕ್ಷೆ

ರಾಜ್ಯ ಸರ್ಕಾರಿ ನೌಕರರಿಗೆ ಏಳನೇ ವೇತನ ಆಯೋಗದ ಶಿಫಾರಸಿನಂತೆ ವೇತನ ಪರಿಷ್ಕರಿಸಲಾಗಿದೆ. ರಾಜ್ಯ ಸರ್ಕಾರದ ಕೆಲವು ಜನಪ್ರಿಯ ಕಾರ್ಯಕ್ರಮಗಳ ವೆಚ್ಚಗಳ ಇಕ್ಕಟ್ಟಿನ ನಡುವೆಯೂ ಈ ಪ್ರಸ್ತಾವವನ್ನು ಒಪ್ಪಿಕೊಂಡಿರುವುದನ್ನು ಸರ್ಕಾರಿ ನೌಕರರು ಕೃತಜ್ಞತೆಯಿಂದ ಸ್ವಾಗತಿಸಲೇಬೇಕು. ಆದರೆ ಇಲ್ಲಿ ಒಂದು ಅಸಮಾಧಾನ ಎದ್ದು ಕಾಣುವಂತಿದೆ. ಈ ಹಿಂದಿನ ಸರ್ಕಾರವು ಶೇಕಡ 17ರಷ್ಟನ್ನು ಮಧ್ಯಂತರ ಪರಿಹಾರವಾಗಿ 1.4.2023ರಿಂದ ಅನ್ವಯವಾಗುವಂತೆ ಜಾರಿ ಮಾಡಿತ್ತು. ಹೀಗಾಗಿ ಅದೇ ದಿನಾಂಕದಿಂದ ಅನ್ವಯವಾಗುವಂತೆ ವೇತನ ಪರಿಷ್ಕರಣೆಯ ಹಣಕಾಸು ಸೌಲಭ್ಯ ಸಿಗುತ್ತದೆ ಎಂಬ ವಿಶ್ವಾಸದಲ್ಲಿ ಎಲ್ಲರೂ ಇದ್ದರು. ಸಾಮಾನ್ಯವಾಗಿ ಈ ಹಿಂದೆ ಇದೇ ಪರಿಪಾಟವನ್ನು ಅನುಸರಿಸಲಾಗುತ್ತಿತ್ತು. ಇದಕ್ಕೆ ವ್ಯತಿರಿಕ್ತವಾಗಿ ಸರ್ಕಾರ 1.8.2024ರಿಂದ ಅನ್ವಯವಾಗುವಂತೆ ಹಣಕಾಸು ಸೌಲಭ್ಯವನ್ನು ಮಂಜೂರು ಮಾಡಿದೆ.

ಸರ್ಕಾರದ ಈ ನಿರ್ಧಾರದಿಂದ ಸರ್ಕಾರಿ ನೌಕರರು ಪೂರ್ವಾನ್ವಯದಿಂದ ಲಭ್ಯವಾಗಬೇಕಾದ ಹಣಕಾಸು ಸೌಲಭ್ಯದಿಂದ ವಂಚಿತರಾಗಿದ್ದಾರೆ. ಇದರಲ್ಲಿ ಹೆಚ್ಚು ಬಾಧಿತರಾದವರು 1.4.2023ರಿಂದ 31.7.2024ರ ನಡುವೆ ಸೇವೆಯಿಂದ ನಿವೃತ್ತಿ ಹೊಂದಿರುವ ನೌಕರರು. ಗ್ರ್ಯಾಚುಟಿ, ಪರಿವರ್ತಿತ ಪಿಂಚಣಿ ಮತ್ತು ಗಳಿಕೆ ರಜೆ ನಗದೀಕರಣವನ್ನು ಒಳಗೊಂಡಂತಹ ಒಂದು ತೃಪ್ತಿಕರ ಮೊತ್ತದ ಸೌಲಭ್ಯ ದೊರೆಯುವುದು ನಿಶ್ಚಿತ ಎಂಬ ಭರವಸೆಯಲ್ಲಿದ್ದ ಇವರಿಗೆ ಅಪಾರ ನಿರಾಸೆಯಾಗಿದೆ. ಕೆಲವು ಲಕ್ಷಗಳಷ್ಟು ಮೊತ್ತದ ಹಣ ಇವರ ಕೈತಪ್ಪಿ ಹೋದಂತಾಗಿದೆ. ಇವರಿಗೆ ಸಾಮಾನ್ಯವಾಗಿ ನಿವೃತ್ತಿ ಸಂದರ್ಭದಲ್ಲಿ ಗೃಹ ನಿರ್ಮಾಣ, ಮಕ್ಕಳ ವಿವಾಹ, ಮುಂದಿನ ಕಷ್ಟಕರ ದಿನಗಳಿಗಾಗಿ ಉಳಿತಾಯದಂತಹ ಕನಸುಗಳಿರುವುದು ಸಹಜ. ಈಗ ಈ ನಿರೀಕ್ಷೆಗಳು ಹುಸಿಯಾಗಿವೆ. ಆದ್ದರಿಂದ ರಾಜ್ಯ ಸರ್ಕಾರ ಈ ವಿಷಯವನ್ನು ಸಹಾನುಭೂತಿಯಿಂದ ಮರುಪರಿಶೀಲಿಸಿ ನಿವೃತ್ತ ನೌಕರರಿಗೆ ನ್ಯಾಯ ಒದಗಿಸಬೇಕು. ಈ ದಿಸೆಯಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘ ಮತ್ತು ಸಂಬಂಧಪಟ್ಟವರೆಲ್ಲ ಪ್ರಯತ್ನಿಸುವುದು ಅಗತ್ಯ.

ಹರೀಶ್ ಕುಮಾರ್ ಕುಡ್ತಡ್ಕ, ಮಂಗಳೂರು

ನಿರ್ಗಮನ?

ಹಗರಣಗಳ ಸುಳಿಯಲ್ಲಿ
ನಾನಾ
ನಿಗಮಗಳು!
ವಾಲ್ಮೀಕಿ ನಿಗಮ:
‘ರಾಮಾಯಣ’
ನಿರ್ಗಮನದ ಹಾದಿಯಲ್ಲಿ
ಭಾರಿ ಭಾರಿ ಕುಳಗಳು?
(ಅಲ್ಲಲ್ಲಿ ಲೈಂಗಿಕ
ಕಿರುಕುಳಗಳು!)

ಸಿ.ಪಿ.ಕೆ., ಮೈಸೂರು

ಪುಸ್ತಕ ಮಾರಾಟಕ್ಕೂ ಇರಲಿ ಆಸಕ್ತಿ

ಪುಸ್ತಕಲೋಕ ಎಡವುತ್ತಿರುವುದರ ಬಗ್ಗೆ ವೀರಕಪುತ್ರ ಶ್ರೀನಿವಾಸ ಅವರು ಎತ್ತಿರುವ ಪ್ರಶ್ನೆಗಳು (ಚರ್ಚೆ, ಆ. 21) ಸಮಯೋಚಿತವಾಗಿವೆ. ಲೇಖಕರು ಪುಸ್ತಕಗಳ ಪ್ರಕಟಣೆಗೆ ತೋರಿಸುವ ಆಸಕ್ತಿಯನ್ನು ಮಾರಾಟಕ್ಕೂ ತೋರಿಸಬೇಕು. ಪುಸ್ತಕಗಳನ್ನು ಜನರಿಗೆ ತಲುಪಿಸುವುದು ಒಂದು ವ್ರತ ಎಂಬಂತೆ ಗಳಗನಾಥರು ಪುಸ್ತಕಗಳನ್ನು ತಲೆ ಮೇಲೆ ಹೊತ್ತು ಮನೆ ಮನೆಗೆ ಹೋಗಿ ಮಾರಿದರು. ಈ ತರಹದ ದೊಡ್ಡ ಪರಂಪರೆ ನಮ್ಮಲ್ಲಿದೆ. ಬೆಂಗಳೂರಿನಲ್ಲೂ ಲೇಖಕ ಜಯರಾಮಾಚಾರಿ ಅವರು ಗೆಳೆಯರೊಂದಿಗೆ ಸೇರಿಕೊಂಡು ‘ಬಾ ಗುರು ಬುಕ್ ತಗೋ’ ಅಭಿಯಾನ ಶುರು ಮಾಡಿದ್ದಾರೆ. ಬಳ್ಳಾರಿಯಲ್ಲಿ ಅರುಣ್ ಭೂಪಾಲ್ ‘ಸ್ಟ್ಯಾಂಡ್ ವಿಥ್ ಬುಕ್ಸ್’ ಆರಂಭಿಸಿದ್ದಾರೆ. ಇಂತಹ ಕಾರ್ಯಕ್ರಮಗಳು ಎಲ್ಲೆಡೆ ವಿಸ್ತರಿಸಬೇಕು. ಪುಸ್ತಕಗಳ ಪರಿಚಯಕ್ಕಾಗಿ ನವ ಮಾಧ್ಯಮಗಳನ್ನು ಬಳಸಿಕೊಳ್ಳಬೇಕು. ಮದುವೆ, ಗೃಹಪ್ರವೇಶ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪುಸ್ತಕಗಳನ್ನು ಕಾಣಿಕೆಯಾಗಿ ಕೊಡಬೇಕು. ಹೊಸ ತಲೆಮಾರು ಓದಿನ ಕಡೆ ತೆರೆದುಕೊಳ್ಳಬೇಕು. ಬರೀ ಸರ್ಕಾರವನ್ನು ನೆಚ್ಚಿಕೊಳ್ಳದೆ ಸ್ವತಃ ಮುಂದಡಿ ಇಡಬೇಕು. ಆಗಮಾತ್ರ ಲೇಖಕರು, ಪ್ರಕಾಶಕರು ನೆಮ್ಮದಿಯ ನಿಟ್ಟುಸಿರು ಬಿಡಲು ಸಾಧ್ಯ.

ದಸ್ತಗೀರಸಾಬ್ ದಿನ್ನಿ, ಬಳ್ಳಾರಿ

ನೆರವಿಗೆ ಮನವಿ

ನನ್ನ ಪತ್ನಿ ಲಕ್ಷ್ಮಿ ಎನ್. ತೀವ್ರವಾದ ಶ್ವಾಸಕೋಶ ಸೋಂಕಿನಿಂದ ಬಳಲುತ್ತಿದ್ದು, ಆಕೆಗೆ ಬೆಂಗಳೂರಿನ ಬಿಜಿಎಸ್ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ನೀಡಲಾಗುತ್ತಿದೆ. ಪ್ರಸ್ತುತ, ಕೃತಕ ಉಸಿರಾಟದ ವ್ಯವಸ್ಥೆ ಮಾಡಲಾಗಿದೆ. ಚಿಕಿತ್ಸೆಗೆ ಸುಮಾರು 25 ಲಕ್ಷ ರೂಪಾಯಿ ವೆಚ್ಚ ತಗಲುತ್ತದೆ ಎಂದು ವೈದ್ಯರು ತಿಳಿಸಿದ್ದಾರೆ. ನನಗೆ ಇಷ್ಟೊಂದು ದೊಡ್ಡ ಮೊತ್ತವನ್ನು ಭರಿಸಲು ಸಾಧ್ಯವಾಗುತ್ತಿಲ್ಲ. ಹಾಗಾಗಿ, ನನ್ನ ಪತ್ನಿಯ ಚಿಕಿತ್ಸೆಗೆ ದಾನಿಗಳು ನೆರವಾಗಬೇಕೆಂದು ಕೋರುತ್ತೇನೆ. ಬ್ಯಾಂಕ್ ವಿವರ– ಪುಟ್ಟ ವಿಶ್ವನಾಥ ರೆಡ್ಡಿ, ಖಾತೆ ಸಂಖ್ಯೆ– 058301508408, ಐಸಿಐಸಿಐ ಬ್ಯಾಂಕ್, IFSC – ICIC0000583, ಮೊಬೈಲ್ ಸಂಖ್ಯೆ– 99864 47326.

ಪುಟ್ಟ ವಿಶ್ವನಾಥ ರೆಡ್ಡಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ನೋಂದಣಿಯೇ ಆಗದ ಕಂಪನಿಗೆ 550 ಎಕರೆ ಮಂಜೂರು ಮಾಡಿದ್ದ ಕುಮಾರಸ್ವಾಮಿ

ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್ ಕಂಪನಿಗೆ ಗಣಿಗಾರಿಕೆ ನಡೆಸಲು ಅರಣ್ಯ ಜಮೀನು ಮಂಜೂರು ಪ್ರಕರಣ

ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್‌ಗೆ ಬಳ್ಳಾರಿಯಲ್ಲಿ 550 ಎಕರೆ ಅರಣ್ಯ ಭೂಮಿಯನ್ನು ಮಂಜೂರು ಮಾಡಿದ ಪ್ರಕರಣದ ಸಂಬಂಧ ಲೋಕಾಯುಕ್ತ ಎಸ್‌ಐಟಿ ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಲು ಅನುಮತಿ ಕೋರಿ ಇತ್ತೀಚೆಗೆ ರಾಜ್ಯಪಾಲರಿಗೆ ಮತ್ತೆ ಪತ್ರ ಬರೆದಿದೆ. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಈ ಕಂಪನಿಗೆ ಜಮೀನು ಮಂಜೂರು ಮಾಡುವಲ್ಲಿ ಏನೆಲ್ಲಾ ಅಕ್ರಮ ನಡೆದಿತ್ತು ಎಂಬುದರ ವಿವರಗಳು ಲೋಕಾಯುಕ್ತ ವರದಿಯಲ್ಲಿ ಇವೆ

• ಜಯಸಿಂಹ ಆರ್.

ನೋಂದಣಿಯೇ ಆಗದ ಕಂಪನಿಗೆ ಎಚ್‌.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗಿದ್ದಾಗ 550 ಎಕರೆ ಜಮೀನನ್ನು ಗಣಿಗಾರಿಕೆಗೆ ಮಂಜೂರು ಮಾಡಿದ್ದರು ಎಂದು ಲೋಕಾಯುಕ್ತ ವರದಿಯಲ್ಲಿನ ಅಂಶಗಳು ಹೇಳುತ್ತವೆ. ವರದಿ ಸಿದ್ದಪಡಿಸಿದ್ದ ಯು.ವಿ.ಸಿಂಗ್ ಅವರು ಈ ಮಂಜೂರಾತಿಗೆ ಸಂಬಂಧಿಸಿದ ಪ್ರತಿ ದಾಖಲೆಯನ್ನೂ ಸೇರಿಸಿ ವರದಿ ಸಿದ್ಧಪಡಿಸಿದ್ದರು. ಈ ಪ್ರಕರಣದಲ್ಲಿ ಸಾಲು–ಸಾಲು ಅಕ್ರಮ–ಅವ್ಯವಹಾರಗಳು ನಡೆದಿವೆ ಎಂಬುದರತ್ತ ಆ ವರದಿ ಬೊಟ್ಟು ಮಾಡಿ ತೋರಿಸುತ್ತದೆ. ಆ ವರದಿಯನ್ನು ಆಧರಿಸಿ ಅಂದಿನ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ ಹೆಗ್ಡೆ ಅವರು ನೀಡಿದ್ದ ವರದಿಯಲ್ಲೂ ಈ ಅಂಶಗಳನ್ನು ಉಲ್ಲೇಖಿಸಲಾಗಿದೆ.

ಮಹಾರಾಷ್ಟ್ರದ ಎಸ್‌.ವಿ.ಸಕ್ರೆ ಅವರು ಬಳ್ಳಾರಿಯಲ್ಲಿ ಕಬ್ಬಿಣ ಮತ್ತು ಮ್ಯಾಂಗನೀಸ್ ಗಣಿಗಾರಿಕೆಗೆ ಜಮೀನು ಮಂಜೂರು ಮಾಡುವಂತೆ 2006ರ ಏಪ್ರಿಲ್ 17ರಂದು ಅರ್ಜಿ ಸಲ್ಲಿಸಿದ್ದರು. ಅದಿರು ಗಣಿಗಾರಿಕೆ ತನ್ನ ಮುಖ್ಯ ವಹಿವಾಟು ಎಂದು ಕಂಪನಿ ಹೇಳಿಕೊಂಡಿದ್ದರೂ ವಾಸ್ತವದಲ್ಲಿ ಆ ಕಂಪನಿ ಯಾವುದೇ ಚಟುವಟಿಕೆ ನಡೆಸುತ್ತಿರಲಿಲ್ಲ. ಈ ಅರ್ಜಿ ಸಂಬಂಧ ಕ್ರಮ ಕೈಗೊಳ್ಳುವಂತೆ ಖನಿಜ ಮತ್ತು ಗಣಿ ನಿರ್ದೇಶನಾಲಯವು ಸೂಚನೆ ನೀಡಿದ್ದರೂ ರಾಜ್ಯ ಸರ್ಕಾರದ ಆಕ್ಷೇಪದ ಕಾರಣ ಅರ್ಜಿಯನ್ನು ಸುಮಾರು ಒಂದು ವರ್ಷದವರೆಗೆ ತಡೆಹಿಡಿಯಲಾಗಿತ್ತು. ಇಂತಹ ಸುಮಾರು 28 ಅರ್ಜಿಗಳು ಇದ್ದು, ರಾಜ್ಯ ಸರ್ಕಾರವು ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಬಹುದು ಎಂದು ಖನಿಜ ಮತ್ತು ಗಣಿ ನಿರ್ದೇಶಕರ ಕಚೇರಿಯಿಂದ ರಾಜ್ಯ ಸರ್ಕಾರಕ್ಕೆ ಕಡತಗಳನ್ನು ಕಳುಹಿಸಲಾಗಿತ್ತು.


ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಈ ಕಡತವು ಅವರ ಮುಂದೆ ಬಂದಿತ್ತು. ಅವರು ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್‌ಗೆ 550 ಎಕರೆ ಮಂಜೂರು ಮಾಡುವಂತೆ ಷರಾ ಬರೆದು, ಸಹಿ ಹಾಕಿದ್ದಾರೆ ಎಂದು ಲೋಕಾಯುಕ್ತ ವರದಿಯಲ್ಲಿ ವಿವರಿಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದ ಕಡತವು ಯಾವ ದಿನ, ಯಾವ ಇಲಾಖೆಗೆ ಹೋಗಿತ್ತು, ಯಾರು ಸಹಿ ಮಾಡಿದರು ಎಂಬುದರ ಸಂಪೂರ್ಣ ದಾಖಲೆಗಳನ್ನು ವರದಿಯಲ್ಲಿ ಲಗತ್ತಿಸಲಾಗಿದೆ. ಎಚ್‌.ಡಿ.ಕುಮಾರಸ್ವಾಮಿ ಅವರು 2007ರ ಅಕ್ಟೋಬರ್ 5ರಂದು ಷರಾ ಬರೆದು, ಸಹಿ ಮಾಡಿದ್ದಾರೆ ಎಂದು ಹೇಳಲಾದ ಕಡತದ ಪ್ರತಿಯೂ ಈ ವರದಿಯಲ್ಲಿ ಇದೆ.


ಒಂದೇ ದಿನದಲ್ಲಿ ಮಂಜೂರು

ಎಚ್‌.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ 2007ರಲ್ಲಿ ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್‌ಗೆ ಸಂಬಂಧಿಸಿದ ಕಡತವು ಮುಖ್ಯಮಂತ್ರಿ ಕಚೇರಿಗೆ ಬಂದಿತ್ತು. 2007ರ ಅಕ್ಟೋಬರ್ 10ರಂದು ಮುಖ್ಯಮಂತ್ರಿಯ ಅಂದಿನ ಕಾರ್ಯದರ್ಶಿಯಾಗಿದ್ದ ಡಿ.ವಿ.ಪ್ರಸಾದ್ ಅವರು ಈ ಕಡತವನ್ನು 'ಕ್ರಮವಹಿಸಿ' ಎಂದು ಸೂಚಿಸಿ ಸಹಿ ಮಾಡಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಕಾರ್ಯದರ್ಶಿಗೆ ಕಳುಹಿಸಿದ್ದರು ಎಂದು ಯು.ವಿ.ಸಿಂಗ್ ತಮ್ಮ ವರದಿಯಲ್ಲಿ ವಿವರಿಸಿದ್ದಾರೆ.

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ಬಂದ ಕಡತ ಮತ್ತು ನಿರ್ದೇಶನ ಪತ್ರವನ್ನು ಕೇಸ್ ವರ್ಕರ್ ಅದೇ ದಿನ, ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಗೆ ಕಳುಹಿಸಿದ್ದರು. ಕಡತವನ್ನು ಪರಿಶೀಲಿಸಿದ್ದ ಹೆಚ್ಚುವರಿ ಕಾರ್ಯದರ್ಶಿ ತಕ್ಷಣವೇ ಅದನ್ನು ಕಾರ್ಯದರ್ಶಿಗೆ ತಲುಪಿಸಿದ್ದರು. ಕಡತಕ್ಕೆ ಸಂಬಂಧಿಸಿದಂತೆ ಅನುಮೋದನೆ ನೀಡಿದ ಕಾರ್ಯದರ್ಶಿಯು ಅದೇ ದಿನ ಮುಖ್ಯಮಂತ್ರಿಯ ಕಾರ್ಯದರ್ಶಿಗೆ ಕಡತವನ್ನು ರವಾನಿಸಿದ್ದರು. ಹೀಗೆ ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್‌ಗೆ ಸಂಬಂಧಿಸಿದ ಕಡತವು ಒಂದೇ ದಿನ ಮುಖ್ಯಮಂತ್ರಿ ಕಚೇರಿಯಿಂದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ಹಾಗೂ ಅಲ್ಲಿಂದ ವಾಪಸ್ ಮುಖ್ಯಮಂತ್ರಿ ಕಚೇರಿಗೆ ಬಂದಿತ್ತು ಎಂದು ಲೋಕಾಯುಕ್ತದ ವರದಿಯಲ್ಲಿ ವಿವರಿಸಲಾಗಿದೆ.

ಅದೇ ದಿನವೇ ಕಡತವನ್ನು ಮುಖ್ಯಮಂತ್ರಿಯವರ ಎದುರು ಇರಿಸಲಾಗಿತ್ತು. ಮುಖ್ಯಮಂತ್ರಿ ಎಚ್‌.ಡಿ.ಕುಮಾರಸ್ವಾಮಿ ಅವರು ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್‌ಗೆ ಜಮೀನು ಮಂಜೂರು ಮಾಡಲಾಗಿದೆ ಎಂದು ಷರಾ ಬರೆದು ಸಹಿ ಮಾಡಿದ್ದರು. 'ಕಡತವನ್ನು ಪರಿಶೀಲಿಸಲಾಗಿದೆ. ಬಳ್ಳಾರಿ ಜಿಲ್ಲೆಯ, ಸಂಡೂರು ತಾಲ್ಲೂಕಿನ, ಎನ್‌ಇಬಿ ರೇಂಜ್‌ನ ಭನಿಹಳ್ಳಿಯ ತಿಮ್ಮಪ್ಪಗುಡಿ ಸಮೀಪದ ಜೋಗದಲ್ಲಿ ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್‌ಗೆ 550 ಎಕರೆ ಗಣಿಯನ್ನು ಮಂಜೂರು ಮಾಡಿದ್ದೇನೆ' ಎಂದು ಕಡತದ 7ನೇ ಪುಟ ಮತ್ತು 16ನೇ ಪ್ಯಾರಾದ ಬಳಿ ಕುಮಾರಸ್ವಾಮಿ ಷರಾ ಬರೆದಿದ್ದಾರೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.




"ಮೇಲಿನ ವಿಷಯ ಕುರಿತು, ಉಲ್ಲೇಖಿತ ತಮ್ಮ ಪತ್ರದತ್ತ ಗಮನ ಸೆಳೆಯ ಬಯಸುತ್ತೇನೆ. ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ಜೋಗ, ತಿಮ್ಮಪ್ಪನಗುಡಿ, ಭನಿಹಳ್ಳಿ, ಎನ್.ಇ.ಬಿ ರೇಂಜಿನಲ್ಲಿ 550-00 ಎಕರೆ ಪ್ರದೇಶಕ್ಕೆ ಕಬ್ಬಿಣ ಅದಿರಿಗಾಗಿ ಗಣಿ ಗುತ್ತಿಗೆಯನ್ನು ಮೆ: ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್ (ಪ್ರೊಪ್ರೈಟರ್ ಶ್ರೀ ವಿನೋದ್ ಗೋಯಲ್) ಇವರಿಗೆ ಮಂಜೂರು ಮಾಡಲು ಮಾನ್ಯ ಮುಖ್ಯ ಮಂತ್ರಿಯವರು ಆದೇಶಿಸಿರುತ್ತಾರೆ. ಅದರಂತೆ, ಕೇಂದ್ರ ಸರ್ಕಾರದ ಪೂರ್ವಾನುಮೋದನೆಗೆ ಕಳುಹಿಸಬೇಕಾಗಿದ್ದು, ಈ ಕೆಳಕಂಡ ದಾಖಲಾತಿಗಳ ಮೂರು ಪ್ರತಿಗಳನ್ನು ಕೂಡಲೇ ಕಳುಹಿಸಿಕೊಡಬೇಕೆಂದು ತಮ್ಮನ್ನು ಕೋರಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ:-

(1) ಮೆ: ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್ (ಪ್ರೊಪ್ರೈಟರ್ ಶ್ರೀ ವಿನೋದ್ ಗೋಯಲ್) ಇವರ ಗಣಿಗುತ್ತಿಗೆ ಅರ್ಜಿ ಹಾಗೂ ಅದಕ್ಕೆ ಸಂಬಂಧಿಸಿದ ಅಫಿಡವಿಟ್ಟುಗಳು.


(2) ಚೆಕ್ ಲಿಸ್ಟ್ ಮತ್ತು ಪ್ರೋಫಾರ್ಮದಲ್ಲಿ ಮಾಹಿತಿ.

(3) ಸದರಿ ಪ್ರದೇಶದ ಚೆಕ್‌ಬಂದಿ ವಿವರಗಳುಳ್ಳ ದೃಢೀಕೃತ ನಕ್ಷೆ.

ತಮ್ಮ ನಂಬುಗೆಯ,
ಸಹಿ
(ಕೆ.ಜಯಚಂದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ (ಗಣಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ"

ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಬರೆಯಲಾಗಿತ್ತು ಎಂದು ಲೋಕಾಯುಕ್ತ ವರದಿಯಲ್ಲಿ ಉಲ್ಲೇಖಿಸಲಾದ ಪತ್ರ –ಲೋಕಾಯುಕ್ತ ವರದಿ ಚಿತ್ರ

ಮುಖ್ಯಮಂತ್ರಿ ಸಹಿ ಮಾಡಿದ ಕಡತವನ್ನು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಕಾರ್ಯದರ್ಶಿಗೆ ಕಳುಹಿಸಲಾಗಿತ್ತು. ಅವರು ಆ ಕಡತವನ್ನು ಪತ್ರದೊಂದಿಗೆ 2007ರ ಅಕ್ಟೋಬರ್ 6ರಂದು ಕೇಂದ್ರ ಸರ್ಕಾರದ ಗಣಿ ಮತ್ತು ಭೂವಿಜ್ಞಾನ ಸಚಿವಾಲಯದ ಅನುಮೋದನೆಗೆ ಕಳುಹಿಸಿದ್ದರು. ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಬರೆದಿದ್ದ ಆ ಪತ್ರದಲ್ಲಿ, 'ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್‌ಗೆ ಜಮೀನು ಮಂಜೂರು ಮಾಡಲು ಮುಖ್ಯಮಂತ್ರಿ ಆದೇಶಿಸಿರುತ್ತಾರೆ' ಎಂದು ಉಲ್ಲೇಖಿಸಲಾಗಿತ್ತು. ಯು.ವಿ. ಸಿಂಗ್ ಅವರು ಸಿದ್ದಪಡಿಸಿದ್ದ ವರದಿಯಲ್ಲಿ ಈ ಪತ್ರವನ್ನು ಲಗತ್ತಿಸಲಾಗಿದೆ. 2010-11ರಲ್ಲಿ ಸಲ್ಲಿಸಲಾದ ಲೋಕಾಯುಕ್ತ ವರದಿಯಲ್ಲೂ ಈ ಅಂಶಗಳನ್ನು ಸ್ಪಷ್ಟವಾಗಿ ಹೇಳಲಾಗಿದೆ.


had approved the proposal. The Noting of the Chief Minister is as follows:-

"I have perused the records. The Mining Lease in respect of 550 acres of land in Jog, Thimmappagudi, Vhavihalli, NEB Range, Sandur Taluk, Bellary District is granted in favour of the following:

M/s. Sri Sai Venkateshwara Minerals"
Sd/-
H.D.Kumaraswamy,
Chief Minister.

ಎಚ್‌.ಡಿ.ಕುಮಾರಸ್ವಾಮಿ ಬರೆದಿದ್ದಾರೆ ಎನ್ನಲಾದ ಷರಾಗೆ ಸಂಬಂಧಿಸಿದಂತೆ ಲೋಕಾಯುಕ್ತ ವರದಿಯಲ್ಲಿ ಉಲ್ಲೇಖಿಸಿರುವ ದಾಖಲೆಯ ಚಿತ್ರ

ಕುಮಾರಸ್ವಾಮಿ ಅಕ್ರಮ: 'ಲೋಕಾ' ವರದಿ

ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಗಣಿ ಜಮೀನು ಮಂಜೂರಿನಲ್ಲಿ ಅವರು ಅಕ್ರಮ ಎಸಗಿದ್ದಾರೆ ಎಂದು ಎಂದು ಲೋಕಾಯುಕ್ತ ನ್ಯಾಯಮೂರ್ತಿ ಎನ್‌.ಸಂತೋಷ್ ಹೆಗ್ಡೆ ತಮ್ಮ ವರದಿಯಲ್ಲಿ ಉಲ್ಲೇಖಿಸಿದ್ದರು.

'ಈ ಪ್ರಕರಣದಲ್ಲಿ ಹಲವಾರು ಅಕ್ರಮಗಳಾಗಿವೆ. ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಪರಿಶೀಲನೆ ನಡೆಸಿ, ಅದರಲ್ಲಿ ಭಾಗಿಯಾದವರ ವಿರುದ್ಧ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕು. ರಾಜ್ಯದ ಬೊಕ್ಕಸಕ್ಕೆ ಆಗಿರುವ ನಷ್ಟವನ್ನು ವಸೂಲಿ ಮಾಡಬೇಕು' ಎಂದು ವರದಿಯಲ್ಲಿ ಶಿಫಾರಸು ಮಾಡಿದ್ದರು.

'ಮಾಜಿ ಮುಖ್ಯಮಂತ್ರಿ ಎಚ್‌.ಡಿ.ಕುಮಾರಸ್ವಾಮಿ ಅವರು ಈಗ ಯಾವುದೇ ಹುದ್ದೆಯಲ್ಲಿ ಇಲ್ಲ. ಹೀಗಾಗಿ ಅವರ ಪ್ರಕರಣದಲ್ಲಿ ಯಾವುದೇ ಕ್ರಮಕ್ಕೆ ನಾವು ಶಿಫಾರಸು ಮಾಡುತ್ತಿಲ್ಲ. ಅವರು ಎಸಗಿರುವ ಅಕ್ರಮಕ್ಕೆ ಸಂಬಂಧಿಸಿದಂತೆ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳುವುದು ರಾಜ್ಯ ಸರ್ಕಾರಕ್ಕೆ ಬಿಟ್ಟ ವಿಚಾರ' ಎಂದು ಹೇಳಿದ್ದರು.

ಈ ವರದಿಯ ಆಧಾರದಲ್ಲೇ ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್ ಪ್ರಕರಣದಲ್ಲಿ ಎಚ್‌.ಡಿ.ಕುಮಾರಸ್ವಾಮಿ ವಿರುದ್ಧ ತನಿಖೆ ನಡೆಸುವಂತೆ 2017ರಲ್ಲಿ ಸುಪ್ರೀಂ ಕೋರ್ಟ್, ಲೋಕಾಯುಕ್ತ ಎಸ್‌ಐಟಿಗೆ ಸೂಚನೆ ನೀಡಿತ್ತು.

ಮಂಜೂರಿನಲ್ಲಿ ಹಲವಾರು ಲೋಪ



ನೋಂದಣಿಯೇ ಆಗದ ಕಂಪನಿಗೆ ಗಣಿಗಾರಿಕೆಗೆ ಅರಣ್ಯ ಜಮೀನು ಮಂಜೂರು ಮಾಡಿದ್ದಲ್ಲದೇ, ಮಂಜೂರಾತಿ ವೇಳೆ ಹಲವು ಅಕ್ರಮಗಳೂ ಆಗಿವೆ. ಕಂಪನಿಗೆ ಗಣಿ ಜಮೀನನ್ನು ಮಂಜೂರು ಮಾಡದೇ, ಅರ್ಜಿಯನ್ನು ತಿರಸ್ಕರಿಸಲು ಸರ್ಕಾರದ ಮುಂದೆ ಹಲವು ಕಾರಣಗಳು ಇದ್ದವು. ಆದರೆ ಅವೆಲ್ಲವನ್ನೂ ಕಡೆಗಣಿಸಿ ಅಕ್ರಮವಾಗಿ ಗಣಿಯನ್ನು ಮಂಜೂರು ಮಾಡಿದ್ದು, ಹಲವು ಲೋಪಗಳು ಆಗಿವೆ ಎಂದು ಲೋಕಾಯುಕ್ತ ತನ್ನ ವರದಿಯಲ್ಲಿ ಹೇಳಿತ್ತು. ಅಂತಹ ಹಲವು ಲೋಪಗಳನ್ನು ವರದಿಯಲ್ಲಿ ಪಟ್ಟಿ ಮಾಡಲಾಗಿತ್ತು.

- ಕಂಪನಿಯು ನೀಡಿರುವ ಎರಡು ವಿಳಾಸಗಳಲ್ಲಿ ಕಚೇರಿಗಳು ಇರಲಿಲ್ಲ. ವಾಸ್ತವದಲ್ಲಿ ಕಂಪನಿ ಅಸ್ತಿತ್ವದಲ್ಲೇ ಇರಲಿಲ್ಲ
- ಕಂಪನಿಗಳಿಗೆ ಗಣಿ ಜಮೀನನ್ನು ಮಂಜೂರು ಮಾಡುವಾಗ ಕೇಂದ್ರ ಸರ್ಕಾರದ ಖನಿಜ ನಿಯಮಗಳನ್ನು ಉಲ್ಲಂಘಿಸಲಾಗಿದೆ
- ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್ ಕಂಪನಿಯು ಈವರೆಗೆ ಗಣಿಗಾರಿಕೆ ನಡೆಸಿದ ಅನುಭವ ಹೊಂದಿಲ್ಲ. ಅಂತಹ ಕಂಪನಿಗೆ ಗಣಿ ಮಂಜೂರು ಮಾಡಲಾಗಿದೆ
- ಈ ಕಂಪನಿಯು ಮಹಾರಾಷ್ಟ್ರದಲ್ಲಾಗಲೀ, ಕರ್ನಾಟಕದಲ್ಲಾಗಲೀ ನೋಂದಣಿ ಆಗಿಲ್ಲ. ಎರಡೂ ರಾಜ್ಯಗಳಲ್ಲಿ ತೆರಿಗೆ ಸಂಖ್ಯೆ (ಎಂಎಸ್‌ಟಿ ಅಥವಾ ಕೆಎಸ್‌ಟಿ ನಂಬರ್) ಹೊಂದಿಲ್ಲ
- ಕಂಪನಿಯು ವ್ಯಾಟ್ ಸಂಖ್ಯೆಯನ್ನೂ ಹೊಂದಿಲ್ಲ
- ಕಂಪನಿಯು ದೇಶದ ಎಲ್ಲಿಯೂ ಬ್ಯಾಂಕ್ ಖಾತೆ ಹೊಂದಿಲ್ಲ. ಕಂಪನಿಯು ಆವರೆಗೆ ಗಣಿಗಾರಿಕೆಯಲ್ಲಿ ಯಾವುದೇ ಚಟುವಟಿಕೆ ಮತ್ತು ವಹಿವಾಟು ನಡೆಸದೇ ಇದ್ದ ಕಾರಣಕ್ಕೆ ಅದಕ್ಕೆ ಬ್ಯಾಂಕ್ ಖಾತೆ ತೆರೆಯುವ ಸಂದರ್ಭವೇ ಎದುರಾಗಿಲ್ಲ

ಆಧಾರ: ಯು.ವಿ.ಸಿಂಗ್ ವರದಿಯ ಶಿಫಾರಸು ಒಳಗೊಂಡ ಲೋಕಾಯುಕ್ತ ನ್ಯಾಯಮೂರ್ತಿ ಎನ್‌.ಸಂತೋಷ ಹೆಗ್ಡೆ ಅವರ ವರದಿ, ಕರ್ನಾಟಕ ವರ್ಸಸ್ ಎಚ್‌.ಡಿ.ಕುಮಾರಸ್ವಾಮಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಆದೇಶಗಳು

ಆ.30ಕ್ಕೆ ಟೇಕ್ವಾಂಡೋ ಗರ್ಲ್


ಋತುಸ್ಪರ್ಶ

ನಟಿ ಮಾಲಾಶ್ರೀ ನಟನೆಯ 'ನೈಟ್ ಕರ್ಫ್ಯೂ' ಸಿನಿಮಾಗೆ ಆ್ಯಕ್ಷನ್ ಕಟ್ ಹೇಳಿದ್ದ ನಿರ್ದೇಶಕ ರವೀಂದ್ರ ವಂಶಿ ನಿರ್ದೇಶನದ 'ಟೇಕ್ವಾಂಡೋ ಗರ್ಲ್' ಸಿನಿಮಾ ಆಗಸ್ಟ್ 30ರಂದು ರಿಲೀಸ್ ಆಗಲಿದೆ.

ಸಿನಿಮಾದ ಟೀಸರ್ ಅನ್ನು ನಿರ್ದೇಶಕ ಇಂದ್ರಜಿತ್ ಲಂಕೇಶ್ ಇತ್ತೀಚೆಗೆ ಬಿಡುಗಡೆ ಮಾಡಿದರು. ಚಿತ್ರದಲ್ಲಿ ಋತುಸ್ಪರ್ಶ ಮುಖ್ಯಭೂಮಿಕೆಯಲ್ಲಿ ನಟಿಸಿದ್ದಾರೆ. 'ಈ ಚಿತ್ರದಲ್ಲಿ ಒಂದು ಬಡ ಕುಟುಂಬದ ಹೆಣ್ಣು ಮಗಳು ಶಿಕ್ಷಣಕ್ಕಾಗಿ ಎಷ್ಟು ಕಷ್ಟ ಪಡುತ್ತಾಳೆ, ಓದುವುದೇ ಕಷ್ಟ ಇರುವಂತಹ ಸಮಯದಲ್ಲಿ ಟೇಕ್ವಾಂಡೋ ಸಮರ ಕಲೆ ಹೇಗೆ ಕಲಿಯುತ್ತಾಳೆ, ಈ ವಿದ್ಯೆಯ ಮುಖಾಂತರ ಸಮಾಜಕ್ಕೆ ಹೇಗೆ ಮಾದರಿಯಾಗುತ್ತಾಳೆ ಎನ್ನುವುದೇ ಈ ಚಿತ್ರದ ಮುಖ್ಯ ಸಾರಾಂಶ. 5ನೇ ತರಗತಿಯಲ್ಲಿ ಓದುತ್ತಿರುವ ಋತುಸ್ಪರ್ಶ ಮೂರನೇ ವಯಸ್ಸಿನಿಂದ ಈ ಕಲೆಯನ್ನು ಅಭ್ಯಾಸ ಮಾಡಿದ್ದಾಳೆ. ಒಟ್ಟು ಎಂಟು ಪರೀಕ್ಷೆಗಳನ್ನು ಎದುರಿಸಿ ಈಗ ಬ್ಲಾಕ್ ಬೆಲ್ಟ್ ಪಡೆದು ನಾಲ್ಕು ಅಂತರರಾಷ್ಟ್ರೀಯ ಚಾಂಪಿಯನ್ ಶಿಪ್‌ನಲ್ಲಿ ಭಾಗವಹಿಸಿದ್ದಾಳೆ' ಎಂದರು ರವೀಂದ್ರ ವಂಶಿ.


ನಿರ್ಮಾಪಕಿ ಸುಮೀತಾ ಪ್ರವೀಣ್ ಮಾತನಾಡಿ, 'ನನ್ನ ಮಗಳು ಋತುಸ್ಪರ್ಶ ಸಾಮರ್ಥ್ಯವನ್ನು ಗಮನಿಸಿ ಈ ಚಿತ್ರವನ್ನು ಮಾಡಿದ್ದೇನೆ. ಇಂತಹ ಕಲೆಗಳನ್ನು ಕಲಿಯುವ ಮುಖಾಂತರ ಹೆಣ್ಣುಮಕ್ಕಳು ಸ್ವಯಂರಕ್ಷಣೆ ಮಾಡಿಕೊಳ್ಳಬಹುದು ಎಂಬ ಬಗ್ಗೆ ಹೇಳಲು ಸಿನಿಮಾ ಮಾಡಿದ್ದೇವೆ. ವಿದ್ಯಾರ್ಥಿಗಳಿಗಾಗಿ ಟಿಕೆಟ್ ದರದಲ್ಲಿ ಶೇ 50 ರಿಯಾಯಿತಿ ನೀಡಿ ಚಿತ್ರ ವೀಕ್ಷಿಸಲು ಅನುಕೂಲ ಮಾಡುತ್ತೇವೆ' ಎಂದರು. ❖

ಹೊರಬಂತು 'ಕಲ್ಜಿಗ'ನ ಟ್ರೇಲರ್

ಕರಾವಳಿ ಭಾಗದ ಕಥೆ ಹೊಂದಿರುವ 'ಕಲ್ಜಿಗ' ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ. ಅರ್ಜುನ್ ಕಾಪಿಕಾಡ್ ಮತ್ತು ಸುಶ್ಮಿತಾ ಭಟ್ ಜೋಡಿಯಾಗಿ ನಟಿಸಿರುವ ಚಿತ್ರಕ್ಕೆ ಸುಮನ್ ಸುವರ್ಣ ಆ್ಯಕ್ಷನ್ ಕಟ್ ಹೇಳಿದ್ದಾರೆ. ದೇವದಾಸ್ ಕಾಪಿಕಾಡ್, ವಿಜಯಕುಮಾರ್ ಕೊಡಿಯಾಲ್ ಬೈಲ್ ಸೇರಿದಂತೆ ಅನೇಕ ಗಣ್ಯರು ಟ್ರೇಲರ್ ಬಿಡುಗಡೆಗೊಳಿಸಿ ಶುಭ ಹಾರೈಸಿದರು.

'ಸಿನಿಮಾಕ್ಕೆ ಸಂಬಂಧಿಸಿದ ಎಲ್ಲಾ ಕೆಲಸಗಳು ಪೂರ್ಣಗೊಂಡಿದ್ದು, ಸೆಪ್ಟೆಂಬರ್ 13 ರಂದು ಬಿಡುಗಡೆಗೊಳ್ಳಲಿದೆ. ರಾಜ್ಯದಲ್ಲಿ ಮಾತ್ರವಲ್ಲದೇ ಮುಂಬೈ, ಕೊಲ್ಲಿ ರಾಷ್ಟ್ರಗಳಲ್ಲಿಯೂ ಬಿಡುಗಡೆ ಮಾಡುವ ಯೋಚನೆಯಿದೆ. ಕರಾವಳಿಯ ಸಂಸ್ಕೃತಿ, ಆಚರಣೆಗಳ ಜೊತೆಗೆ ಧರ್ಮದ ದಾರಿಯಲ್ಲಿ ಅಧರ್ಮದ ನೆರಳು ಬಿದ್ದ ನಂತರದಲ್ಲಿ ಘಟಿಸುವ ಕಥೆ ಚಿತ್ರದಲ್ಲಿದೆ' ಎಂದರು ನಿರ್ದೇಶನ ಸುಮನ್.

ಶರತ್ ಕುಮಾರ್ ಎ.ಕೆ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಹಂಸಲೇಖ ಸಂಗೀತ, ಸಾಹಿತ್ಯ, ಸಚಿನ್ ಶೆಟ್ಟಿ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಮಾನಸಿ ಸುಧೀರ್, ಶೋಭರಾಜ್ ಪಾವೂರು ಸೇರಿದಂತೆ ಅನೇಕ ಕಲಾವಿದರು ನಟಿಸಿದ್ದಾರೆ. ❖


ಚಿತ್ರದ ಪೋಸ್ಟರ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ **ಕೋಲ್ಕತ್ತದ** ಆರ್.ಜಿ ಕರ್ ಆಸ್ಪತ್ರೆಯಲ್ಲಿ ಅತ್ಯಾಚಾರಕ್ಕೆ ಒಳಗಾಗಿ, ಹತ್ಯೆಗೀಡಾದ ಟ್ರೈನಿ ವೈದ್ಯೆಯ ದೇಹದಲ್ಲಿ150 ಮಿಲಿ ಗ್ರಾಂನಷ್ಟು (150mg) ವೀರ್ಯ ಪತ್ತೆಯಾಗಿದೆ ಎಂದು ಸುದ್ದಿಯಾಗಿತ್ತು. ಹಲವು ಸಾಮಾಜಿಕ ಜಾಲತಾಣ ಬಳಕೆದಾರರು ತಮ್ಮ ಖಾತೆಗಳಲ್ಲಿ ಈ ಬಗ್ಗೆ ಪೋಸ್ಟ್ ಮಾಡಿದ್ದರು. ಹಲವು ಮಾಧ್ಯಮಗಳೂ ಸುದ್ದಿ ಮಾಡಿದ್ದವು. ತಮ್ಮ ವಾದಕ್ಕೆ ಬಹುತೇಕರು ಮರಣೋತ್ತರ ಪರೀಕ್ಷೆಯ ವರದಿಯನ್ನು ಮೂಲವನ್ನಾಗಿ ಉಲ್ಲೇಖಿಸಿದ್ದರು. ಕೆಲವು ಸಾಮಾಜಿಕ ಜಾಲತಾಣಗಳ ಬಳಕೆದಾರರು 150 ಗ್ರಾಂನಷ್ಟು ವೀರ್ಯ ಕಂಡು ಬಂದಿದೆ ಎಂದೂ ಪೋಸ್ಟ್ ಮಾಡಿದ್ದರು. ಆದರೆ, ಇದು ಸುಳ್ಳು.

✓ **ಮರಣೋತ್ತರ ಪರೀಕ್ಷೆ** ವರದಿಯಲ್ಲಿ 151 ಗ್ರಾಂ ಎಂಬ ಉಲ್ಲೇಖ ಇರುವುದು ನಿಜ. ಆದರೆ, ಅದು ವೀರ್ಯ ಅಲ್ಲ. ಸಂತ್ರಸ್ತೆಯ ಜನನಾಂಗದ ಒಟ್ಟು ತೂಕ (ಆಂತರಿಕ ಮತ್ತು ಬಾಹ್ಯ ಅಂಗಗಳನ್ನೊಳಗೊಂಡು– weight of internal and external genitalia) ಎಂದು ಭಾರತೀಯ ವೈದ್ಯಕೀಯ ಒಕ್ಕೂಟದ ಮಾಜಿ ಅಧ್ಯಕ್ಷ ಡಾ.ಜೆ.ಎ.ಜಯ್‌ಲಾಲ್ 'ಬೂಮ್‌ಲೈವ್'ಗೆ ತಿಳಿಸಿದ್ದಾರೆ. ಈ ಪ್ರಕರಣದ ಬಗ್ಗೆ ಸ್ವಯಂಪ್ರೇರಿತವಾಗಿ ವಿಚಾರಣೆ ನಡೆಸುತ್ತಿರುವ ಸುಪ್ರೀಂ ಕೋರ್ಟ್‌ನಲ್ಲಿ ವಾದ ಮಂಡಿಸುವಾಗ ಪಶ್ಚಿಮ ಬಂಗಾಳ ಸರ್ಕಾರ ಕೂಡ ಇದೇ ಅಂಶವನ್ನು ಉಲ್ಲೇಖಿಸಿದೆ ಎಂದು ಬೂಮ್ ಫ್ಯಾಕ್ಟ್‌ಚೆಕ್ ತಿಳಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಆಗಸ್ಟ್ 22, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ತೃತೀಯ ಗಂ. 13-47 ನಕ್ಷತ್ರ: ಉತ್ತರಾಭಾದ್ರ ಗಂ. 22-06 ಯೋಗ: ಧೃತಿ ಗಂ. 13-10 ಕರಣ: ವಿಷ್ಟಿ ಗಂ. 13-47, ಸಿಂಹ ಮಾಸದ 06 ನೇ ದಿನ, ಮಳೆನಕ್ಷತ್ರ: ಮಘಾ 2.

ರಾಹುಕಾಲ : ಮಧ್ಯಾಹ್ನ 01-30 – 03-00

ಸೂರ್ಯೋದಯ : 06-22 ಸೂರ್ಯಾಸ್ತ : 06-44

ಮುಸ್ಲಿಂ ದಿನಾಂಕ : 17 ಸಫರ್, ದಿನ ವಿಶೇಷ : ಸಂಕಷ್ಟಹರ ಚತುರ್ಥಿ (ಚಂದ್ರೋದಯ: ರಾತ್ರಿ 08:47), ಅದೃಷ್ಟ ಸಂಖ್ಯೆ : 3, 8

ಮೇಷ: ದವಸ ಧಾನ್ಯಗಳ ಸಗಟು ವ್ಯಾಪಾರಿಗಳು ಹಾಗೂ ದಲ್ಲಾಳಿಗಳು ಅನುಕೂಲವನ್ನು ಪಡೆಯುವರು. ಬೆಲೆ ಬಾಳುವ ವಸ್ತುವನ್ನು ಕಳೆದುಕೊಳ್ಳುವುದರಿಂದ ಜಾಗ್ರತೆ ವಹಿಸಿ. ಮಿತ್ರರಿಂದ ಸಂತಸ ಹೊಂದುವಿರಿ.

ವೃಷಭ: ಕುಟುಂಬದವರ ಮಾತುಗಳಿಗೆ ಬೆಲೆ ಕೊಡುವುದು ಮತ್ತು ಎಲ್ಲರಲ್ಲೂ ಸಹನೆಯಿಂದ ವರ್ತಿಸುವುದನ್ನು ರೂಢಿಸಿಕೊಳ್ಳುವುದು ಉತ್ತಮ. ವಿದ್ಯುತ್ತಿನ ಜತೆಯಲ್ಲಿ ಕಾರ್ಯನಿರ್ವಹಿಸುವವರು ಜಾಗರೂಕತೆ ವಹಿಸಬೇಕು.

ಮಿಥುನ: ಉದ್ಯೋಗದಲ್ಲಿ ವೈಯಕ್ತಿಕ ಅನಿಸಿಕೆಯು ಕಂಪನಿಗಳಿಗೆ ಉತ್ತಮ ರೀತಿಯಲ್ಲಿ ಸಹಾಯಕಾರಿ ಆಗುವುದು. ಉತ್ತಮ ಕಾರ್ಯವನ್ನು ಮಾಡಿದವರನ್ನು ಮುಕ್ತವಾಗಿ ಶ್ಲಾಘಿಸುವ ಮನಸ್ಥಿತಿ ವೃದ್ಧಿಸಿಕೊಳ್ಳಿ.

ಕರ್ಕಾಟಕ: ದೇವತಾಕಾರ್ಯದ ಹೆಸರಿನಲ್ಲಿ ಕಠಿಣ ವ್ರತ ಮಾಡುವ ನಿಟ್ಟಿನಲ್ಲಿ ಆರೋಗ್ಯವನ್ನು ಕಡೆಗಣಿಸಬೇಡಿ. ಹಿರಿಯರನ್ನು ತೀರ್ಥಯಾತ್ರೆಗೆ ಕಳುಹಿಸುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಿ. ಪರಿಶ್ರಮಕ್ಕೆ ಲಾಭ ಸಿಗುತ್ತದೆ.

ಸಿಂಹ: ಉದ್ಯೋಗದಲ್ಲಿ ಸ್ಥಳ ಬದಲಾವಣೆ ಅಥವಾ ಅಧಿಕ ಜವಾಬ್ದಾರಿ ಹೊರಬೇಕಾಗುವ ಸಾಧ್ಯತೆಗಳಿವೆ. ಧರ್ಮ ಕಾರ್ಯಗಳಲ್ಲಿ ಭಾಗವಹಿಸುವುದು ಅಥವಾ ಆಸಕ್ತಿ ಬೆಳೆಸಿಕೊಳ್ಳುವುದು ಅಗತ್ಯವಾಗುವುದು.

ಕನ್ಯಾ: ಬಂಧುಗಳ ಮನೆಯ ಶುಭಕಾರ್ಯಗಳಲ್ಲಿ ಜವಾಬ್ದಾರಿ ಮತ್ತು ಓಡಾಟವಿರುವುದು. ದವಸ ಧಾನ್ಯಗಳ ದಾಸ್ತಾನಿಗಾಗಿ ಬಂಡವಾಳ ಹೂಡುವುದು ಸರಿಯಲ್ಲ. ಉನ್ನತ ವ್ಯಾಸಂಗದವರಿಗೆ ನೇರ ಆಯ್ಕೆ ಸಂಭವವಿದೆ.

ತುಲಾ: ಪುಣ್ಯ ಸಂಪಾದನೆ ಮುಖ್ಯ ಧ್ಯೇಯವಾಗಿರಲಿ. ಹಿರಿಯ ಅಧಿಕಾರಿಗಳ ಅಥವಾ ಆಪ್ತರ ಸಹಾಯ ಸಿಗುವುದು. ಸಾಧ್ಯವಾದಷ್ಟು ತಾಳ್ಮೆಯಿಂದ ಮುಂದುವರಿದಲ್ಲಿ ಮಾನಸಿಕ ನೆಮ್ಮದಿ ಕಾಣುವಿರಿ.

ವೃಶ್ಚಿಕ: ಸಾಧಿಸಲೇಬೇಕೆಂಬ ಛಲವಿರುವ ನಿಮಗೆ ಕಾರ್ಯಗಳೆಲ್ಲವೂ ಕಷ್ಟಕರವಾಗಿ ಸಿದ್ಧಿಸಲಿದೆ. ತಾಂತ್ರಿಕ ವಿದ್ಯಾಭ್ಯಾಸದಲ್ಲಿ ಉನ್ನತ ಯಶಸ್ಸು ದೊರೆತು ಆನಂದವಾಗುತ್ತದೆ. ಅವಲಂಬನೆ ಬೇಡವೆನಿಸುತ್ತದೆ.

ಧನು: ಮನೆಯಲ್ಲಿ ದೇವತಾ ಕಾರ್ಯಗಳನ್ನು ನಡೆಸುವ ಯೋಚನೆ ಬರಲಿದೆ. ವ್ಯವಹಾರ ಒಪ್ಪಂದಗಳು ಲಾಭ ತರಲಿದೆ. ಸ್ನೇಹಿತರಿಗೆ ಸಹಾಯ ಮಾಡುವ ಬಗ್ಗೆ ನಿರ್ಧರಿಸಿ. ವೈಯಕ್ತಿಕ ಜೀವನ ಸಮಸ್ಯೆ ಬಗೆಹರಿದು ನೆಮ್ಮದಿ ಮೂಡಲಿದೆ.

ಮಕರ: ಆದಾಯ ಅಧಿಕವಾಗಿಯೇ ಇದ್ದರೂ ಖರ್ಚಿಗೆ ಬೇಕಾದಂಥ ಸಂದರ್ಭದಲ್ಲಿ ಅದು ಕೈಗೆ ಎಟುಕದೇ ಇರುವಂಥ ಪರಿಸ್ಥಿತಿ ಉಂಟಾಗುತ್ತದೆ. ವಾದವಿವಾದಗಳಿಗೆ ತೆರೆ ಎಳೆಯುವ ಪ್ರಯತ್ನ ಮಾಡಿ.

ಕುಂಭ: ಕಹಿ ವಿಚಾರದ ಬಗ್ಗೆ ತಲೆಕೆಡಿಸಿಕೊಳ್ಳುವ ಅವಶ್ಯಕತೆ ಇಲ್ಲ. ಕೈಗೆ ಎಟಕುವ ವಿಷಯಗಳ ಬಗ್ಗೆ ಮಾತ್ರ ಚಿಂತಿಸಿ. ರಬ್ಬರ್ ಹಾಗೂ ಪ್ಲಾಸ್ಟಿಕ್‌ನ ವ್ಯಾಪಾರಗಳಿಂದ ಅಧಿಕ ಲಾಭವಿದೆ.

ಮೀನ: ಸಮಾಜದಲ್ಲಿ ಗೌರವಾನ್ವಿತ ವ್ಯಕ್ತಿಯಾಗಿರಲು ಶಿಸ್ತಿನ ಜೀವನವನ್ನು ನಡೆಸಬೇಕಾಗುತ್ತದೆ. ದೇವರ ಅನುಗ್ರಹದಿಂದ ಎಲ್ಲಾ ಕೆಲಸಗಳಲ್ಲೂ ಜಯಶಾಲಿಯಾಗುವ ಲಕ್ಷಣವಿರುವುದು. ಅಚ್ಚರಿಯ ಸುದ್ದಿ ಕೇಳಲಿರುವಿರಿ.

ಹಣೆಬರಹ ಬದಲಿಸುವ ಬೆವರು!

ನುಡಿ ಬೆಳಗು



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

6

ನೀವು ಕೆಲಸಕ್ಕೆ ಹೊರಟಿರ್ತೀರಿ, ಬೆಕ್ ಅಡ್ಡ ಬಂತು ಅಂದ್ರ, 'ಇವತ್ತು ಕೆಲಸ ಆಗಲ್ಲ' ಅನಕೋತೀರಿ. ಅಪಶಕುನ ಅಂತೀರಿ. ಊರಾಗ ಬೆಕ್ಕು ಇರೋದ ಅದ. ಅದು ಅಡ್ಡ ಬರೋದ, ಅದರಾಗೇನು ವಿಶೇಷ? ನೀವು ಅಡ್ಡ ಬಂದಿದ್ದಕ್ಕ ಬೆಕ್ಕು ಅಂತೈತಿ 'ಇವ ಅಡ್ಡ ಬಂದ, ಇವತ್ತು ಯಾರ ಮನೇಲೂ ಹಾಲು ಸಿಗಲ್ಲ' ಅಂತ. ಎಲ್ಲಿಗಾರು ಹೊಂಟಾಗ ಯಾರಾದರೂ ಎಲ್ಲಿಗೆ ಅಂತ ಕೇಳಿದರ, ಹೊಳ್ಳಿ ಮನೆಗೆ ಬಂದು ಕಟ್ಟೆ ಮೇಲೆ ಕುಂತು ಉಸ್ರು ತೆಗೆದು ಹೋಗ್ತೀರಿ. ಉಸುರು ತೆಗೆದರೆ ಕೆಟ್ಟದ್ದೇನು ಗಾಳ್ಯಾಗ ಹೋಗ್ತದೇನು? ಬಸ್ ಹತ್ತಿದಾಗ ಕಂಡಕ್ಟರ್ ಎಲ್ಲಿಗೆ ಎಂದು ಕೇಳ್ತಾನ. ಅವ ದಿವ್ಯ ಜ್ಞಾನಿ ಏನ್? ಎಲ್ಲಿಗೆ ಹೊಂಟಿ ಎಂದು ಕೇಳಲಾರದೆ ಟಿಕೆಟ್ ಕೊಡಾಕೆ. ಏನ್ ಮನುಷ್ಯನ ಮನಸ್ಸು. ಬರೀ ಕೆಟ್ಟದ್ದನ್ನೇ ಆಲೋಚನೆ ಮಾಡತ್ತೆ.

ಇನ್ನು ಕೆಲವರು 'ನಮ್ಮ ಹಣೆಬರಹ ಸರಿ ಇಲ್ಲ' ಅಂತಾರ. ಹಣೆ ಬರಹಕ್ಕೆ ಏನಾಗ್ಯದ. ಚೆನ್ನಾಗೇ ಅದ. ಮನುಷ್ಯ ಒಂದು ತಿಳಕೊಬೇಕು. ಹಣೆಬರಹ ಏನಾದರೂ ಇರಲಿ, ನಿಮ್ಮ ಬೆವರು ಹನಿಗಳಿಂದ ಹಣೆಬರಹ ಅಳಿಸಿಕೊಳ್ಳಬಹುದು. ಹೊಸದಾಗಿ ಬರೆಯಬಹುದು. ಅದಕ್ಕ ಮನುಷ್ಯ ದುಡೀಬೇಕು. ಬೆವರು ಸುರಿಸಬೇಕು.

ನೂಲಿಯ ಚಂದಯ್ಯ ಅಂತ ಒಬ್ಬ ಶರಣ ಇದ್ದ. ಹಗ್ಗ ಹೊಸೆಯುವ ಕೆಲಸ ಮಾಡುತ್ತಿದ್ದ. ಹಗ್ಗ ಹೊಸೆಯೋದು, ಮಾರಿಕೊಂಡು ಬಂದು ಜೀವನ ಮಾಡೋದು. ಅದರಲ್ಲೇ ದಾಸೋಹ ಮಾಡಬೇಕು. ಶರಣರ ರೀತಿಯೇ ಹಾಂಗ. ತಾವು ದುಡಿದಿದ್ದರಲ್ಲೇ ಕೊಂಚ ಪಾಲನ್ನು ದಾಸೋಹಕ್ಕೂ ಬಳಸುತ್ತಿದ್ದರು.

ಒಮ್ಮೆ ನೂಲಿಯ ಚಂದಯ್ಯ ಹುಲ್ಲು ಕೊಯ್ಯೋಕೆ ಹೋಗಿದ್ದ. ಕೊರಳಲ್ಲಿ ಇರುವ ಲಿಂಗ ಕೆಳಕ್ಕೆ ಬಿತ್ತು. 'ನಾನು ಕಾಯಕ ಮಾಡುತ್ತಿರುವಾಗ ದೇವರು ಕೆಳಕ್ಕೆ ಬಿದ್ದಾನೆ ಅಂದ್ರ ಅದು ಅವನ ತಪ್ಪು ನನ್ನದಲ್ಲ' ಅಂತಾನೆ.

ಅದೊಂದು ಅಪಶಕುನ ಎಂದುಕೊಳ್ಳಲಿಲ್ಲ. ನಾವು ಎಷ್ಟು ಭಯಗ್ರಸ್ತರು ಅಂದರ ದೀಪ ಆರಿದರೆ ಭಯಪಡ್ತೀವಿ. ಯಾವಾಗಲೂ ಆರದ ದೀಪ ಸೂರ್ಯ ಇದ್ದಾನೆ ಎಂಬುದನ್ನು ಮರೀತೀವಿ. ಮನುಷ್ಯ ಹಚ್ಚಿದ ದೀಪ ಆರತದ. ನಿಸರ್ಗ ಹಚ್ಚಿದ ದೀಪ ಎಂದಿಗೂ ಆರೋದಿಲ್ಲ.

ನೆಲಕ್ಕೆ ಬಿದ್ದ ಲಿಂಗ ನುಲಿಯ ಚಂದಯ್ಯನ ಬೆನ್ನುಬಿತ್ತು. 'ನನ್ನ ಸ್ವೀಕರಿಸು' ಅಂತ ಬೇಡಿಕೊಳ್ತು. ಅದಕ್ಕೆ ಚಂದಯ್ಯ ಜಗ್ಗಲಿಲ್ಲ. 'ನಿನ್ನ ಹಾಂಗೇ ಸ್ವೀಕರಿಸಲ್ಲ. ನೀನು ಅನುಭವ ಮಂಟಪಕ್ಕೆ ಬರಬೇಕು. ಅಲ್ಲಿ ಅಲ್ಲಮಪ್ರಭು ಮುಂದೆ ಯಾರದ್ದು ತಪ್ಪು ಒಪ್ಪು ಅಂತ ಚರ್ಚೆ ಆಗಬೇಕು. ಅಲ್ಲಿ ತೀರ್ಮಾನ ಆಗಬೇಕು. ನಿನ್ನದೇ ತಪ್ಪು ಎಂದಾದರೆ ನಾನು ಹಗ್ಗ ಹೊಸಿತೀನಿ, ನೀನು ಮಾರಿಕೊಂಡು ಬರಬೇಕು' ಅಂತಾನೆ.

ನಾವು ದೇವರನ್ನು ಹುಡುಕಿಕೊಂಡು ಕಾಶಿ, ರಾಮೇಶ್ವರ, ಜ್ಯೋತಿರ್ಲಿಂಗ ಅಂತ ಹೋಗ್ತೀವಿ. ಆದರೆ, ಶರಣರು ಅಂತಾರೆ, 'ನೀನು ಸುಮ್ಮನೆ ಮನೆಯಲ್ಲಿಯೇ ಕುಳಿತು ನಿನ್ನ ಕಾಯಕ ನಿಷ್ಠೆಯಿಂದ ಮಾಡು. ದೇವರು ನಿನ್ನ ಹಿಂದೆ ಬರ್ತಾನೆ' ಅಂತ. ಅದಕ್ಕೆ ನುಲಿಯ ಚಂದಯ್ಯ 'ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದು ಲಿಂಗಕರ್ಪಿತವಲ್ಲದೆ ದುರಾಶೆಯಿಂದ ಬಂದುದು ಅನರ್ಪಿತ. ಇದು ಕಾರಣ ಸತ್ಯಶುದ್ಧ ಕಾಯಕ ನಿತ್ಯದ್ರವ್ಯವಾದರೆ ಚಂದೇಶ್ವರ ಲಿಂಗಕ್ಕೆ ನೈವೇದ್ಯ ಸಂದಿತ್ತು ಕೇಳಯ್ಯ' ಅಂತಾನೆ. ❖

ಪದಬಂಧ 5780


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕಡುಹಗೆಯನ್ನು ಹೀಗೆನ್ನಿ (4)
3.ಈತ ಅನುಭವವುಳ್ಳವನು (4)
5.ಈ ರೀತಿ ರೇಗಿಸು! (3)
7.ಕಾಯಕದಲ್ಲಿ ನಿರತವಾಗಿರುವ ದೇಹ (2)
9.ಬೇರೆ ರೂಪವನ್ನು ಧರಿಸುವುದು (7)
11.ಗಂಡುಕರು ಇಲ್ಲಿದೆ (2)
12.ಪುಸ್ತಕಗಳಿಗೆ ಬರೆದ ಆರಂಭದ ಮಾತು(3)
16.ಎಳೆತನದಲ್ಲಿಯ ಮೊಳೆತ ಸ್ನೇಹ (4)
17.ಸರ ಧರಿಸಿರುವ ಗ್ರಾಮ ಪಂಚಾಯಿತಿ ಅಧ್ಯಕ್ಷ (4)

ಮೇಲಿಂದ ಕೆಳಕ್ಕೆ

1.ಬಯಲಲ್ಲಿ ನಿಂತಾಗ ವ್ಯಕ್ತಪಡಿಸಿರುವ ಆಸೆ (3)
2.ಪಕ್ಷದ ಅರನೆಯ ದಿನ (2)
3.ಅಗ್ಗಳಿಕೆಯಿಂದ ಹೇಳಿರುವ ಕಡಿಮೆ ಬೆಲೆ! (2)
4.ನಂಜಿನಿಂದ ಕೂಡಿರುವ ಸಂಗತಿ (3)
6.ಕೆಟ್ಟರೂಪವಿದು (3)
7.ರತಿಪತಿಯಿಂದ ಮೂಡಿದ ಆಸೆ (3)
8.ಪುರಾಣದಲ್ಲಿ ಕಾಣಿಸಿದ ರುಜುವಾತು! (3)
9.ಶಿಲ್ಪವನ್ನು ಕೆತ್ತುವವನು (3)
10.ಶುಭಗಳಿಗೆ ಇಲ್ಲಿ ತಿರುವುಮುರುವಾಗಿದೆ(3)
11.ಹೋಳಿ ಹಬ್ಬದಂದು ಮಾಡಿದ ಒಬ್ಬಟ್ಟು(3)
13.ಉಲ್ಟಾ ಕಾಣುತ್ತಿರುವ ಮೋರಿ (3)
14.ಜಳಕಕ್ಕೊಂದು ಪರ್ಯಾಯ ಪದ (2)
15. ಉಸಿರನ್ನು ಮೇಲಕ್ಕೆ ಕೆಳಕ್ಕೆ ತೆಗೆದುಕೊಳ್ಳುವುದು (2)



5779ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಮ್ಮೋಹ 3.ಹೊಳಪು
6.ಗದ್ದುಗೆ 7.ದುರ್ಬೀನು
9.ಸಿಟ್ಟು 10.ಕನ್ನಡಿ
12.ಬಾಣ 15.ಸೂಕರ
16.ದಾಖಲು 17.ವಿವಾಹ
18.ಮೆಲ್ಲುಲಿ

ಮೇಲಿಂದ ಕೆಳಕ್ಕೆ:
1.ಸರೀಸೃಪ 2.ಹಗರು
3.ಹೊಗೆ 4.ಪುದುವಟ್ಟು
5.ಧನುರ್ವಾತ 8.ತೆಂಕಣ
9.ಸಿಡಿಲು 11.ಕಟಿಸೂತ್ರ
12.ಬಾಲರವಿ 13.ಕಡುಗಲಿ
14.ಒಲುಮೆ 16.ದಾಹ

ಸುಡೊಕು 6165

		5	8				1	
2								
		4			2	8		6
3		6				5		9
	7			2			8	
8		1				3		7
4			6		1		9	
	3				5	7		8
6		8	2				5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6164 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

ಒಡಾಟಕ್ಕೆ ಬುಲೆಟ್ ಪ್ರೂಫ್ ಕಾರು: ಮುಖ್ಯಮಂತ್ರಿ ವಿರುದ್ಧ ತನಿಖೆಗೆ ಆದೇಶಿಸಿದ ಬೆನ್ನಲ್ಲೇ ಹೆಚ್ಚಿದ ಭದ್ರತಾ ವ್ಯವಸ್ಥೆ

ರಾಜ್ಯಪಾಲರಿಗೆ ಝಡ್ ಶ್ರೇಣಿ ಭದ್ರತೆ

ಪ್ರಜಾವಾಣಿ ವಾರ್ತೆ



ಥಾವರಚಂದ್ ಗೆಹಲೋತ್

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ತನಿಖೆ ನಡೆಸಲು ಅನುಮತಿ ನೀಡಿರುವ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಕೇಂದ್ರ ಗುಪ್ತಚರ ಇಲಾಖೆ ಸೂಚನೆ ಮೇರೆಗೆ ಝಡ್ ಶ್ರೇಣಿಯ ಭದ್ರತೆ ಒದಗಿಸಲಾಗಿದೆ.

ಅಲ್ಲದೇ, ಕಳೆದ ಎರಡು ದಿನಗಳಿಂದ ರಾಜಭವನದ ಸುತ್ತಮುತ್ತ ಹೆಚ್ಚಿನ ಭದ್ರತಾ ವ್ಯವಸ್ಥೆ ಕೈಗೊಳ್ಳಲಾಗಿದೆ.

ತನಿಖೆಗೆ ಅನುಮತಿ ನೀಡಿದ ದಿನದಿಂದ ರಾಜ್ಯಪಾಲರ ವಿರುದ್ಧ ರಾಜ್ಯದಾದ್ಯಂತ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಸಿದ್ದರಾಮಯ್ಯ ಅಭಿಮಾನಿಗಳು ಪ್ರತಿಭಟನೆ ನಡೆಸುತ್ತಿದ್ದಾರೆ. ರಾಜ್ಯಪಾಲರ ಭಾವಚಿತ್ರಕ್ಕೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಲಾಗುತ್ತಿದೆ. ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಎರಡು ದಿನಗಳ ಹಿಂದೆ ನಡೆದ ಪ್ರತಿಭಟನೆಯಲ್ಲಿ ಭಾಗಿಯಾದ ಸಚಿವರೊಬ್ಬರು, 'ರಾಜ್ಯದಲ್ಲಿ ಗದ್ದಲ ಹಾಗೂ ಹಲ್ಲೆಗಳು ನಡೆದರೆ ರಾಜ್ಯಪಾಲರೇ ಹೊಣೆ' ಎಂದು ಎಚ್ಚರಿಸಿದ್ದರು. ರಾಜ್ಯಪಾಲರು ಸಂಚರಿಸುವ ಮಾರ್ಗಗಳಲ್ಲಿ ಅವರಿಗೆ ಪ್ರತಿಭಟನೆಯ ಬಿಸಿತಟ್ಟುವ ಸಾಧ್ಯತೆ ಇದೆ ಎಂಬ ಮಾಹಿತಿ ಗುಪ್ತಚರ ಇಲಾಖೆಗೆ ಸಿಕ್ಕಿದ್ದು, ಹೆಚ್ಚಿನ ಭದ್ರತೆ ಒದಗಿಸುವಂತೆ ಸೂಚಿಸಲಾಗಿದೆ. ರಾಜ್ಯದಲ್ಲಿ ನಡೆಯುತ್ತಿರುವ ಪ್ರತಿಭಟನೆ ಸಂಬಂಧ ನಡೆಯುತ್ತಿರುವ ಬೆಳವಣಿಗೆಯ ಮಾಹಿತಿಯನ್ನು ರಾಜ್ಯದಲ್ಲಿರುವ ಅಧಿಕಾರಿಗಳಿಂದ ಕೇಂದ್ರ ಗುಪ್ತಚರ ಇಲಾಖೆ ಪಡೆದಿದೆ ಎಂದು ಮೂಲಗಳು ತಿಳಿಸಿವೆ.

ಥಾವರಚಂದ್ ಗೆಹಲೋತ್ ಅವರು ರಾಜ್ಯದ ರಾಜ್ಯಪಾಲರಾಗಿ ನೇಮಕವಾದ ದಿನದಿಂದಲೂ ಇನೋವಾ ಕಾರನ್ನೇ ಓಡಾಟಕ್ಕೆ ಬಳಸುತ್ತಿದ್ದರು. ಈಗ ಅವರ ಭದ್ರತಾ ಸಿಬ್ಬಂದಿಯ ಸೂಚನೆ ಮೇರೆಗೆ ಬುಲೆಟ್ ಪ್ರೂಫ್ ಕಾರನ್ನು ಬಳಸುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

ಆಗಸ್ಟ್ 29ರವರೆಗೆ ಯಾವುದೇ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗಿ ಆಗದಂತೆಯೂ ರಾಜ್ಯಪಾಲರಿಗೆ ಗುಪ್ತಚರ ಇಲಾಖೆಯಿಂದ ಸೂಚನೆ ಬಂದಿದೆ ಎಂದು ಮೂಲಗಳು ತಿಳಿಸಿವೆ. ನಗರದಲ್ಲಿ ಬುಧವಾರ ನಡೆದ ನೃಪತುಂಗ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವ ಕಾರ್ಯಕ್ರಮಕ್ಕೆ ರಾಜ್ಯಪಾಲರು ಗೈರಾಗಿದ್ದರು.

ಮುಖ್ಯಮಂತ್ರಿ ಬದಲಾವಣೆ ಚರ್ಚೆಯೇ ಇಲ್ಲ: ಪರಮೇಶ್ವರ



ಜಿ.ಪರಮೇಶ್ವರ

'ಮುಖ್ಯಮಂತ್ರಿ ಬದಲಾವಣೆ ಕುರಿತು ಯಾವುದೇ ಚರ್ಚೆಗಳು ನಡೆಯುತ್ತಿಲ್ಲ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಮುಖ್ಯಮಂತ್ರಿ ಬದಲಾವಣೆ ವಿಚಾರದ ಚರ್ಚೆಯಲ್ಲಿಯೇ ಇಲ್ಲದಿದ್ದರೂ, ಬದಲಾವಣೆಯ ಸಂದರ್ಭ ಬಂದರೆ ಯಾರಿಗೆ ಅವಕಾಶ ಎಂಬ ಚರ್ಚೆಗಳು ಆಗುತ್ತಿವೆ' ಎಂದರು. 'ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇದೇ 23ರಂದು ದೆಹಲಿಗೆ ತೆರಳಿ ರಾಜ್ಯದಲ್ಲಿನ ಸದ್ಯದ ಬೆಳವಣಿಗೆಗಳ ಕುರಿತು ಹೈಕಮಾಂಡ್‌ಗೆ ಮಾಹಿತಿ ನೀಡಲಿದ್ದಾರೆ. ಅದನ್ನು ಹೊರತುಪಡಿಸಿದರೆ ವಿಶೇಷವೇನೂ ಇಲ್ಲ' ಎಂದರು. 'ಬಿಜೆಪಿ ಅಧಿಕಾರಾವಧಿಯ ಹಲವು ಹಗರಣಗಳು ತನಿಖಾ ಹಂತದಲ್ಲಿವೆ. ಈ ವಿಚಾರದಲ್ಲಿ ಹೊಂದಾಣಿಕೆ ರಾಜಕಾರಣ ಎಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಕೋವಿಡ್ ಹಗರಣಗಳ ಕುರಿತ ತನಿಖಾ ವರದಿ ಈ ತಿಂಗಳ ಅಂತ್ಯಕ್ಕೆ ಸರ್ಕಾರಕ್ಕೆ ಸಲ್ಲಿಕೆಯಾಗುವ ಸಾಧ್ಯತೆ ಇದೆ. ಅದರಲ್ಲಿ ಯಾವ ಅಂಶಗಳಿವೆ ಎಂಬುದು ಗೊತ್ತಿಲ್ಲ. ವರದಿ ಬಂದ ಬಳಿಕ ಚರ್ಚಿಸಿ, ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು' ಎಂದರು.

ಮುಡಾದಲ್ಲಿ ಕಡತ ನಾಪತ್ತೆ: ಪ್ರಕರಣ ದಾಖಲಿಸಲು ಮನವಿ

ಮೈಸೂರು: 'ಸಿದ್ದರಾಮಯ್ಯ ಪತ್ನಿ ಬಿ.ಎಂ.ಪಾರ್ವತಿ ಅವರಿಗೆ 14 ಬದಲಿ ನಿವೇಶನ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿ ಮುಡಾ ಭೂದಾಖಲೆಯಲ್ಲಿದ್ದ ಕೆಲವು ಮೂಲ ದಾಖಲೆಗಳು ನಾಪತ್ತೆಯಾಗಿದ್ದು, ಕೆಲವನ್ನು ತಿದ್ದಲಾಗಿದೆ. ಅದಕ್ಕೆ ಕಾರಣರಾದವರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು' ಎಂದು ಆರ್‌ಟಿಐ ಕಾರ್ಯಕರ್ತ ಎನ್. ಗಂಗರಾಜು ಒತ್ತಾಯಿಸಿದ್ದಾರೆ.

ಈ ಕುರಿತು ಮುಡಾ ಅಧ್ಯಕ್ಷರು, ಆಯುಕ್ತರಿಗೆ ಬುಧವಾರ ಮನವಿ ಪತ್ರ ಸಲ್ಲಿಸಿರುವ ಅವರು 'ಕೆಸರೆ ಗ್ರಾಮದ ಸರ್ವೆ ಸಂಖ್ಯೆ 464ಕ್ಕೆ ಸಂಬಂಧಿಸಿ ಬದಲಿ ನಿವೇಶನ ಕೋರಿ 2014ರಲ್ಲಿ ಪಾರ್ವತಿ ಅವರು ಮುಡಾಕ್ಕೆ ಸಲ್ಲಿಸಿದ್ದ ಮೂಲ ಅರ್ಜಿ, 1996ರಲ್ಲಿ ಜೆ. ದೇವರಾಜು ಭೂಮಾಲೀಕರೆಂದು ಸರ್ಕಾರಕ್ಕೆ ನೀಡಿದ್ದ ಮೂಲ ಅರ್ಜಿ, ಭೂಸ್ವಾಧೀನ ಅಧಿಕಾರಿಗಳ ಸ್ಥಳ ಪರಿಶೀಲನೆ ವರದಿ, ದೇವನೂರು ಬಡಾವಣೆಯ ಮೂಲ ನಕ್ಷೆ ಕಡತಗಳು ಕಾಣೆಯಾಗಿವೆ. ಅವುಗಳನ್ನು ನಿರ್ವಹಿಸುತ್ತಿರುವ ಸಿಬ್ಬಂದಿಯೇ ಇದಕ್ಕೆ ಕಾರಣ' ಎಂದು ದೂರಿದ್ದಾರೆ.

'ಮುಡಾ ಭೂಸ್ವಾಧೀನ ಶಾಖೆಯಲ್ಲಿ ಕೆಲವು ಸಿಬ್ಬಂದಿ ದಶಕಗಳಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಅಂತಹವರನ್ನು ತನಿಖೆ ಮುಗಿಯುವವರೆಗೆ ಬೇರೆಡೆಗೆ ವರ್ಗಾವಣೆ ಮಾಡಬೇಕೆಂದು ಸರ್ಕಾರಕ್ಕೆ ಶಿಫಾರಸು ಮಾಡಬೇಕು' ಎಂದು ಒತ್ತಾಯಿಸಿದ್ದಾರೆ.

ರಾಜ್ಯವ್ಯಾಪಿ ಬಿಜೆಪಿ ಪ್ರತಿಭಟನೆ ಇಂದು



ಕಾಂಗ್ರೆಸ್ ನಾಯಕರು ರಾಜ್ಯಪಾಲರಿಗೆ ಮಾಡಿದ ಅವಮಾನ ಖಂಡಿಸಿ ಮತ್ತು ಮುಡಾ ಪ್ರಕರಣ ದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆಗೆ ಒತ್ತಾಯಿಸಿ ಗುರುವಾರ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಸುನಿಲ್‌ಕುಮಾರ್ ತಿಳಿಸಿದರು.

ಬೆಂಗಳೂರು ಸೇರಿ ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ನಡೆಯುವ ಪ್ರತಿಭಟನೆ ಯಲ್ಲಿ ಪಕ್ಷದ ಸಂಸದರು, ಶಾಸಕರು, ಮಾಜಿ ಸಚಿವರು, ಮಾಜಿ ಶಾಸಕರು, ಜನಪ್ರತಿನಿಧಿಗಳು, ಜಿಲ್ಲಾಧ್ಯಕ್ಷರು, ಪದಾಧಿಕಾರಿಗಳು ಈ ಪ್ರತಿಭಟನೆ ಯಲ್ಲಿ ಭಾಗವಹಿಸಲಿದ್ದಾರೆ ಎಂದರು.

'ಸಚಿವ ಕೃಷ್ಣ ಬೈರೇಗೌಡ ರಾಜ್ಯಪಾಲರನ್ನು 'ನಾಲಾಯಕ್' ಎಂದು ಕರೆದಿದ್ದಾರೆ. ಗೆಹಲೋತ್ ಅವರನ್ನು ರಾಜಭವನದಿಂದ ಓಡಿಸುವುದಾಗಿ ಐವನ್ ಡಿಸೋಜ ಹೇಳಿದ್ದಾರೆ. ಕಾಂಗ್ರೆಸ್ ಮುಖಂಡ ರಕ್ಷಿತ್ ಶಿವರಾಂ ಪ್ರಧಾನಮಂತ್ರಿ ಬಗ್ಗೆ ಆಕ್ಷೇಪಾರ್ಹ ಹೇಳಿಕೆ ನೀಡಿದ್ದಾರೆ. ಸಚಿವ ಜಮೀರ್ ಹಿಂಸೆಗೆ ಪ್ರಚೋದನೆ ನೀಡುವ ರೀತಿಯಲ್ಲಿ ಮಾತನಾಡಿದ್ದಾರೆ. ಇವರೆಲ್ಲರ ವಿರುದ್ಧ ಪೊಲೀಸ್ ಇಲಾಖೆ ಸ್ವಯಂಪ್ರೇರಿತರಾಗಿ ಪ್ರಕರಣ ದಾಖಲಿಸಬೇಕು ಎಂಬುದು ಪ್ರತಿಭಟನೆಯ ಆಗ್ರಹ' ಎಂದರು.

ಪಕ್ಷದ ನಾಯಕರಾದ ಡಿ.ವಿ.ಸದಾನಂದಗೌಡ ತುಮಕೂರಿನಲ್ಲಿ, ಬಸವರಾಜ ಬೊಮ್ಮಾಯಿ ದಾವಣಗೆರೆ, ಗೋವಿಂದ ಕಾರಜೋಳ ಚಿತ್ರದುರ್ಗ, ಆರ್.ಅಶೋಕ ಮಂಡ್ಯ, ಡಾ.ಸಿ.ಎನ್.ಅಶ್ವತ್ಥನಾರಾಯಣ್ ಮತ್ತು ಛಲವಾದಿ ನಾರಾಯಣಸ್ವಾಮಿ ಬೆಂಗಳೂರು, ಬಿ.ಶ್ರೀರಾಮುಲು ಬಳ್ಳಾರಿ, ಸಿ.ಟಿ.ರವಿ ಚಿಕ್ಕಮಗಳೂರು, ನಳಿನ್ ಕುಮಾರ್ ಕಟೀಲ್ ಮಂಗಳೂರಿನಲ್ಲಿ ಪ್ರತಿಭಟನೆಯ ನೇತೃತ್ವ ವಹಿಸಲಿದ್ದಾರೆ.

ಸುದ್ದಿ 2 ನಿಮಿಷ

ಮೈತ್ರಿ ನಾಯಕರಿಂದ ಟಿಕೆಟ್ ಭರವಸೆ: ಸಿ.ಪಿ. ಯೋಗೇಶ್ವರ್

ಚನ್ನಪಟ್ಟಣ (ರಾಮನಗರ): 'ಚನ್ನಪಟ್ಟಣ ಉಪ ಚುನಾವಣೆಯಲ್ಲಿ ನಾನು ಸ್ಪರ್ಧಿಸುವುದು ಖಚಿತ. ಮಾತ್ರ ಪಕ್ಷ ಬಿಜೆಪಿಯಿಂದ ಸ್ಪರ್ಧಿಸುವುದು ನನ್ನ ಮೊದಲ ಆದ್ಯತೆಯಾಗಿದೆ. ಮುಂದಿನ ವಾರ ಟಿಕೆಟ್ ಗೊಂದಲಕ್ಕೆ ತೆರೆ ಬೀಳಲಿದೆ' ಎಂದು ಬಿಜೆಪಿ ಟಿಕೆಟ್ ಪ್ರಬಲ ಆಕಾಂಕ್ಷಿ, ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಹೇಳಿದ್ದಾರೆ.



ಪಟ್ಟಣದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ಎಚ್.ಡಿ. ಕುಮಾರಸ್ವಾಮಿ ಅವರನ್ನು ಭೇಟಿಯಾಗಿದ್ದು ಟಿಕೆಟ್ ಭರವಸೆ ನೀಡಿದ್ದಾರೆ ಎಂದರು.

'ಬಿಜೆಪಿ ಮತ್ತು ಜೆಡಿಎಸ್ ನಾಯಕರು ಜವಾಬ್ದಾರಿ ವಹಿಸಿಕೊಂಡು ಉಪ ಚುನಾವಣೆ ಮಾಡಬೇಕು. ಈ ಕುರಿತು ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರೊಂದಿಗೆ ಮಾತುಕತೆ ನಡೆಸಿದ್ದೇನೆ. ಎರಡೂ ಪಕ್ಷದ ನಾಯಕರ ಸಮನ್ವಯ ಸಭೆ ಆಗಬೇಕು. ಪಕ್ಷದ ವರಿಷ್ಠರ ಭೇಟಿಗಾಗಿ ಬುಧವಾರ ದೆಹಲಿಗೆ ಹೋಗಬೇಕಿತ್ತು. ಆದರೆ, ಕೆಲ ರಾಜಕೀಯ ವಿದ್ಯಮಾನಗಳಿಂದ ಪ್ರವಾಸ ಮುಂದೂಡಿರುವೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ವರ್ಗಾವಣೆಗೆ ಶಿಫಾರಸು ಪತ್ರ ಕೊಟ್ಟರೆ ತಪ್ಪೇನು: ರಾಯರಡ್ಡಿ

ಕೊಪ್ಪಳ: 'ಅಧಿಕಾರಿಗಳ ಕೋರಿಕೆ ಮೇರೆಗೆ ನನ್ನ ಕ್ಷೇತ್ರ ಮಾತ್ರವಲ್ಲದೇ ಬೇರೆ ಕ್ಷೇತ್ರಗಳ ಅಧಿಕಾರಿಗಳ ವರ್ಗಾವಣೆಗೂ ಶಿಫಾರಸು ಪತ್ರ ಕೊಟ್ಟಿದ್ದೇನೆ. ಇದರಲ್ಲಿ ತಪ್ಪೇನಿದೆ' ಎಂದು ಜಿಲ್ಲೆಯ ಯಲಬುರ್ಗಾ ಕ್ಷೇತ್ರದ ಶಾಸಕರೂ ಆಗಿರುವ ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಪ್ರಶ್ನಿಸಿದರು.

ಬುಧವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಯಾರಿಗೇ ಶಿಫಾರಸು ಪತ್ರ ಕೊಟ್ಟರೂ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಪತ್ರದಲ್ಲಿ ಸೂಚಿಸುತ್ತೇನೆ. ವರ್ಗಾವಣೆಗೆ ಶಿಫಾರಸು ಪತ್ರ ಕೊಡುವ ವಿಚಾರದಲ್ಲಿ ನನ್ನ ತಪ್ಪು ಮಾತ್ರವಲ್ಲದೇ ಸಾರ್ವಜನಿಕರದ್ದು ಹಾಗೂ ನೌಕರರ ತಪ್ಪಿನ ಪಾಲೂ ಇದೆ. ಇದೆಲ್ಲವೂ ಬದಲಾಗಲು ಮೊದಲು ಶಿಫಾರಸು ಪತ್ರ ಕೊಡುವವರು ಹಾಗೂ ತೆಗೆದುಕೊಳ್ಳುವವರು ಇಬ್ಬರೂ ಸರಿ ಹೋಗಬೇಕು. ಅನೇಕ ಮಾಧ್ಯಮದವರಿಗೂ ಶಿಫಾರಸು ಪತ್ರ ಕೊಟ್ಟಿದ್ದೇನೆ' ಎಂದರು.

'ನರಿಯ ಸ್ಥಿತಿಯಲ್ಲಿ ವಿರೋಧ ಪಕ್ಷಗಳು'

ಮೈಸೂರು: 'ವಿರೋಧ ಪಕ್ಷಗಳ ಪರಿಸ್ಥಿತಿಯು, ಆನೆ ನಡೆಯುವುದನ್ನೇ ನೋಡುತ್ತಾ ಕುಳಿತ ನರಿಯಂತಾಗಿದೆ' ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ವ್ಯಂಗ್ಯವಾಡಿದರು.

ವೀರನಹೊಸಹಳ್ಳಿಯಲ್ಲಿ ಬುಧವಾರ 'ಗಜಪಯಣ'ಕ್ಕೆ ಚಾಲನೆ ನೀಡಿ ಮಾತನಾಡಿ, 'ಆನೆ ನಡೆಯುವ ದಾರಿಯಲ್ಲಿ ಅದೇನೋ ಬೀಳುತ್ತದೆಂದು ನರಿ ಕಾಯುತ್ತಿರುತ್ತದೆ. ಆದರೆ, ಅದು ಬೀಳಲ್ಲ. ನರಿ ಅದನ್ನು ತಿನ್ನಲ್ಲ' ಎಂದರು.

'7 ಕೋಟಿ ಜನ ಮತ ಹಾಕಿ ಚುನಾಯಿಸಿದ ಸರ್ಕಾರ ಐದು ವರ್ಷ ಸುಭದ್ರವಾಗಿರುತ್ತದೆ. ಅಸ್ಥಿರಗೊಳಿಸಲು ಹೇಗೆ ಸಾಧ್ಯ? ಮುಡಾ ಹಗರಣ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತಪ್ಪೇನಿದೆ' ಎಂದು ಪ್ರಶ್ನಿಸಿದರು. 'ಮುಡಾ ಪ್ರಕರಣ ದಸರೆ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಈ ಬಾರಿ ವಿಜೃಂಭಣೆಯಿಂದ ಆಚರಿಸುತ್ತೇವೆ' ಎಂದರು.

ಸಾಯಿ ವೆಂಕಟೇಶ್ವರ ಮಿನರಲ್ಸ್‌ಗೆ 550 ಎಕರೆ ಮಂಜೂರು ಪ್ರಕರಣ

ನಾನು ಕಡತಕ್ಕೆ ಸಹಿ ಹಾಕಿಯೇ ಇಲ್ಲ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್‌ಗೆ 550 ಎಕರೆ ಮಂಜೂರು ಮಾಡುವಂತೆ ನಾನು ಯಾವ ಕಡತದ ಮೇಲೂ ಬರೆದಿಲ್ಲ. ಅದು ನನ್ನ ಸಹಿಯೇ ಅಲ್ಲ' ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ನಗರದಲ್ಲಿನ ಜೆಡಿಎಸ್ ಕಚೇರಿಯಲ್ಲಿ ಆಯೋಜಿಸಿದ್ದ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, 'ಆ ಕಡತ ನನ್ನ ಬಳಿಗೆ ಬಂದಿತ್ತೋ ಅಥವಾಬಂದಿರಲಿಲ್ಲವೋ ನನಗೆ ಗೊತ್ತಿಲ್ಲ' ಎಂದೂ ಹೇಳಿದರು.

'2023ರಲ್ಲಿ ಕಾಂಗ್ರೆಸ್ ಸರ್ಕಾರ ಬಂದ ಕೂಡಲೇ ವರ್ಗಾವಣೆ ದಂಧೆ ಆರಂಭಿಸಿತ್ತು. ಆ ಬಗ್ಗೆ ನಾನು ಮಾತನಾಡಿದೆ ಎಂದು ಈ ಪ್ರಕರಣಕ್ಕೆ ವಿಚಾರಣೆಗೆ ರಾಜ್ಯಪಾಲರ ಅನುಮತಿ ಕೋರಿ 2023ರ ನವೆಂಬರ್‌ನಲ್ಲಿ ಪತ್ರ ಬರೆಯಲಾಯಿತು. ಇದರಲ್ಲಿ ನಾನು ಯಾವುದೇ ತಪ್ಪು ಮಾಡಿಲ್ಲ. ಅಧಿಕಾರಿಗಳೇ ಹಾಗೆ ಬರೆದುಕೊಂಡು, ನನ್ನ ಸಹಿ ಹಾಕಿಕೊಂಡಿರಬಹುದು' ಎಂದರು.

ಕಡತಕ್ಕೆ ನೀವು ಸಹಿ ಹಾಕಿಯೇ ಇಲ್ಲವೇ? ನಿಮ್ಮ ಬಳಿಗೆ ಕಡತ ಬಂದಿರಲಿಲ್ಲವೇ ಎಂದು ಸುದ್ದಿಗಾರರು ಪ್ರಶ್ನಿಸಿದಾಗ, 'ಮುಖ್ಯಮಂತ್ರಿಯಾಗಿದ್ದಾಗ ಸಾವಿರಾರು ಕಡತಗಳು ಬರುತ್ತವೆ. ಅವನ್ನೆಲ್ಲಾ ನೆನಪಿನಲ್ಲಿ ಇರಿಸಿಕೊಳ್ಳಲು ಆಗುತ್ತದೆಯೇ' ಎಂದು ಪ್ರಶ್ನಿಸಿದರು.

'ಇದು 14 ವರ್ಷದಷ್ಟು ಹಳೆಯ ಪ್ರಕರಣ. ಯಾವೆಲ್ಲಾ ಅಧಿಕಾರಿಗಳಿದ್ದರು ಎಂದು ನೆನಪಿರಲು ಸಾಧ್ಯವೇ? 550 ಎಕರೆ ಮಂಜೂರು ಮಾಡುವಾಗ ಹೊಸ ಹೆಸರನ್ನು ಸೇರಿಸಲಾಗಿದೆ. ಅದನ್ನು ಸೇರಿಸಿದವರು ಯಾರು ಎಂಬುದನ್ನು ತನಿಖಾಧಿಕಾರಿಗಳು ಪತ್ತೆ ಮಾಡಬೇಕು. ಮಂಜೂರಾತಿ ನಡೆದ ಸಂದರ್ಭದಲ್ಲಿ ಗಣಿ ಇಲಾಖೆಯ ಅಧಿಕಾರಿಯ ಮಗನ ಖಾತೆಗೆ ₹20 ಲಕ್ಷ ಜಮೆಯಾಗಿತ್ತು. ಅದನ್ನು ನಾನೇ ಪತ್ತೆ ಮಾಡಿದ್ದೆ. ₹20 ಲಕ್ಷ ಹೇಗೆ ಬಂತು ಎಂಬುದನ್ನು ತನಿಖಾಧಿಕಾರಿಗಳು ಹೇಳಬೇಕು' ಎಂದರು.

'ತನಿಖೆಗೆ ಸುಪ್ರೀಂಕೋರ್ಟ್ ಆದೇಶಿಸಿತ್ತು'



'ಸಾಯಿ ವೆಂಕಟೇಶ್ವರ ಮಿನರಲ್ಸ್ ಪ್ರಕರಣ ದಲ್ಲಿ ಮುಖ್ಯಮಂತ್ರಿ ಕಚೇರಿಯಲ್ಲಿ ಅಕ್ರಮವಾಗಿದೆ ಎಂದು ಯು.ವಿ.ಸಿಂಗ್ ವರದಿಯಲ್ಲಿ ಹೇಳಿದೆ. ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತಡೆ ನೀಡಿತ್ತು. ಆದರೆ ನನ್ನ ವಿರುದ್ಧದ ದೂರಿನಲ್ಲಿ ತನಿಖೆ ನಡೆಸುವಂತೆ ಹೇಳಿತ್ತು' ಎಂದು ಕುಮಾರಸ್ವಾಮಿ ಮಾಹಿತಿ ನೀಡಿದರು.

'ನನ್ನ ವಿರುದ್ಧದ ಪ್ರಕರಣದಲ್ಲಿ ತನಿಖೆ ನಡೆಸಿ, ವರದಿಯನ್ನು ನಮಗೇ ಸಲ್ಲಿಸಬೇಕು ಎಂದು ಸುಪ್ರೀಂ ಕೋರ್ಟ್ ಲೋಕಾಯುಕ್ತ ಎಸ್‌ಐಟಿಗೆ 2017ರಲ್ಲೇ ಸೂಚಿಸಿತ್ತು. ಅದಕ್ಕೆ ಮೂರು ತಿಂಗಳ ಗಡುವು ನೀಡಿತ್ತು. ಇಷ್ಟು ವರ್ಷವಾದರೂ ತನಿಖೆ ಏಕೆ ಪೂರ್ಣಗೊಳಿಸಿಲ್ಲ. ಸುಪ್ರೀಂ ಕೋರ್ಟ್‌ಗೆ ವರದಿ ನೀಡದೇ, ರಾಜ್ಯಪಾಲರ ಅನುಮತಿಗೆ ಅರ್ಜಿ ಹಾಕಿದ್ದು ಏಕೆ' ಎಂದು ಪ್ರಶ್ನಿಸಿದರು.

ಎಚ್‌ಡಿಕೆ ದೂರು ಕೊಟ್ಟರೆ ತನಿಖೆ

ತುಮಕೂರು: ಜಂತ್‌ಕಲ್ ಗಣಿ ಗುತ್ತಿಗೆ ಆದೇಶ ಪತ್ರಕ್ಕೆ ತಮ್ಮ ಸಹಿ ನಕಲು ಮಾಡಲಾಗಿದೆ ಎಂದು ಹೇಳಿರುವ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಈ ಬಗ್ಗೆ ಪೊಲೀಸರಿಗೆ ದೂರು ಕೊಟ್ಟರೆ ತನಿಖೆ ಮಾಡಿಸಲಾಗುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದ್ದಾರೆ.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕುಮಾರಸ್ವಾಮಿ ಅವರು ಪೊಲೀಸರಿಗೆ ದೂರು ಕೊಟ್ಟರೆ ತನಿಖೆ ಮಾಡುತ್ತಾರೆ. ನಂತರ ಸತ್ಯಾಂಶ ಹೊರ ಬರಲಿದೆ ಎಂದರು.

'ತಾರತಮ್ಯ' ಖಂಡಿಸಿ ನಿರ್ಣಯ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಕಾರಣಿಗಳ ವಿರುದ್ಧದ ಪ್ರಕರಣಗಳಲ್ಲಿ ವಿಚಾರಣೆಗೆ ಅನುಮತಿ ನೀಡುವ ವಿಚಾರದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ತಾರತಮ್ಯ ಮಾಡುತ್ತಿದ್ದಾರೆಂಬ ವಿಷಯ ಗುರುವಾರದ ಸಚಿವ ಸಂಪುಟ ಸಭೆಯಲ್ಲಿ ಚರ್ಚೆಗೆ ಬರುವ ಸಾಧ್ಯತೆಯಿದೆ.

ಮುಡಾ ಪ್ರಕರಣದಲ್ಲಿ ಯಾವುದೇ ತನಿಖಾ ವರದಿ ಇಲ್ಲದಿದ್ದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆಗೆ ರಾಜ್ಯಪಾಲರು ಅನುಮತಿ ನೀಡಿದ್ದಾರೆ. ಆದರೆ, ಎಚ್. ಡಿ. ಕುಮಾರಸ್ವಾಮಿ, ಮುರುಗೇಶ ನಿರಾಣಿ ವಿರುದ್ಧದ ಪ್ರಕರಣಗಳು ಸೇರಿದಂತೆ ಆರು ಪ್ರಕರಣಗಳಲ್ಲಿ ವಿಚಾರಣೆಗೆ ಅನುಮತಿ ನೀಡಿಲ್ಲ. ರಾಜ್ಯಪಾಲರ ಈ ನಡೆ ತಾರತಮ್ಯದಿಂದ ಕೂಡಿದ್ದು, ಈ ವಿಷಯದ ಕುರಿತು ಚರ್ಚಿಸಿ ನಿರ್ಣಯ ತೆಗೆದುಕೊಳ್ಳಬೇಕು ಎಂದು ಕೆಲವು ಸಚಿವರು ಮುಖ್ಯಮಂತ್ರಿ ಅವರನ್ನು ಒತ್ತಾಯಿಸಿದ್ದಾರೆ ಎಂದು ಗೊತ್ತಾಗಿದೆ.

ರಾಜ್ಯಪಾಲರು ಅನುಮತಿ ನೀಡಲು ಬಾಕಿ ಇರುವ ಪ್ರಕರಣಗಳ ಮಾಹಿತಿ ತರಿಸಿಕೊಂಡು ಚರ್ಚಿಸಲು ತೀರ್ಮಾನಿಸಲಾಗಿದೆ. ಮಾಜಿ ಸಚಿವೆ ಶಶಿಕಲಾ ಜೊಲ್ಲೆ ಮೇಲೆ ಪ್ರಕರಣ ದಾಖಲಿಸಲು ಲೋಕಾಯುಕ್ತ ಕೇಳಿದ್ದ ಅನುಮತಿಯನ್ನು ರಾಜ್ಯಪಾಲರು ಈಗಾಗಲೇ ತಿರಸ್ಕರಿಸಿದ್ದಾರೆ. ಉಳಿದ ಕೆಲವು ಪ್ರಕರಣಗಳಲ್ಲಿ ರಾಜ್ಯಪಾಲರು ಕೇಳಿದ್ದ ಸ್ಪಷ್ಟೀಕರಣವನ್ನು ನೀಡಲಾಗಿದೆ. ಆದರೂ ಅನುಮತಿ ನೀಡದೆ ರಾಜ್ಯಪಾಲರು ತಮ್ಮ ಬಳಿ ಉಳಿಸಿಕೊಂಡಿದ್ದಾರೆ. ಈ ಬಗ್ಗೆ ಸಭೆಯಲ್ಲಿ ಚರ್ಚಿಸಲು ಮತ್ತು ಮುಂದೇನು ಮಾಡಬೇಕೆಂದು ತೀರ್ಮಾನಿಸಲು ಚಿಂತನೆ ನಡೆದಿದೆ ಎಂದೂ ಮೂಲಗಳು ತಿಳಿಸಿವೆ. ಅಸ್ತಿತ್ವದಲ್ಲಿಯೇ ಇಲ್ಲದ ಸಂಸ್ಥೆಗೆ 550 ಎಕರೆ ಜಮೀನನ್ನು ಕುಮಾರಸ್ವಾಮಿ ಮಂಜೂರು ಮಾಡಿದ್ದಾರೆ. ಅದರಲ್ಲಿ ಅಕ್ರಮಗಳಾಗಿವೆ. ತನಿಖೆ ನಡೆದಿದೆ. ದೋಷಾರೋಪ ಪಟ್ಟಿ ಸಲ್ಲಿಸಲು ಅನುಮತಿ ನೀಡುವಂತೆ 2023ರಲ್ಲಿಯೇ ಲೋಕಾಯುಕ್ತ ಮನವಿ ಸಲ್ಲಿಸಿತ್ತು. ಮುರುಗೇಶ್ ನಿರಾಣಿ, ಜನಾರ್ದನ ರೆಡ್ಡಿ ಅವರ ಪ್ರಕರಣದಲ್ಲೂ ಪ್ರಕರಣ ದಾಖಲಿಸಲು ಲೋಕಾಯುಕ್ತ ಕೋರಿಕೆ ಸಲ್ಲಿಸಿದೆ. ಅದ್ಯಾವುದಕ್ಕೂ ಸಹಮತಿಸದ ರಾಜ್ಯಪಾಲರು ಏಕಾಏಕಿ ಮುಖ್ಯಮಂತ್ರಿ ಪ್ರಕರಣದಲ್ಲಿ ನಡೆದುಕೊಂಡ ರೀತಿ ಪ್ರಶ್ನಾರ್ಹ. ಈ ಪ್ರಶ್ನೆಗೆ ಉತ್ತರಿಸುವಂತೆ ರಾಜ್ಯಪಾಲರಿಗೆ ಪತ್ರ ಬರೆಯುವ ಬಗ್ಗೆಯೂ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳುವ ಸಾಧ್ಯತೆ ಇದೆ ಎಂದೂ ಮೂಲಗಳು ತಿಳಿಸಿವೆ.



ಚೌತಿ ತಯಾರಿ

ಮಂಗಳೂರಿನ ಮಣ್ಣಗುಡ್ಡದಲ್ಲಿರುವ ಶ್ರೀಗಣೇಶ ನಿಲಯದಲ್ಲಿ ಸತತ 93ನೇ ವರ್ಷವೂ ಗಣೇಶ ಹಬ್ಬಕ್ಕಾಗಿ ನೈಸರ್ಗಿಕ ಗಣೇಶ ಮೂರ್ತಿಗಳು ಸಿದ್ಧವಾಗುತ್ತಿವೆ
– ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್

ಸಿದ್ದರಾಮಯ್ಯ, ಡಿಕೆಶಿಗೆ ಹೈಕಮಾಂಡ್ ಬುಲಾವ್

ನವದೆಹಲಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ಅನುಮತಿ ನೀಡಿದ ಬಳಿಕ ಎದುರಾಗಿರುವ ಪರಿಸ್ಥಿತಿ ಕುರಿತು ಚರ್ಚಿಸಲು ಕಾಂಗ್ರೆಸ್ ಹೈಕಮಾಂಡ್, ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಅವರಿಗೆ ಶುಕ್ರವಾರ ದೆಹಲಿಗೆ ಬರುವಂತೆ ಸೂಚಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ದೆಹಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ ನಂತರದ ಪರಿಸ್ಥಿತಿ ಮತ್ತು ಆ ಆರೋಪಗಳನ್ನು ಎದುರಿಸಲು ಪಕ್ಷದ ಯೋಜನೆಗಳ ಕುರಿತು ನಾಯಕರು ಹೈಕಮಾಂಡ್‌ಗೆ ಮಾಹಿತಿ ನೀಡಲಿದ್ದಾರೆ ಎಂದು ಮೂಲಗಳು ಹೇಳಿವೆ.

ಆರ್‌ಎಫ್‌ಒಗೆ ಮಾತ್ರ ಎಫ್‌ಐಆರ್ ಅಧಿಕಾರ

ಒಂದನೇ ಪುಟದಿಂದ..

ಅಧಿಕಾರ ಹಿಂಪಡೆದದ್ದು ಸರಿಯಲ್ಲ: ಯಾವುದೇ ಅರಣ್ಯದಲ್ಲಿ ಅರಣ್ಯ ಅಪರಾಧಗಳು ನಡೆದಾಗ ತಕ್ಷಣವೇ ಅಲ್ಲಿಗೆ ಧಾವಿಸಿ ಪರಿಶೀಲಿಸಲು ಸಾಧ್ಯವಾಗುವುದು ಆರ್‌ಎಫ್‌ಒಗಿಂತ ಕೆಳ ಹಂತದ ಅಧಿಕಾರಿಗಳಿಗೆ ಮಾತ್ರ. ಹೀಗಾಗಿ ಕೆಳಹಂತದ ಅಧಿಕಾರಿಗಳ ಬಗ್ಗೆ ಅರಣ್ಯ ಅಪರಾಧ ಮಾಡುವವರಲ್ಲಿ ಒಂದು ರೀತಿಯ ಭಯ ಇತ್ತು. ಇನ್ನು ಮುಂದೆ ಆ ಭಯ ಇರುವುದಿಲ್ಲ. ಕರ್ನಾಟಕ ಅರಣ್ಯ ಸಂಹಿತೆಯಡಿ ಇವರಿಗೆ ಎಫ್‌ಐಆರ್ ದಾಖಲಿಸುವ ಅಧಿಕಾರ ನೀಡಲಾಗಿತ್ತು ಎಂದು ಅರಣ್ಯ ಇಲಾಖೆ ಮೂಲಗಳು ತಿಳಿಸಿವೆ.

ಅರಣ್ಯ ಅಪರಾಧ ನಡೆದಾಗ ಆರ್‌ಎಫ್‌ಒ ಸ್ಥಳಕ್ಕೆ ಬರುವವರೆಗೆ ಕಾಯಬೇಕಾಗುತ್ತದೆ. ಒಂದು ವೇಳೆ ವಲಯ ಅರಣ್ಯ ಅಧಿಕಾರಿ ತನ್ನ ವಲಯದಿಂದ ಹೊರಗೆ ಹೋದಾಗ, ರಜೆಯಲ್ಲಿ ಇದ್ದಾಗ ಆ ಕಾರ್ಯವನ್ನು ಯಾರು ನಿರ್ವಹಿಸಬೇಕು ಎಂಬ ಸ್ಪಷ್ಟತೆ ಇಲ್ಲ. ಬೇಟೆ, ಅರಣ್ಯ ಒತ್ತುವರಿ ಮತ್ತು ಮರ ಕಳ್ಳತನ ಅರಣ್ಯದ ಯಾವುದೋ ಮೂಲೆಯಲ್ಲಿ ನಡೆಯುತ್ತದೆ. ಆರ್‌ಎಫ್‌ಒ ಅಲ್ಲಿಗೆ ತಲುಪಲು ಬಹಳ ಸಮಯ ಹಿಡಿಯುತ್ತದೆ. ಅಷ್ಟರಲ್ಲಿ ಅಪರಾಧಿ ತಪ್ಪಿಸಿಕೊಂಡು ಹೋಗುವ ಸಾಧ್ಯತೆಯೂ ಇರುತ್ತದೆ ಎಂದು ಮೂಲಗಳು ಹೇಳಿವೆ.

ತಮ್ಮ ಅಧಿಕಾರ ಕಸಿದುಕೊಂಡ ವಿಚಾರವಾಗಿ ಒಂದಷ್ಟು ಕೆಳಹಂತದ ಅಧಿಕಾರಿಗಳು ಸಮಾಧಾನದ ನಿಟ್ಟುಸಿರು ಬಿಟ್ಟಿದ್ದಾರೆ. ಇದಕ್ಕೆ ಮುಖ್ಯ ಕಾರಣ ಅವರ ಮೇಲಿರುತ್ತಿದ್ದ ವಿವಿಧ ರೀತಿ ಒತ್ತಡಗಳು ಕಡಿಮೆ ಆಗಲಿದೆ ಎನ್ನುವುದು. ಆದರೆ, ಇವರಿಗೆ ಇನ್ನು ಮುಂದೆ ಬೀಟ್ ಹೋಗುವ ಕೆಲಸ ಬಿಟ್ಟರೆ ಬೇರೇನೂ ಕೆಲಸ ಇರುವುದಿಲ್ಲ ಎಂದು ಅಧಿಕಾರಿಯೊಬ್ಬರು ವಿವರಿಸಿದರು.

ಅರಣ್ಯ ಇಲಾಖೆಯಲ್ಲಿ ಆಡಳಿತದ ಉದ್ದೇಶಕ್ಕಾಗಿ ಕರ್ನಾಟಕ ಅರಣ್ಯ ಸಂಹಿತೆ ಮತ್ತು ಅರಣ್ಯ ಕೈಪಿಡಿಯಲ್ಲಿನ ಮಾರ್ಗಸೂಚಿಗಳನ್ನು ಪಾಲಿಸಲಾಗುತ್ತದೆ. ಕೆಳಹಂತದ ಅಧಿಕಾರಿಗಳ ಜವಾಬ್ದಾರಿಗಳನ್ನು ಇದರಲ್ಲಿ ವಿವರಿಸಲಾಗಿದೆ. ಆದರೆ, ಅಧಿಕಾರದ ವಿಚಾರ ಬಂದಾಗ ಸಂಹಿತೆ ಮತ್ತು ಕೈಪಿಡಿಗಳಿಗೆ ಕಾನೂನಿನ ಮಾನ್ಯತೆ ಇಲ್ಲ ಎಂಬ ಸಮಜಾಯಿಷಿ ನೀಡಲಾಗುತ್ತದೆ. ಕಾನೂನಿನಲ್ಲಿ ತಿದ್ದುಪಡಿ ತಂದು ಇವೆರಡಕ್ಕೂ ಕಾನೂನು ಮಾನ್ಯತೆ ನೀಡಬೇಕು ಎಂದು ಹೆಸರು ಹೇಳಲು ಬಯಸದ ಉಪವಲಯ ಅರಣ್ಯಾಧಿಕಾರಿಯೊಬ್ಬರು ಹೇಳಿದರು.

ಅಂಕಿ ಅಂಶಗಳು

667	ವಲಯ ಅರಣ್ಯಾಧಿಕಾರಿಗಳು
2417	ಉಪವಲಯ ಅರಣ್ಯಾಧಿಕಾರಿಗಳು
2873	ಗಾರ್ಡ್‌ಗಳು
40,678 ಚ.ಕಿ.ಮೀ	ಅರಣ್ಯ ವ್ಯಾಪ್ತಿಯ ಪ್ರದೇಶ
5	ರಾಷ್ಟ್ರೀಯ ಉದ್ಯಾನ
36	ವನ್ಯಜೀವಿ ಅಭಯಾರಣ್ಯ
18	ಸಂರಕ್ಷಿತ ಮೀಸಲು
1	ಸಮುದಾಯ ಮೀಸಲು ಸಂರಕ್ಷಿತ ಪ್ರದೇಶ

ಕೆಸೆಟ್: ಅರ್ಜಿ ಸಲ್ಲಿಸಲು 28ರವರೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಗೆ (ಕೆಸೆಟ್- 2024) ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆ ದಿನಾಂಕವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಆಗಸ್ಟ್ 28ರವರೆಗೆ ವಿಸ್ತರಿಸಿದೆ.

'ಅರ್ಜಿ ಸಲ್ಲಿಸಲು ಆಗಸ್ಟ್ 22 ಕೊನೆ ದಿನವಾಗಿತ್ತು. ಅಭ್ಯರ್ಥಿಗಳ ಕೋರಿಕೆ ಮೇರೆಗೆ ದಿನಾಂಕ ವಿಸ್ತರಿಸಲಾಗಿದೆ. ಶುಲ್ಕ ಪಾವತಿಸಲು ಆ. 30ರವರೆಗೆ ಅವಕಾಶ ನೀಡಲಾಗಿದೆ' ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

ಸಿ.ಎಂ ಪತ್ನಿ ಪತ್ರಕ್ಕೆ 'ವೈಟ್ನರ್' ಜಗಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿದ್ದರಾಮಯ್ಯ ಪತ್ನಿ ಮುಡಾಕ್ಕೆ ಬರೆದಿದ್ದ ಪತ್ರಕ್ಕೆ ವೈಟ್ನರ್ ಹಚ್ಚಿ ತಿರುಚಲಾಗಿದೆ. ಹೆಲಿಕಾಪ್ಟರ್‌ನಿಂದ ಮೈಸೂರಿಗೆ ಹೋಗಿದ್ದವರು ಆ ಕೆಲಸ ಮಾಡಿದ್ದಾರೆ. ಸಿದ್ದರಾಮಯ್ಯಗೆ ಗೊತ್ತಿಲ್ಲದೇ ಇವೆಲ್ಲಾ ನಡೆದಿವೆಯೇ' ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದರು.

'ಸಿದ್ದರಾಮಯ್ಯ ಸಿ.ಎಂ ಆಗಿದ್ದಾಗ ಹಲವು ಅಕ್ರಮಗಳು ನಡೆದಿವೆ. ಬೇಲೆಕೇರಿಯಲ್ಲಿ ಅದಿರು ಕದ್ದವರಿಗೆ ಗಣಿಗಳನ್ನು ಮಂಜೂರು ಮಾಡಲಾಗಿದೆ. ಅವುಗಳ ದಾಖಲೆಗಳನ್ನು ಸೂಕ್ತ ಸಮಯದಲ್ಲಿ ಬಿಡುಗಡೆ ಮಾಡುತ್ತೇನೆ' ಎಂದರು. 'ಸಿದ್ದರಾಮಯ್ಯ ವಿರುದ್ಧ ಲೋಕಾಯುಕ್ತದಲ್ಲಿ 61 ಪ್ರಕರಣಗಳಿದ್ದವು. ಅವನ್ನು ಮುಚ್ಚಿಹಾಕಲೆಂದೇ ಲೋಕಾಯುಕ್ತದ ನರ ಕಿತ್ತುಹಾಕಿದರು. ಎಸಿಬಿ ರಚಿಸಿದರು' ಎಂದು ಆರೋಪಿಸಿದರು.

ಅರ್ಜಿ ಬರೆಯುವಾಗ ತಪ್ಪಾಗಿದ್ದಕ್ಕೆ ತಿದ್ದಿರಬಹುದು: 'ಸಿದ್ದರಾಮಯ್ಯ ಅವರ ಪತ್ನಿಗೆ ಸಂಬಂಧಿಸಿದ ಮುಡಾ ಕಡತಗಳನ್ನು ವೈಟ್ನರ್ ಬಳಸಿ ತಿದ್ದಿಲ್ಲ. ಸರ್ಕಾರಿ ದಾಖಲೆಗಳನ್ನು ತಿದ್ದುವ ದೈನೇಸಿ ಸ್ಥಿತಿ ನನಗೆ ಬಂದಿಲ್ಲ' ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹೇಳಿದರು.

'ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರು ಅರ್ಜಿ ಬರೆಯುವಾಗ ಏನೋ ತಪ್ಪು ಬರೆದಿರಬಹುದು. ಆಗ ವೈಟ್ನರ್‌ನಿಂದ ಸರಿಪಡಿಸಿದ್ದಾರೆ. ಅದರಲ್ಲಿ ತಪ್ಪೇನು? ಬರೆಯುವಾಗ ತಪ್ಪೇ ಆಗುವುದಿಲ್ಲವಾ? ಜಮೀನಿಗೆ ಪರಿಹಾರ ನೀಡಿಲ್ಲ. ಅಷ್ಟೇ ವಿಸ್ತೀರ್ಣದ ಜಮೀನು ಕೊಡಿ ಎಂದು ಕೇಳಿದ್ದಾರೆ. ಅದರಲ್ಲಿ ವಿಸ್ತೀರ್ಣ, ವರ್ಷ ನಮೂದಿಸುವಾಗ ತಪ್ಪು ಆಗಿರಬಹುದು. ಅದನ್ನು ಸರಿಪಡಿಸಿದ್ದಾರೆ' ಎಂದರು. 'ನನ್ನ ವಿರುದ್ಧ ಕುಮಾರಸ್ವಾಮಿ ಬಳಿ ಏನಾದರೂ ದಾಖಲೆಗಳು ಇದ್ದರೆ ಅದನ್ನು ಅವರು ನ್ಯಾಯಾಲಯಕ್ಕೆ ಒಪ್ಪಿಸಲಿ' ಎಂದು ಸುರೇಶ್ ಸವಾಲೆಸೆದರು.

ಸಚಿವ ರಾಜೀನಾಮೆ ನೀಡಲಿ: ಬಿಜೆಪಿ

ವೈಟ್ನರ್ ಬಳಸಿ ದಾಖಲೆ ಪತ್ರಗಳನ್ನು ತಿದ್ದಿರುವ ಆರೋಪ ಇರುವುದರಿಂದ ಬೈರತಿ ಸುರೇಶ್ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ತನಿಖೆ ಎದುರಿಸಬೇಕು. ಅವರ ಮೇಲೆ ಮೊಕದ್ದಮೆ ದಾಖಲಿಸಬೇಕು ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಒತ್ತಾಯಿಸಿದರು.

ಸುರೇಶ್ ಸಚಿವರಾಗಿ ಮುಂದುವರಿದರೆ ಅವರನ್ನು ತನಿಖಾಧಿಕಾರಿ ಪ್ರಶ್ನೆ ಮಾಡಲು ಸಾಧ್ಯವೇ? ವೈಟ್ನರ್ ಹಚ್ಚುವಾಗ ಹೆಲಿಕಾಪ್ಟರ್‌ನಲ್ಲಿ ಕುಳಿತಿದ್ದಿರೇ? ಕಚೇರಿಗೆ ಬಂದು ಹಚ್ಚಿದಿರೇ ಎಂಬ ರೀತಿಯ ಪ್ರಶ್ನೆಗಳನ್ನು ಕೇಳಲು ಸಾಧ್ಯವೇ ಎಂದರು. ಮುಡಾ ಕಡತಗಳನ್ನು ಹೆಲಿಕಾಪ್ಟರ್ ಮೂಲಕ ಬೆಂಗಳೂರಿಗೆ ತಂದಿದ್ದಾರೆ. ಇದಕ್ಕೆ ಸಾರ್ವಜನಿಕರ ತೆರಿಗೆ ಹಣ ಬಳಕೆ ಆಗಿದೆ. ಸಾರ್ವಜನಿಕರ ಹಣದಲ್ಲೇ ವೈಟ್ನರ್ ಖರೀದಿಸಿ ದಾಖಲೆ ತಿದ್ದಿದ್ದಾರೆ. ಇಂತಹ ವ್ಯಕ್ತಿ ಸಾಂವಿಧಾನಿಕ ಹುದ್ದೆಯಲ್ಲಿ ಮುಂದುವರಿಯಲು ಅರ್ಹರಲ್ಲ ಎಂದು ಹೇಳಿದರು.

ತಿದ್ದುಪಡಿ ಮಾಡಿಲ್ಲ

'ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ವಿರುದ್ಧ ಯಾವುದೇ ವಿಚಾರಣೆ ನಡೆದಿಲ್ಲ. ವರದಿ, ಪತ್ರ ಅಥವಾ ಆದೇಶ ಇಲ್ಲ. ಆ ಅವಧಿಯಲ್ಲಿ ಪ್ರಭಾವ ಬೀರಲು ನಾನು ಮುಖ್ಯಮಂತ್ರಿ ಅಥವಾ ಸಚಿವನಾಗಿರಲಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. 'ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವ ದಾಖಲೆಯನ್ನೂ ತಿದ್ದಿಲ್ಲ. ನಿವೇಶನ ಹಂಚಿಕೆಯಾಗಿರುವುದು 2014ರ ಮನವಿ ಮೇರೆಗೆ ಅಲ್ಲ, 2021ರಲ್ಲಿ ಕೊಟ್ಟ ಮನವಿ ಮೇರೆಗೆ. ಆಗ ಮುಡಾ ಬಿಜೆಪಿ ಕೈಯಲ್ಲಿ ಇತ್ತು. ಅಧ್ಯಕ್ಷರಾಗಿದ್ದವರು ಬಿಜೆಪಿಯವರು. ಮುಖ್ಯಮಂತ್ರಿ ಆಗಿದ್ದವರು ಬಸವರಾಜ ಬೊಮ್ಮಾಯಿ. ಆಗ ಆದ ನಿವೇಶನ ಹಂಚಿಕೆಗೆ ಯಾರು ಜವಾಬ್ದಾರರು. ಇದರ ತನಿಖೆಗೆ ಆಯೋಗ ರಚಿಸಲಾಗಿದ್ದು, ತನಿಖಾ ವರದಿ ಬಂದ ಬಳಿಕ ಸೂಕ್ತ ಕ್ರಮ ಕೈಗೊಳ್ಳಲಾಗುವುದು' ಎಂದರು.

ಸುನಂದಾ ವರ್ಣೇಕರ್ ದ್ವಿತೀಯ, ಕಾವ್ಯ ಎಸ್. ತೃತೀಯ: ಮೂವರಿಗೆ ಸಮಾಧಾನಕರ ಬಹುಮಾನ

'ಕರುನಾಡ ಸವಿಯೂಟ': ಅತ್ತೆ–ಸೊಸೆ ಪ್ರಥಮ

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್' ಮತ್ತು 'ಫ್ರೀಡಂ ಕುಕ್ಕಿಂಗ್ ಆಯಿಲ್' ಸಹಯೋಗದಲ್ಲಿ ಬುಧವಾರ ನಗರದಲ್ಲಿ ನಡೆದ 'ಕರುನಾಡ ಸವಿಯೂಟ' ಅಡುಗೆ ಸ್ಪರ್ಧೆಯಲ್ಲಿ ದಾವಣಗೆರೆಯ ಅತ್ತೆ–ಸೊಸೆಯರಾದ ಅಶ್ವಿನಿ ಕಲಬುರ್ಗಿ ಹಾಗೂ ಅಂಜಲಿ ಕಲಬುರ್ಗಿ ಪ್ರಥಮ ಸ್ಥಾನ ಪಡೆದು, ₹10,000 ಬಹುಮಾನ ಗೆದ್ದರು.

ದಾವಣಗೆರೆಯ ಸುನಂದಾ ವರ್ಣೇಕರ್ ದ್ವಿತೀಯ ಸ್ಥಾನ ಪಡೆದಿದ್ದು, ₹7,000 ಹಾಗೂ ಹಾವೇರಿ ಜಿಲ್ಲೆಯ ಅಕ್ಕಿ ಆಲೂರಿನ ಕಾವ್ಯಾ ಎಸ್.ಬೆಲ್ಲದ್ ತೃತೀಯ ಸ್ಥಾನ ಪಡೆದು ₹5,000 ಬಹುಮಾನ ಪಡೆದರು. ಫಿರ್ದೂಸ್ ಖಾನಂ, ಲೀಲಾ ಕೆ.ಬಸವರಾಜ ಹಾಗೂ 9ನೇ ತರಗತಿಯ ಗಂಗೂ ಬಸಪ್ಪ ಸಮಾಧಾನಕರ ಬಹುಮಾನಕ್ಕೆ ಪಾತ್ರರಾದರು.

ದಾವಣಗೆರೆ, ಶಿವಮೊಗ್ಗ, ಹಾವೇರಿ ಹಾಗೂ ಚಿತ್ರದುರ್ಗ ಜಿಲ್ಲೆಯವರು ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು. ಮನೆಯಲ್ಲೇ ತಯಾರಿಸಿ ತಂದಿದ್ದ ಅಡುಗೆಯನ್ನು ಸ್ಪರ್ಧೆಗೆ ಇರಿಸಿದ್ದರು. ಸಸ್ಯಾಹಾರ ಹಾಗೂ ಮಾಂಸಾಹಾರದ ತರಹೇವಾರಿ ಖಾದ್ಯಗಳ ಪರಿಮಳ ಎಲ್ಲರನ್ನೂ ಸೆಳೆಯಿತು. 'ಒಗ್ಗರಣೆ ಡಬ್ಬಿ' ಖ್ಯಾತಿಯ ಮುರಳಿ ಮತ್ತು ಸುಚಿತ್ರಾ ಅಡುಗೆ ರುಚಿ ನೋಡಿ ತೀರ್ಪು ಪ್ರಕಟಿಸಿದರು.

'ಇಂಡೇನ್' ಗ್ಯಾಸ್, 'ಶ್ರೀಕೃಷ್ಣ' ಶುದ್ಧ ಹಳ್ಳಿತುಪ್ಪ, ಫಿಲಿಪ್ಸ್ ಜ್ಯೂಸರ್ ಮಿಕ್ಸರ್ ಗ್ರೈಂಡರ್, ಪ್ರೀತಿ ಸಂಸ್ಥೆ, ಎಸ್‌ಎಸ್‌ಪಿ ಹಿಂಗ್, ಇಂಡಿಯಾ ಗೇಟ್ ಬಾಸುಮತಿ ರೈಸ್, ಕರ್ನಾಟಕ ರಾಜ್ಯ ಕೃಷಿ ಇಲಾಖೆ, ವೆನ್‌ಕಾಬ್ ಚಿಕನ್ ಮತ್ತು ಸುಜಯ್ ನೀರಾವರಿ ಸಂಸ್ಥೆಗಳ ಸಹಯೋಗ ಇತ್ತು.



ದಾವಣಗೆರೆಯಲ್ಲಿ ಬುಧವಾರ ನಡೆದ 'ಕರುನಾಡ ಸವಿಯೂಟ' ಆವೃತ್ತಿ– 3 ಅಡುಗೆ ಸ್ಪರ್ಧೆಯಲ್ಲಿ ವಿಜೇತರಾದ, ಕಾವ್ಯಾ ಎಸ್. ಬೆಲ್ಲದ್ (ತೃತೀಯ), ಸುನಂದ ವರ್ಣೇಕರ್ (ದ್ವಿತಿಯ) ಹಾಗೂ ಅಶ್ವಿನಿ ಕಲಬುರ್ಗಿ, ಅಂಜಲಿ ಕಲಬುರ್ಗಿ (ಪ್ರಥಮ) ಅವರಿಗೆ 'ಒಗ್ಗರಣೆ ಡಬ್ಬಿ' ಖ್ಯಾತಿಯ ಮುರುಳಿ ಮತ್ತು ಸುಚಿತ್ರ ಅವರು ಬಹುಮಾನ ವಿತರಿಸಿದರು –ಪ್ರಜಾವಾಣಿ ಚಿತ್ರ

ಮಂಗಳೂರಿನಲ್ಲಿ ಸ್ಪರ್ಧೆ ಇಂದು

ಮಂಗಳೂರಿನ ಮಲ್ಲಿಕಟ್ಟೆಯ ಲಯನ್ಸ್ ಸೇವಾ ಭವನದಲ್ಲಿ ಆ.22ರಂದು ಬೆಳಿಗ್ಗೆ 9ರಿಂದ 'ಕರುನಾಡ ಸವಿಯೂಟ' ಅಡುಗೆ ಸ್ಪರ್ಧೆ ನಡೆಯಲಿದೆ.

ಒಳಮೀಸಲಾತಿ– 'ಸುಪ್ರೀಂ' ತೀರ್ಪು ವಿರೋಧಿಸಿ ಪ್ರತಿಭಟನೆ ● ಬಿಹಾರದ ಹಲವೆಡೆ ಲಾಠಿ ಪ್ರಹಾರ ● ರಸ್ತೆ, ರೈಲು ತಡೆ

ಭಾರತ ಬಂದ್: ಬಹುತೇಕ ಶಾಂತ

ಪ್ರಜಾವಾಣಿ ವಾರ್ತೆ

ನವದೆಹಲಿ: ಪರಿಶಿಷ್ಟರಲ್ಲಿ ಒಳ ಮೀಸಲಾತಿ ನೀಡುವ ಕುರಿತು ಸುಪ್ರೀಂ ಕೋರ್ಟ್‌ನ ತೀರ್ಪು ವಿರೋಧಿಸಿ ವಿವಿಧ ಸಂಘಟನೆಗಳು ಬುಧವಾರ ಕರೆ ನೀಡಿದ್ದ 'ಭಾರತ ಬಂದ್'ಗೆ, ಪರಿಶಿಷ್ಟರು ಹಾಗೂ ಬುಡಕಟ್ಟು ಜನರು ಹೆಚ್ಚಿರುವ ಪ್ರದೇಶಗಳಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಬಿಹಾರದಲ್ಲಿ ಪೊಲೀಸರು ಪ್ರತಿಭಟನಕಾರರ ಮೇಲೆ ಲಾಠಿ ಪ್ರಹಾರ ನಡೆಸಿದ್ದರೆ, ಕೆಲವೆಡೆ ರಸ್ತೆ, ರೈಲು ತಡೆ ನಡೆಸಲಾಗಿದೆ. ಉಳಿದಂತೆ ದೇಶದ ಇತರ ಭಾಗ ಗಳಲ್ಲಿ 'ಭಾರತ ಬಂದ್' ಜನಜೀವನದ ಮೇಲೆ ಯಾವುದೇ ಪರಿಣಾಮ ಬೀರಲಿಲ್ಲ.

ಪರಿಶಿಷ್ಟರಲ್ಲಿ ಒಳಮೀಸಲಾತಿ ನೀಡುವ ಕುರಿತು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನು ಅನೂರ್ಜಿತಗೊಳಿಸುವ ಕಾಯ್ದೆಯನ್ನು ಸಂಸತ್ ರೂಪಿಸಬೇಕು ಎಂದು ಒತ್ತಾಯಿಸಿ, 'ರಾಷ್ಟ್ರೀಯ ದಲಿತ ಮತ್ತು ಆದಿವಾಸಿ ಸಂಘಟನೆಗಳ ಒಕ್ಕೂಟ' (ಎನ್‌ಎಸಿಡಿಎಒಆರ್), 'ಮೀಸಲಾತಿ ಬಚಾವೊ ಸಂಘರ್ಷ ಸಮಿತಿ' ಸೇರಿದಂತೆ ಪರಿಶಿಷ್ಟರ 21 ಸಂಘಟನೆಗಳು ಬಂದ್‌ಗೆ ಕರೆ ನೀಡಿದ್ದವು.

ಜಾರ್ಖಂಡ್ ರಾಜಧಾನಿ ರಾಂಚಿ ಸೇರಿದಂತೆ ರಾಜ್ಯದ ಬಹುತೇಕ ಕಡೆಗಳಲ್ಲಿ ಶಾಲೆಗಳನ್ನು ಮುಚ್ಚಲಾಗಿತ್ತು. ದೂರದ ಊರುಗಳಿಗೆ ಸಂಚರಿಸುವ ಬಸ್‌ಗಳನ್ನು ನಿಲ್ಲಿಸಿದ್ದರಿಂದ ಜನರು ತೊಂದರೆ ಅನುಭವಿಸಬೇಕಾಯಿತು.

ಬಿಹಾರದಲ್ಲಿ ಘರ್ಷಣೆ: ಬಿಹಾರದಲ್ಲಿ ಪ್ರತಿಭಟನಕಾರರು ಮತ್ತು ಪೊಲೀಸರ ಮಧ್ಯೆ ಘರ್ಷಣೆ ನಡೆದಿದೆ.

ಪ್ರತಿಭಟನಕಾರರನ್ನು ಚದುರಿಸಲು ಪೊಲೀಸರು ಮೊದಲು ಜಲಫಿರಂಗಿ ಬಳಸಿದರು. ಪ್ರತಿಭಟನೆ ತೀವ್ರಗೊಂಡ ಕಾರಣ, ಲಾಠಿ ಪ್ರಹಾರ ನಡೆಸಿದರು.

ದರ್ಭಂಗಾ ಮತ್ತು ಬಕ್ಸರ್‌ನಲ್ಲಿ ರೈಲು ನಿಲ್ದಾಣಗಳಿಗೆ ನುಗ್ಗಿದ ಪ್ರತಿಭಟನಕಾರರು, ರೈಲುಗಳನ್ನು ತಡೆದರು. ಪಟ್ನಾ, ಹಾಜಿಪುರ, ದರ್ಭಂಗಾ, ಜೆಹನಾಬಾದ್ ಮತ್ತು ಬೇಗುಸರಾಯ್‌ನಲ್ಲಿ ರಸ್ತೆ ನಡೆಸಿದ್ದರಿಂದ ಜನರು ತೊಂದರೆ ಅನುಭವಿಸಬೇಕಾಯಿತು.

ಸಂಸದ (ಪಕ್ಷೇತರ) ಪಪ್ಪು ಯಾದವ್ ನೇತೃತ್ವದಲ್ಲಿ ಪಟ್ನಾದಲ್ಲಿ ಪ್ರತಿಭಟನೆ ನಡೆಯಿತು.



ಒಳಮೀಸಲಾತಿಗೆ ಸಂಬಂಧಿಸಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ವಿರೋಧಿಸಿ ಜಾರ್ಖಂಡ್ ರಾಜಧಾನಿ ರಾಂಚಿಯಲ್ಲಿ ಆದಿವಾಸಿ–ಮೂಲವಾಸಿ ಸಂಘಟನೆಗಳ ಕಾರ್ಯಕರ್ತರು ಬುಧವಾರ ಪ್ರತಿಭಟಿಸಿದರು – ಪಿಟಿಐ ಚಿತ್ರ

ವಿವಿಧ ಪಕ್ಷಗಳ ನಾಯಕರ ಪ್ರತಿಕ್ರಿಯೆ

ಪರಿಶಿಷ್ಟರು, ಆದಿವಾಸಿಗಳು ಹಾಗೂ ಒಬಿಸಿಗಳು ತಮ್ಮ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಬಹುದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದಾರೆ. ಪ್ರತಿಭಟನೆ ನಡೆಸುವುದು ಅವರ 'ಪ್ರಜಾಸತ್ತಾತ್ಮಕ ಹಕ್ಕು'. ಇದಕ್ಕೆ ಪಕ್ಷದ ಬೆಂಬಲವಿದೆ

ಪವನ್ ಖೇರಾ, ಕಾಂಗ್ರೆಸ್ ಮಾಧ್ಯಮ ವಿಭಾಗದ ಮುಖ್ಯಸ್ಥ

ಮೀಸಲಾತಿಯನ್ನು ರಕ್ಷಿಸುವ ಸಲುವಾಗಿ ಸಾಮೂಹಿಕ ಚಳವಳಿ ಆರಂಭವಾಗಿರುವುದು ಸಕಾರಾತ್ಮಕ ಬೆಳವಣಿಗೆ. ಶೋಷಿತರು ಹಾಗೂ ತುಳಿತಕ್ಕೆ ಒಳಗಾದವರಲ್ಲಿ ಇದರಿಂದ ಅರಿವು ಮೂಡಲಿದ್ದು, ಮೀಸಲಾತಿಗೆ ಧಕ್ಕೆ ತರುವ ಪ್ರಯತ್ನಗಳಿಗೆ ಜನಶಕ್ತಿಯು ಪ್ರತಿರೋಧ ಒಡ್ಡುವುದು

ಅಖಿಲೇಶ್ ಯಾದವ್, ಸಮಾಜವಾದಿ ಪಕ್ಷದ ಮುಖ್ಯಸ್ಥ

ಕೆಲ ಸ್ವಾರ್ಥಿಗಳು ಪ್ರತಿಭಟನೆ ನಡೆಸುತ್ತಿದ್ದಾರೆ. ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ನೀಡುವುದಕ್ಕೆ ಸಂಬಂಧಿಸಿ ಮಹತ್ವದ ತೀರ್ಪು ನೀಡಿರುವ ಸುಪ್ರೀಂ ಕೋರ್ಟ್‌ಗೆ ಧನ್ಯವಾದ ಹೇಳುತ್ತೇನೆ

ಜೀತನ್ ರಾಮ್ ಮಾಂಝಿ, ಎಚ್‌ಎಎಂ ಮುಖ್ಯಸ್ಥ ಹಾಗೂ ಕೇಂದ್ರ ಸಚಿವ

ಒಡೆದು ಆಳುವ ನೀತಿ ಅನುಸರಿಸುವ ಮೂಲಕ ತಮ್ಮ ಗುರಿ ಸಾಧಿಸಲು ಹೊರಟವರ ಪಿತೂರಿಗೆ ಬಹುಜನ ಸಮಾಜ ಈಗ ಅವಕಾಶ ನೀಡುವುದಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಈ ಚಳವಳಿ ರವಾನಿಸಿದೆ

ಚಂದ್ರಶೇಖರ ಆಜಾದ್, ಆಜಾದ್ ಸಮಾಜ ಪಾರ್ಟಿ (ಕಾನ್ಶಿರಾಮ್) ಅಧ್ಯಕ್ಷ

ಎಲ್ಲೆಲ್ಲಿ ಪ್ರತಿಭಟನೆ

ಉತ್ತರ ಪ್ರದೇಶ
- ಲಖನೌ, ಕಾನ್ಪುರ, ಉನ್ನಾವೊ, ಅಲಿಗಢ, ಮುಜಫ್ಫರನಗರ, ಸಂಭಲ್, ಎಟಾವ, ಮಥುರಾ, ಹಾಥರಸ್, ಗೋರಖ್‌ಪುರ ಹಾಗೂ ಆಗ್ರಾದಲ್ಲಿ ಪ್ರತಿಭಟನೆ ನಡೆಯಿತು.
- ಲಖನೌದ ಹಜರತ್‌ಗಂಜ್ ಪ್ರದೇಶದಲ್ಲಿ ಬಿಎಸ್‌ಪಿ ಕಾರ್ಯಕರ್ತರು ಪ್ರತಿಭಟಿಸಿದರು
- ಆಗ್ರಾದಲ್ಲಿ ಪ್ರತಿಭಟನಕಾರರು ಒತ್ತಾಯಪೂರ್ವಕವಾಗಿ ಅಂಗಡಿಗಳನ್ನು ಮುಚ್ಚಿಸಲು ಯತ್ನಿಸಿದರೆ, ಬಿಎಸ್‌ಪಿ ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿಯ ಗೇಟ್ ಏರಿ ಪ್ರತಿಭಟಿಸಿದರು

ಗುಜರಾತ್
- ಗೂಡ್ಸ್ ರೈಲುಗಳು ಹಾಗೂ ಬಸ್ ಸಂಚಾರ ತಡೆಯುವ ಮೂಲಕ ಪ್ರತಿಭಟನಕಾರರು ತಮ್ಮ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿದರು
- ಪರಿಶಿಷ್ಟ ಸಮುದಾಯದವರ ಜನಸಂಖ್ಯೆ ಹೆಚ್ಚಾಗಿರುವ ಛೋಟಾ ಉದೇಪುರ, ನರ್ಮದಾ, ಸುರೇಂದ್ರನಗರ, ಸಬರಕಾಂತಾ ಹಾಗೂ ಆರವಲ್ಲಿ ಜಿಲ್ಲೆಗಳಲ್ಲಿ ಪ್ರತಿಭಟನೆ ಜೋರಾಗಿತ್ತು

ರಾಜಸ್ಥಾನ
- ಬಂದ್ ಹಿನ್ನೆಲೆಯಲ್ಲಿ ಭರತಪುರದಲ್ಲಿ ಮೊಬೈಲ್ ಇಂಟರ್‌ನೆಟ್ ಸೇವೆಯನ್ನು ಸ್ಥಗಿತಗೊಳಿಸಲಾಗಿತ್ತು
- ಜೈಪುರದಲ್ಲಿ ಮಾರುಕಟ್ಟೆಗಳು ಬಿಕೊ ಎನ್ನುತ್ತಿದ್ದವು

ಒಡಿಶಾ
- ಪರಿಶಿಷ್ಟ ಹಾಗೂ ಆದಿವಾಸಿ ಗುಂಪುಗಳು ಒಡಿಶಾದ ಹಲವೆಡೆ ಪ್ರತಿಭಟಿಸಿದರು
- ರಾಜಧಾನಿ ಭುವನೇಶ್ವರ ಹಾಗೂ ಸಂಬಲ್‌ಪುರದಲ್ಲಿ ರೈಲು ಸಂಚಾರ ವ್ಯತ್ಯಯಗೊಂಡಿತ್ತು

ಗಣಿಗಾರಿಕೆ: ಕೇಂದ್ರಕ್ಕೆ ಸುಪ್ರೀಂ ಕೋರ್ಟ್ ಸೂಚನೆ



ನವದೆಹಲಿ(ಪಿಟಿಐ): ಸಂರಕ್ಷಿತ ಮೀಸಲು ಪ್ರದೇಶ ಹಾಗೂ ಸಮು ದಾಯ ಮೀಸಲು ಪ್ರದೇಶ ಎಂಬುದಾಗಿ ಘೋಷಿಸಲಾಗಿರುವ ಪ್ರದೇಶಗಳಲ್ಲಿ ಗಣಿಗಾರಿಕೆಯನ್ನು ನಿಷೇಧಿಸಬಹುದೇ ಎಂಬುದನ್ನು ಪರಿಗಣಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಬುಧವಾರ ಸೂಚಿಸಿದೆ.

ವನ್ಯಜೀವಿಗಳು ಒಂದು ರಾಷ್ಟ್ರೀಯ ಉದ್ಯಾನದಿಂದ ಮತ್ತೊಂದು ವನ್ಯಧಾಮಕ್ಕೆ ಮುಕ್ತವಾಗಿ ಸಂಚರಿಸುವುದಕ್ಕೆ ಕಾರಿಡಾರ್ ಕಲ್ಪಿಸುವ ಉದ್ದೇಶದಿಂದ ಸಂರಕ್ಷಿತ ಮೀಸಲು ಪ್ರದೇಶ ಹಾಗೂ ಸಮುದಾಯ ಮೀಸಲು ಪ್ರದೇಶಗಳನ್ನು ಘೋಷಿಸಲಾಗಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಪಿ.ಕೆ.ಮಿಶ್ರಾ ಹಾಗೂ ಕೆ.ವಿ.ವಿಶ್ವನಾಥನ್ ಅವರು ಇದ್ದ ನ್ಯಾಯಪೀಠ ಈ ಕುರಿತ ಅರ್ಜಿ ವಿಚಾರಣೆ ನಡೆಸಿತು.

'ಸಂರಕ್ಷಿತ ಮೀಸಲು ಪ್ರದೇಶ ಹಾಗೂ ಸಮುದಾಯ ಮೀಸಲು ಪ್ರದೇಶಗಳು, ವನ್ಯಜೀವಿಗಳ ಮುಕ್ತ ಸಂಚಾರಕ್ಕೆ ಕಾರಿಡಾರ್‌ಗಳಂತೆ ಅನುಕೂಲ ಕಲ್ಪಿಸುತ್ತಿದ್ದರೆ, ಇಂತಹ ಪ್ರದೇಶಗಳಲ್ಲಿ ಗಣಿಗಾರಿಕೆ ನಡೆಸುವುದು ವನ್ಯಜೀವಿಗಳ ಚಲನ ವಲನಕ್ಕೆ ಮಾರಕವಾಗಲಿದೆ' ಎಂದು ನ್ಯಾಯಪೀಠ ಹೇಳಿತು.

'ಈ ಕಾರಣಕ್ಕೆ, ಇಂತಹ ಪ್ರದೇಶಗಳಲ್ಲಿ ಗಣಿಗಾರಿಕೆ ಚಟುವಟಿಕೆಗಳನ್ನು ನಿಷೇಧಿಸಲು ಪರಿಗಣಿಸುವಂತೆ ಕೇಂದ್ರಕ್ಕೆ ಮನವಿ ಮಾಡುತ್ತೇವೆ' ಎಂದು ನ್ಯಾಯಮೂರ್ತಿಗಳು ಹೇಳಿದರು.

ಸಂರಕ್ಷಿತ ಮೀಸಲು ಪ್ರದೇಶ ಹಾಗೂ ಸಮುದಾಯ ಮೀಸಲು ಪ್ರದೇಶಗಳನ್ನು ರಾಷ್ಟ್ರೀಯ ಉದ್ಯಾನಗಳು/ವನ್ಯಜೀವಿ ಧಾಮಗಳೊಂದಿಗೆ ಸಮೀಕರಿಸಲು ಸಾಧ್ಯವಿಲ್ಲ ಎಂಬ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯ ಭಾಟಿ ಅವರ ಹೇಳಿಕೆಯನ್ನು ಪರಿಗಣಿಸಿದ ನ್ಯಾಯಪೀಠ, ವಿಚಾರಣೆಯನ್ನು ಅಕ್ಟೋಬರ್‌ಗೆ ಮುಂದೂಡಿತು.

ಸಂರಕ್ಷಿತ ಮೀಸಲು ಪ್ರದೇಶ ಹಾಗೂ ಸಮುದಾಯ ಮೀಸಲು ಪ್ರದೇಶದಿಂದ ಒಂದು ಕಿ.ಮೀ ವ್ಯಾಪ್ತಿಯಲ್ಲಿ ಗಣಿಗಾರಿಕೆ ನಿಷೇಧಿಸು ವಂತೆ ಕೋರಿ ಸಲ್ಲಿಸಿದ್ದ ಅರ್ಜಿ ಸಲ್ಲಿಸಲಾಗಿದೆ.

ಎಸ್‌ಐಟಿ ರಚನೆಗೆ ಸ್ಟಾಲಿನ್ ಆದೇಶ

ಚೆನ್ನೈ (ಪಿಟಿಐ): ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯಲ್ಲಿ ಇತ್ತೀಚೆಗೆ 'ನಕಲಿ ಎನ್‌ಸಿಸಿ ಶಿಬಿರ' ನಡೆಸಿ, ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಲಾಗಿದೆ ಎನ್ನಲಾದ ಪ್ರಕರಣದ ತನಿಖೆ ನಡೆಸಲು ವಿಶೇಷ ತನಿಖಾ ದಳ (ಎಸ್‌ಐಟಿ) ರಚಿಸುವಂತೆ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಬುಧವಾರ ಆದೇಶಿಸಿದ್ದಾರೆ.

ಹಿರಿಯ ಐಪಿಎಸ್ ಅಧಿಕಾರಿ ಕೆ.ಭವನೇಶ್ವರಿ ಅವರ ನೇತೃತ್ವದಲ್ಲಿ ಎಸ್‌ಐಟಿಯು 15 ದಿನಗಳ ಒಳಗಾಗಿ ತನಿಖೆ ನಡೆಸಿ, 60 ದಿನಗಳ ಒಳಗಾಗಿ ದೋಷಾರೋಪ ಪಟ್ಟಿ ಸಲ್ಲಿಸಲಿದೆ ಎಂದು ರಾಜ್ಯ ಸರ್ಕಾರ ಬುಧವಾರ ಹೇಳಿಕೆಯಲ್ಲಿ ತಿಳಿಸಿದೆ.

ಇಂಥ ಘಟನೆಗಳು ಪುನಃ ನಡೆಯದಂತೆ ತಡೆಯಲು ಇರುವ ದಾರಿಗಳನ್ನು ಶಿಫಾರಸು ಮಾಡಲು ಬೇರೆ ಬೇರೆ ಕ್ಷೇತ್ರಗಳ ಪ್ರತಿನಿಧಿಗಳಿರುವ ತಂಡ (ಎಂಡಿಟಿ) ರಚಿಸುವಂತೆಯೂ ಸ್ಟಾಲಿನ್ ಸೂಚಿಸಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ಜಯಶ್ರೀ ಮುರಳೀಧರನ್ ಅವರ ನೇತೃತ್ವದಲ್ಲಿ ಎಂಡಿಟಿ ಕಾರ್ಯನಿರ್ವಹಿಸಲಿದೆ.

'ಪ್ರಕರಣ ಮುಚ್ಚಿ ಹಾಕುವ ಯತ್ನ'

ಬದ್ಲಾಪುರ ಪ್ರಕರಣ: ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಆರೋಪ

ಮುಂಬೈ(ಪಿಟಿಐ): ನರ್ಸರಿಗೆ ಹೋಗುವ ಇಬ್ಬರು ಬಾಲಕಿಯರ ಮೇಲೆ ಶಾಲೆಯ ಸ್ವಚ್ಛತಾ ಕಾರ್ಮಿಕ ನಡೆಸಿದ ಲೈಂಗಿಕ ದೌರ್ಜನ್ಯ ಪ್ರಕರಣವು ಈಗ ರಾಜಕೀಯ ವಾಕ್ಸಮರಕ್ಕೆ ಕಾರಣವಾಗಿದೆ. ಎಫ್‌ಐಆರ್ ದಾಖಲಿಸಿಕೊಳ್ಳುವಲ್ಲಿ ಪೊಲೀಸರು ವಿಳಂಬ ಮಾಡಿದ ಕುರಿತು ಭಾರಿ ಆಕ್ರೋಶ ವ್ಯಕ್ತವಾಗಿದೆ.

ಈ ಬಗ್ಗೆ ಮಹಾರಾಷ್ಟ್ರ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷೆ ಸುಸೀಬೆನ್ ಶಾ ಪ್ರತಿಕ್ರಿಯಿಸಿದ್ದು, 'ಪೊಲೀಸರು ದೂರು ಸ್ವೀಕರಿಸದೆ, ಪೋಷಕರನ್ನು 11 ಗಂಟೆಗಳವರೆಗೆ ಕಾಯುವಂತೆ ಮಾಡಿರುವುದು ತಪ್ಪು' ಎಂದರು.

'ಪೊಲೀಸರಿಗೆ ದೂರು ನೀಡುವಲ್ಲಿ ಸಂತ್ರಸ್ತ ಬಾಲಕಿಯರ ಪೋಷಕರಿಗೆ ಸಹಕರಿಸಬೇಕಿದ್ದ ಶಾಲೆಯು, ಪ್ರಕರಣವನ್ನು ಮುಚ್ಚಿ ಹಾಕುವುದರಲ್ಲಿ ತೊಡಗಿತ್ತು. ಲೈಂಗಿಕ ದೌರ್ಜನ್ಯ ನಡೆದಿದೆ ಎಂದು ಗೊತ್ತಿದ್ದರೂ ಶಾಲೆಯ ಮುಖ್ಯ ಶಿಕ್ಷಕ ಪೊಲೀಸರಿಗೆ ದೂರು ನೀಡದೆ, ಶಾಲೆಯ ಆಡಳಿತ ಮಂಡಳಿಗೆ ವಿಷಯ ತಲುಪಿಸಿದ್ದಾರೆ' ಎಂದರು.

'ನಮಗೆ ವಿಷಯ ತಿಳಿದ ತಕ್ಷಣವೇ ನಮ್ಮ ಆಯೋಗದ ಬದ್ಲಾಪುರ ಘಟಕದ ಸದಸ್ಯರು ಸಂತ್ರಸ್ತ ಬಾಲಕಿಯರ ಪೋಷಕರನ್ನು ಕರೆದುಕೊಂಡು ಪೊಲೀಸ್ ಠಾಣೆಗೆ ತೆರಳಿದ್ದರು. ಆದರೆ, ಪೊಲೀಸರು ಪೋಷಕರ ದೂರು ಸ್ವೀಕರಿಸಲಿಲ್ಲ' ಎಂದರು.

'ಮಹಾಯುತಿ'–'ಮಹಾ ವಿಕಾಸ ಆಘಾಡಿ' ಮಾತಿನ ಸಮರ: ಮಂಗಳವಾರ 10 ಗಂಟೆಗಳವರೆಗೆ ಸಾರ್ವಜನಿಕರು ಬದ್ಲಾಪುರ ರೈಲು ನಿಲ್ದಾಣದಲ್ಲಿ ರೈಲು ತಡೆ ನಡೆಸಿದ್ದರು. ಆದರೆ, 'ಇವರೆಲ್ಲರೂ ರಾಜಕೀಯ ಪಕ್ಷಗಳ ಕಾರ್ಯಕರ್ತರು' ಎಂದು 'ಮಹಾಯುತಿ' ಸರ್ಕಾರದ ಶಾಸಕರು, ಸಚಿವರು ಹಾಗೂ ಮುಖ್ಯಮಂತ್ರಿ ಏಕನಾಥ ಶಿಂದೆ ದೂರಿದ್ದಾರೆ.

ಪ್ರತಿಭಟನೆ ವೇಳೆ ಪ್ರತಿಭಟನಕಾರರು ಪೊಲೀಸರ ಮೇಲೆ ಕಲ್ಲುತೂರಾಟ ನಡೆಸಿದ್ದಾರೆ.

ಪ್ರತಿಭಟನಕಾರರನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿದ್ದಾರೆ. ಈ ಬಗ್ಗೆ ವಿರೋಧ ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿವೆ. 'ಪೋಷಕರ ದೂರು ದಾಖಲಿಸಿಕೊಳ್ಳದೆ ಪೊಲೀಸರು ತಪ್ಪು ಮಾಡಿದ್ದಾರೆ. ಇದರ ವಿರುದ್ಧ ಪ್ರತಿಭಟಿಸಿದರೆ, ಜನರ ಮೇಲೆ ಲಾಠಿ ಬೀಸಿದ್ದಾರೆ' ಎಂದು ವಿರೋಧ ಪಕ್ಷದ ನಾಯಕರು ದೂರಿದ್ದಾರೆ. ಆದರೆ, ಲಾಠಿ ಪ್ರಹಾರ ಮಾಡಿದ ಪೊಲೀಸರ ಕ್ರಮವನ್ನು ಸರ್ಕಾರ ಸಮರ್ಥಿಸಿಕೊಂಡಿದೆ.



ಬದ್ಲಾಪುರ ಪ್ರಕರಣವನ್ನು ಖಂಡಿಸಿ ಶಿವಸೇನೆ (ಉದ್ಧವ್ ಬಣ) ಕಾರ್ಯಕರ್ತರು ಮುಂಬೈನಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ಮುಖ್ಯಾಂಶಗಳು

- ಪ್ರಕರಣದ ಆರೋಪಿ ಸ್ವಚ್ಛತಾ ಕಾರ್ಮಿಕನನ್ನು ಸ್ಥಳೀಯ ನ್ಯಾಯಾಲಯವು ಆಗಸ್ಟ್ 26ರವರೆಗೆ ಪೊಲೀಸ್ ವಶಕ್ಕೆ ನೀಡಿದೆ
- ಮಹಿಳೆಯರ ಸುರಕ್ಷತೆ ವಿಷಯದಲ್ಲಿ 'ಮಹಾಯುತಿ' ಸರ್ಕಾರ ಸೋತಿದೆ ಎಂದು ಆರೋಪಿಸಿ ಮಹಾ ವಿಕಾಸ ಆಘಾಡಿಯು ಆಗಸ್ಟ್ 24ರಂದು ಮಹಾರಾಷ್ಟ್ರ ಬಂದ್‌ಗೆ ಕರೆ ನೀಡಿದೆ
- ಕಲ್ಲು ತೂರಾಟದಲ್ಲಿ 17 ಪೊಲೀಸರು ಹಾಗೂ 8 ಮಂದಿ ರೈಲ್ವೆ ಪೊಲೀಸರು ಗಾಯಗೊಂಡಿದ್ದಾರೆ
- ಬದ್ಲಾಪುರದಾದ್ಯಂತ ನಡೆದ ಪ್ರತಿಭಟನೆಯ ವೇಳೆ ನಡೆದ ಗಲಾಟೆ ಸಂಬಂಧ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದು, 72 ಜನರನ್ನು ಬಂಧಿಸಿದ್ದಾರೆ
- ಬದ್ಲಾಪುರದ ಎಲ್ಲ ಶಾಲೆಗಳು ಬುಧವಾರ ಬಂದ್ ಆಗಿದ್ದವು ಹಾಗೂ ನಗರದಾದ್ಯಂತ ಅಂತರ್ಜಾಲ ಸೇವೆಯನ್ನು ಸ್ಥಗಿತಗೊಳಿಸಲಾಗಿತ್ತು

ಪ್ರತಿಭಟನೆಯು ರಾಜಕೀಯ ಪ್ರೇರಿತವಾಗಿತ್ತು. ಅವರು ಯಾರೂ ಸ್ಥಳೀಯರಲ್ಲ. ಪ್ರತಿಭಟನಕಾರರ ಬೇಡಿಕೆಗಳಿಗೆ ಸರ್ಕಾರ ಸಮ್ಮತಿ ಸೂಚಿಸಿದ ಮೇಲೆಯೂ ಪ್ರತಿಭಟನೆಯನ್ನು ಮುಂದುವರಿಸಲಾಯಿತು. ಕೆಲವರು ನಮ್ಮ ಸರ್ಕಾರದ 'ಲಾಡ್ಲಿ ಬೆಹನಾ ಯೋಜನೆ' ಹೆಸರು ಬರೆದಿದ್ದ ಫಲಕಗಳನ್ನು ಹಿಡಿದುಕೊಂಡಿದ್ದರು. ರೈಲು ತಡೆ ನಡೆಸಿ, ಯಾರಾದರೂ ಪ್ರತಿಭಟನೆ ನಡೆಸುತ್ತಾರೆಯೇ? ನಮ್ಮ ಲಾಡ್ಲಿ ಬೆಹನಾ ಯೋಜನೆ ಕುರಿತು ವಿರೋಧ ಪಕ್ಷಗಳಿಗೆ ಇರುವ ಹೊಟ್ಟೆ ಕಿಚ್ಚು ಪ್ರತಿಭಟನೆಯಲ್ಲಿ ಕಾಣಿಸುತ್ತಿತ್ತು

ಏಕನಾಥ ಶಿಂದೆ, ಮುಖ್ಯಮಂತ್ರಿ

'ಶಿವಸೇನಾ ಮುಖಂಡನ ಅಸಭ್ಯ ವರ್ತನೆ'

ಶಿವಸೇನಾ (ಶಿಂದೆ ಬಣ) ಮುಖಂಡ ವಾಮನ್ ಮಹಾತ್ರೆ ಅವರು ನನ್ನ ಕುರಿತು ಆಕ್ಷೇಪಾರ್ಹ ಮಾತುಗಳನ್ನಾಡಿದ್ದಾರೆ ಹಾಗೂ ನನ್ನ ಜೊತೆ ಅಸಭ್ಯವಾಗಿ ವರ್ತಿಸಿದ್ದಾರೆ ಎಂದು ಮಂಗಳವಾರ ರೈಲು ನಿಲ್ದಾಣದಲ್ಲಿ ನಡೆಯುತ್ತಿದ್ದ ಪ್ರತಿಭಟನೆಯನ್ನು ವರದಿ ಮಾಡಲು ತೆರಳಿದ್ದ ಮರಾಠಿ ಮಾಧ್ಯಮವೊಂದರ ಪತ್ರಕರ್ತೆ ದೂರಿದ್ದಾರೆ.

'ಅವಳ ಮೇಲೆಯೇ ಅತ್ಯಾಚಾರ ನಡೆದಿದೆ ಎನ್ನುವಂತೆ ಆಕೆ ವರದಿಗಾರಿಕೆ ಮಾಡುತ್ತಿದ್ದಾಳೆ' ಎಂದು ವಾಮನ್ ಹೇಳಿದ್ದಾರೆ' ಎಂದು ಪತ್ರಕರ್ತೆ ಹೇಳಿದ್ದಾರೆ. ಆದರೆ, ಈ ಆರೋಪವನ್ನು ವಾಮನ್ ತಳ್ಳಿ ಹಾಕಿದ್ದಾರೆ. 'ಪದೇ ಪದೇ ಅತ್ಯಾಚಾರ ಎಂದು ಹೇಳಲಾಗುತ್ತಿತ್ತು. ಅದಕ್ಕಾಗಿ ವಾಸ್ತವಾಂಶ ಇಟ್ಟುಕೊಂಡು ಮಾತನಾಡಿ ಎಂದು ಹೇಳಿದ್ದೆ ಅಷ್ಟೆ. ನನ್ನ ಹೇಳಿಕೆಯನ್ನು ತಿರುಚಲಾಗಿದೆ' ಎಂದಿದ್ದಾರೆ.

ಘಟನೆಯನ್ನು ಮುಂಬೈ ಪ್ರೆಸ್ ಕ್ಲಬ್ ಖಂಡಿಸಿದೆ.

ಕೋಲ್ಕತ್ತದ ವೈದ್ಯ ವಿದ್ಯಾರ್ಥಿನಿಯ ಅತ್ಯಾಚಾರ–ಹತ್ಯೆ ಪ್ರಕರಣ

ತ್ವರಿತ ತನಿಖೆಗೆ ಆಗ್ರಹಿಸಿ ವೈದ್ಯರ ರ‍್ಯಾಲಿ

ಕೋಲ್ಕತ್ತ/ನವದೆಹಲಿ (ಪಿಟಿಐ): ಕೋಲ್ಕತ್ತದ ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಮತ್ತು ಕೊಲೆಯನ್ನು ಖಂಡಿಸಿ ವೈದ್ಯರು ನಡೆಸುತ್ತಿರುವ ಪ್ರತಿಭಟನೆ ಬುಧವಾರ ಕೂಡ ಮುಂದುವರಿದಿದೆ. ಈ ಪ್ರಕರಣದ ತನಿಖೆಯನ್ನು ಸಿಬಿಐ ತ್ವರಿತಗೊಳಿಸಬೇಕು ಎಂದು ಪ್ರತಿಭಟನನಿರತ ವೈದ್ಯರು ಆಗ್ರಹಿಸಿದ್ದಾರೆ.

ಪಶ್ಚಿಮ ಬಂಗಾಳದ ವಿವಿಧ ವೈದ್ಯಕೀಯ ಕಾಲೇಜುಗಳು ಮತ್ತು ಆಸ್ಪತ್ರೆಗಳ ಕಿರಿಯ ವೈದ್ಯರು ಪ್ರತಿಭಟನ ರ‍್ಯಾಲಿ ನಡೆಸಿ, ಕೆಲಸದ ಸ್ಥಳಗಳಲ್ಲಿ ಭದ್ರತೆಯನ್ನು ಹೆಚ್ಚಿಸುವಂತೆ ಒತ್ತಾಯಿಸಿದರು.

ಆರ್.ಜಿ.ಕರ್ ಆಸ್ಪತ್ರೆಗೆ ಹೊಸದಾಗಿ ನೇಮಕಗೊಂಡ ಪ್ರಾಂಶುಪಾಲರು ಕರ್ತವ್ಯಕ್ಕೆ ಹಾಜರಾಗಿಲ್ಲ ಎಂದೂ ಆರೋಪಿಸಿದ ಪ್ರತಿಭಟನಕಾರರು, ಅವರು ತಕ್ಷಣವೇ ಕಚೇರಿಗೆ ಹಾಜರಾಗಬೇಕು ಎಂದು ಆಗ್ರಹಿಸಿದರು.

ಇ.ಡಿ ತನಿಖೆಗೆ ಕೋರ್ಟ್ ಮೊರೆ: ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಈ ಹಿಂದಿನ ಪ್ರಾಂಶುಪಾಲ ಸಂದೀಪ್ ಘೋಷ್ ಅವರು ತಮ್ಮ ಆಡಳಿತ ಅವಧಿಯಲ್ಲಿ ಹಣಕಾಸು ಅಕ್ರಮಗಳನ್ನು ನಡೆಸಿದ್ದಾರೆ ಎಂದು ಆರೋಪಿಸಿ ಇದೇ ಆಸ್ಪತ್ರೆಯ ಮಾಜಿ ಉಪ ಅಧೀಕ್ಷಕರೊಬ್ಬರು ಜಾರಿ ನಿರ್ದೇಶನಾಲಯದ (ಇ.ಡಿ) ತನಿಖೆಗೆ ನಿರ್ದೇಶನ ನೀಡುವಂತೆ ಕಲ್ಕತ್ತಾ ಹೈಕೋರ್ಟ್ ಮೊರೆ ಹೋಗಿದ್ದಾರೆ.

ಸುಳ್ಳುಪತ್ತೆ ಪರೀಕ್ಷೆ?: ಸಂದೀಪ್ ಘೋಷ್ ಅವರನ್ನು ಸಿಬಿಐ ಅಧಿಕಾರಿಗಳು ಸುಳ್ಳು ಪತ್ತೆ ಪರೀಕ್ಷೆಗೆ ಒಳಪಡಿಸುವ ಸಾಧ್ಯತೆ ಇದೆ. 'ನಾವು ಘೋಷ್ ಅವರ ಉತ್ತರಗಳನ್ನು ಮತ್ತಷ್ಟು ಪರಿಶೀಲನೆಗೆ ಒಳಪಡಿಸಲು ಬಯಸಿದ್ದೇವೆ. ಏಕೆಂದರೆ ನಮ್ಮ ಕೆಲವು ಪ್ರಶ್ನೆಗಳಿಗೆ ಅವರು ನೀಡಿರುವ ಉತ್ತರಗಳಲ್ಲಿ ವ್ಯತ್ಯಾಸಗಳಿವೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವೈದ್ಯೆಯ ಸಾವಿನ ಸುದ್ದಿ ತಿಳಿದ ನಂತರ ಘೋಷ್ ಅವರು ವಹಿಸಿರುವ ಪಾತ್ರವೇನು? ಅವರು ಯಾರನ್ನೆಲ್ಲ ಸಂಪರ್ಕಿಸಿದರು? ತಮ್ಮ ಮಗಳ ಶವ ನೋಡಲು ಬಂದ ಪೋಷಕರನ್ನು ಸುಮಾರು 3 ತಾಸು ಏಕೆ ಕಾಯಿಸಲಾಯಿತು? ಆಸ್ಪತ್ರೆಯ ಸೆಮಿನಾರ್ ಹಾಲ್‌ನಲ್ಲಿ ಆಕೆಯ ಶವ ಪತ್ತೆಯಾದ ನಂತರ ಅದರ ಪಕ್ಕದ ಕೊಠಡಿಗಳನ್ನು ನವೀಕರಿಸಲು ಅನುಮತಿ ನೀಡಿದ್ದೇಕೆ ಎನ್ನುವ ಬಗ್ಗೆಯೂ ಹಲವು ಪ್ರಶ್ನೆಗಳನ್ನು ಘೋಷ್ ಅವರಿಗೆ ಸಿಬಿಐ ಅಧಿಕಾರಿಗಳು ಕೇಳಿದ್ದಾರೆ.



ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಮತ್ತು ಹತ್ಯೆ ಖಂಡಿಸಿ ವೈದ್ಯರು ಮತ್ತು ವೈದ್ಯ ವಿದ್ಯಾರ್ಥಿಗಳು ಬುಧವಾರ ಕೋಲ್ಕತ್ತದಲ್ಲಿ ಪ್ರತಿಭಟನಾ ರ‍್ಯಾಲಿ ನಡೆಸಿದರು – ಎಎಫ್‌ಪಿ ಚಿತ್ರ

ಭದ್ರತೆ ಪರಿಶೀಲಿಸಿದ ಸಿಐಎಸ್‌ಎಫ್

ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯನ್ನು (ಸಿಐಎಸ್‌ಎಫ್) ನಿಯೋಜಿಸಿ, ವೈದ್ಯರು ಕರ್ತವ್ಯ ಪುನರಾರಂಭಿಸುವಂತೆ ಸುಪ್ರೀಂ ಕೋರ್ಟ್ ಆದೇಶಿಸಿದ ಒಂದು ದಿನದ ನಂತರ, ಕೇಂದ್ರ ಅರೆಸೇನಾ ಪಡೆಯ ತಂಡವು ಬುಧವಾರ ಸರ್ಕಾರಿ ವೈದ್ಯಕೀಯ ಸಂಸ್ಥೆಗೆ ಭೇಟಿ ನೀಡಿ ಭದ್ರತಾ ವ್ಯವಸ್ಥೆಗಳನ್ನು ಪರಿಶೀಲಿಸಿತು.

ಅಲ್ಲದೆ, ಈ ವೈದ್ಯಕೀಯ ಸಂಸ್ಥೆಯಲ್ಲಿ ಅಗತ್ಯ ಭದ್ರತೆ ಕಲ್ಪಿಸಲು ಸಿಐಎಸ್‌ಎಫ್‌ನ 150 ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ವೈದ್ಯೆಯಾಗಿ ಮಾತ್ರವಲ್ಲ, ಮಹಿಳೆಯಾಗಿ, ನಾನು ಕೆಲಸ ಮಾಡುವ ಸ್ಥಳದಲ್ಲಿ ಅಸುರಕ್ಷಿತ ಭಾವನೆ ಅನುಭವಿಸುತ್ತೇನೆ. ಕೆಲಸದ ವೇಳೆ ನಾನು ಹೆಚ್ಚು ಜಾಗರೂಕಳಾಗಿರಬೇಕು

ರಾಧಿಕಾ ಶರ್ಮಾ, ವೈದ್ಯೆ, ಲೇಡಿ ಹಾರ್ಡಿಂಜ್ ವೈದ್ಯಕೀಯ ಕಾಲೇಜು, ನವದೆಹಲಿ

ದಿನದ ಬೆಳವಣಿಗೆಗಳು

- ಆರ್.ಜಿ. ಕರ್ ವೈದ್ಯಕೀಯ ಸಂಸ್ಥೆಯಲ್ಲಿ ಗುಂಪೊಂದು ನಡೆಸಿದ ವಿಧ್ವಂಸಕ ಕೃತ್ಯ ಸಂಬಂಧ ಇಬ್ಬರು ಎಸಿಪಿಗಳು ಮತ್ತು ಒಬ್ಬ ಇನ್‌ಸ್ಪೆಕ್ಟರ್ ಸೇರಿ ಮೂವರು ಪೊಲೀಸ್ ಅಧಿಕಾರಿಗಳ ಅಮಾನತು
- ಇಡೀ ಪ್ರಕರಣವನ್ನು ಸುಪ್ರೀಂ ಕೋರ್ಟ್ ಕೈಗೆತ್ತಿಕೊಂಡಿರುವುದರಿಂದ ಈ ಪ್ರಕರಣದಲ್ಲಿ ಸಲ್ಲಿಕೆಯಾಗಿರುವ ಹಲವು ಪಿಐಎಲ್‌ಗಳ ಜಂಟಿ ವಿಚಾರಣೆಯನ್ನು ಕಲ್ಕತ್ತ ಹೈಕೋರ್ಟ್ ಸೆಪ್ಟೆಂಬರ್ 4ಕ್ಕೆ ಮುಂದೂಡಿದೆ
- ಬಿಜೆಪಿ ಪಶ್ಚಿಮ ಬಂಗಾಳ ಘಟಕವು ಮಮತಾ ಅವರ ರಾಜೀನಾಮೆಗೆ ಒತ್ತಾಯಿಸಿದೆ

ತಂದೆಯೇ ಮಗುವಿನ ಸಹಜ ಕಸ್ಟೋಡಿಯನ್: ಸುಪ್ರೀಂ ಕೋರ್ಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ತಂದೆಯೇ ಮಗುವಿನ ಸಹಜ ಕಸ್ಟೋಡಿಯನ್. ಮಗುವಿನ ಲಾಲನೆ-ಪಾಲನೆ ಮಾಡಲು ಅವರೇ ಸೂಕ್ತ ವ್ಯಕ್ತಿ ಎಂದಿರುವ ಸುಪ್ರೀಂ ಕೋರ್ಟ್, ನಾದಿನಿಯರ ಬಳಿ ಇದ್ದ ಅಪ್ರಾಪ್ತ ವಯಸ್ಕ ಮಗಳನ್ನು ತನ್ನ ಕಸ್ಟಡಿಗೆ ಪಡೆಯಲು ವ್ಯಕ್ತಿಗೆ ಅನುಮತಿ ನೀಡಿದೆ.

ಹೆರಿಗೆಯಾದ ನಂತರ, ಕೋವಿಡ್–19ನಿಂದಾಗಿ ಪತ್ನಿ ಮೃತಪಟ್ಟ ನಂತರ, ಪತಿ ತನ್ನ ಮಗಳನ್ನು ನಾದಿನಿಯರ ಬಳಿ ಬಿಟ್ಟಿದ್ದರು. ಕೆಲ ವರ್ಷಗಳ ನಂತರ, ಮಗಳನ್ನು ತನ್ನ ಸುಪರ್ದಿಗೆ ನೀಡಲು ನಾದಿನಿಯರು ನಿರಾಕರಿಸಿದ್ದರು.

ಈ ಕುರಿತು, ಗೌತಮಕುಮಾರ್ ದಾಸ್ ಎಂಬುವವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಮತ್ತು ಕೆ.ವಿ. ವಿಶ್ವನಾಥನ್ ಅವರಿದ್ದ ಪೀಠ ನಡೆಸಿತು.

'ದುರದೃಷ್ಟಕರ ಸನ್ನಿವೇಶಗಳಿಂದಾಗಿ, ಅರ್ಜಿದಾರ ತನ್ನ ಮಗಳನ್ನು ನಾದಿನಿಯರ ಬಳಿ ಬಿಟ್ಟಿದ್ದರು. ಅವರು ಕೆಲ ವರ್ಷಗಳ ಕಾಲ ಸಲಹಿದ್ದಾರೆ ಎಂಬುದು ಬಾಲಕಿಯನ್ನು ತಂದೆಯ ಕಸ್ಟಡಿಗೆ ನೀಡಲು ನಿರಾಕರಿಸುವುದಕ್ಕೆ ಆಧಾರವಾಗದು' ಎಂದು ಪೀಠವು ಆ. 20ರಂದು ನೀಡಿರುವ ಆದೇಶದಲ್ಲಿ ತಿಳಿಸಿದೆ.

ರಾಜ್ಯಸಭೆಯ 12 ಸ್ಥಾನಗಳಿಗೆ ಉಪಚುನಾವಣೆ

ಬಹುಮತ ಗಳಿಸುವತ್ತ ಎನ್‌ಡಿಎ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯಸಭೆಯ 12 ಸ್ಥಾನಗಳಿಗೆ ನಡೆಯಲಿರುವ ಉಪ ಚುನಾವಣೆಯಲ್ಲಿ ಆಡಳಿತಾರೂಢ ಎನ್‌ಡಿಎ 11 ಸ್ಥಾನಗಳನ್ನು ಗೆದ್ದುಕೊಳ್ಳುವ ಹುರುಪಿನಲ್ಲಿ ಇದೆ. ಇಷ್ಟು ಸ್ಥಾನಗಳನ್ನು ಗೆದ್ದುಕೊಂಡರೆ, ಎನ್‌ಡಿಎ ಮೈತ್ರಿಕೂಟವು ಮೇಲ್ಮನೆಯಲ್ಲಿ ಬಹುಮತ ಪಡೆಯಲಿದೆ.

12 ಸ್ಥಾನಗಳಿಗೆ ನಡೆಯಲಿರುವ ಚುನಾವಣೆಯಲ್ಲಿ ತೆಲಂಗಾಣದ ಒಂದು ಸ್ಥಾನವನ್ನು ಮಾತ್ರ ಗೆದ್ದುಕೊಳ್ಳುವ ಸ್ಥಿತಿಯಲ್ಲಿ ಕಾಂಗ್ರೆಸ್ ಇದೆ. ಅಲ್ಲಿ ಹಿರಿಯ ವಕೀಲ ಹಾಗೂ ಕಾಂಗ್ರೆಸ್ ಮುಖಂಡ ಅಭಿಷೇಕ್ ಮನು ಸಿಂಘ್ವಿ ಕಣದಲ್ಲಿದ್ದಾರೆ. ಬಿಜೆಪಿಯು ಒಂಬತ್ತು ಸ್ಥಾನಗಳನ್ನು ಗೆಲ್ಲಲಿದೆ. ಎನ್‌ಡಿಎ ಕೂಟದ ಪಕ್ಷಗಳಾದ ಎನ್‌ಸಿಪಿ ಹಾಗೂ 'ರಾಷ್ಟ್ರೀಯ ಲೋಕ ಮಂಚ್' ತಲಾ ಒಂದು ಸ್ಥಾನ ಗೆಲ್ಲಲಿವೆ.

ಈಗ ಎನ್‌ಡಿಎ ಮೈತ್ರಿಕೂಟವು ಮೇಲ್ಮನೆಯಲ್ಲಿ 110 ಸದಸ್ಯರ ಬೆಂಬಲವನ್ನು ಹೊಂದಿದೆ. ಇದರಲ್ಲಿ ಆರು ಮಂದಿ ನಾಮನಿರ್ದೇಶಿತ ಸದಸ್ಯರು ಹಾಗೂ ಹರಿಯಾಣದ ಒಬ್ಬ ಪಕ್ಷೇತರ ಸದಸ್ಯರೂ ಸೇರಿದ್ದಾರೆ. ಗುರುವಾರ ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಕಣದಲ್ಲಿ ಇರುವ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗುವ ಸಾಧ್ಯತೆ ಇದ್ದು, ಇದು ಅಧಿಕೃತವಾಗಿ ಘೋಷಣೆಯಾದ ನಂತರ ಎನ್‌ಡಿಎ ಸದಸ್ಯರ ಸಂಖ್ಯೆಯು 121ಕ್ಕೆ ಏರಲಿದೆ. ಈಗ ರಾಜ್ಯಸಭೆಯ ಒಟ್ಟು ಸದಸ್ಯಬಲ 237.

ನಾಮನಿರ್ದೇಶನದ ಮೂಲಕ ನೇಮಕ ಮಾಡುವ ಸ್ಥಾನಗಳನ್ನು ಸರ್ಕಾರವು ಭರ್ತಿ ಮಾಡಿದಾಗ, ರಾಜ್ಯಸಭೆಯಲ್ಲಿ ಎನ್‌ಡಿಎ ಸದಸ್ಯ ಬಲವು 125ಕ್ಕೆ ಏರಿಕೆ ಆಗುವ ನಿರೀಕ್ಷೆ ಇದೆ. ಅಂದರೆ, ಇದು ರಾಜ್ಯಸಭೆಯು ಪೂರ್ಣ ಸದಸ್ಯಬಲದೊಂದಿಗೆ ಕಾರ್ಯನಿರ್ವಹಿಸುವಾಗ ಬಹುಮತಕ್ಕೆ ಬೇಕಿರುವ ಕನಿಷ್ಠ ಸ್ಥಾನಕ್ಕಿಂತ ಎರಡು ಸ್ಥಾನ ಹೆಚ್ಚು.

ಎಂಟು ಮಂದಿ ನಾಮನಿರ್ದೇಶಿತ ಸದಸ್ಯರ ಪೈಕಿ ಇಬ್ಬರು ಬಿಜೆಪಿ ಸೇರಿದ್ದಾರೆ, ಇನ್ನುಳಿದ ಆರು ಮಂದಿ ಸರ್ಕಾರಕ್ಕೆ ಬೆಂಬಲ ನೀಡುತ್ತಿದ್ದಾರೆ.

ಜಮ್ಮು ಮತ್ತು ಕಾಶ್ಮೀರದಿಂದ ಆಯ್ಕೆ ನಡೆಯುವ ನಾಲ್ಕು ಸ್ಥಾನಗಳು 2021ರ ಫೆಬ್ರುವರಿಯಿಂದ ಖಾಲಿ ಇವೆ. ಅಕ್ಟೋಬರ್‌ನಲ್ಲಿ ಜಮ್ಮು ಮತ್ತು ಕಾಶ್ಮೀರದ ವಿಧಾನಸಭೆಯ ರಚನೆ ಆದ ನಂತರದಲ್ಲಿ, ಈ ನಾಲ್ಕು ಸ್ಥಾನಗಳಿಗೆ ಚುನಾವಣೆ ನಡೆಯಲಿದೆ.

ಚುನಾವಣೆ ನಡೆದ ನಂತರದಲ್ಲಿ ಬಿಜೆಪಿಯ ಸದಸ್ಯರ ಸಂಖ್ಯೆ 96, ಪ್ರಮುಖ ಪ್ರತಿಪಕ್ಷ ಕಾಂಗ್ರೆಸ್ ಸದಸ್ಯರ ಸಂಖ್ಯೆ 27 ಆಗಲಿದೆ. ವಿರೋಧ ಪಕ್ಷಗಳ 'ಇಂಡಿಯಾ' ಮೈತ್ರಿಕೂಟದ ಸದಸ್ಯಬಲವು ಈಗ 88. ಬಿಜೆಡಿ ಪಕ್ಷದ ಎಂಟು ಮಂದಿಯ ಬೆಂಬಲ ಕೂಡ ಕೆಲವು ಸಂದರ್ಭಗಳಲ್ಲಿ 'ಇಂಡಿಯಾ' ಮೈತ್ರಿಕೂಟಕ್ಕೆ ಸಿಗುತ್ತದೆ.

ವೈಎಸ್‌ಆರ್ ಕಾಂಗ್ರೆಸ್ (11 ಸದಸ್ಯರು), ಎಐಎಡಿಎಂಕೆ (4) ಮತ್ತು ಬಿಆರ್‌ಎಸ್ (4) ಯಾವುದೇ ಮೈತ್ರಿಕೂಟದ ಜೊತೆ ಗುರುತಿಸಿಕೊಂಡಿಲ್ಲ. ಆದರೆ ಇವು ಸರ್ಕಾರದ ಪರ ಒಲವು ಹೊಂದಿವೆ. ಎಐಎಡಿಎಂಕೆ ಪಕ್ಷವು ಮೈತ್ರಿಕೂಟದಿಂದ ಹೊರನಡೆದ ನಂತರ, ಒಡಿಶಾ ವಿಧಾನಸಭಾ ಚುನಾವಣೆಯಲ್ಲಿ ಬಿಜೆಡಿ ಸೋತ ನಂತರ, ಆಡಳಿತಾರೂಢ ಬಿಜೆಪಿಗೆ ರಾಜ್ಯಸಭೆಯಲ್ಲಿ ಸಂಖ್ಯಾಬಲದ ಸಮಸ್ಯೆ ಆಗುತ್ತಿದೆ.

ಹತ್ತು ಮಂದಿ ರಾಜ್ಯಸಭಾ ಸದಸ್ಯರು ಲೋಕಸಭೆಗೆ ಆಯ್ಕೆಯಾದ ಪರಿಣಾಮ, ಈ ಸ್ಥಾನಗಳಿಗೆ ಉಪಚುನಾವಣೆ ಅನಿವಾರ್ಯವಾಯಿತು. ಹಾಗೆಯೇ, ಬಿಆರ್‌ಎಸ್‌ನ ಕೆ. ಕೇಶವ ರಾವ್ ಮತ್ತು ಬಿಜೆಡಿ ಪಕ್ಷದ ಮಮತಾ ಮೊಹಾಂತ ಅವರು ಪಕ್ಷ ತೊರೆಯುವ ಮೊದಲು ರಾಜ್ಯಸಭಾ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿದ್ದರು.



ಮುಖ್ಯಾಂಶಗಳು

- ಎನ್‌ಡಿಎ ಮೈತ್ರಿಕೂಟಕ್ಕೆ ರಾಜ್ಯಸಭೆಯಲ್ಲಿ ಬಹುಮತ ಇಲ್ಲದೆ ಸಮಸ್ಯೆ
- ರಾಜ್ಯಸಭಾ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗುವ ಸಾಧ್ಯತೆ
- ಜಮ್ಮು - ಕಾಶ್ಮೀರದ ವಿಧಾನ ಸಭೆ ರಚನೆ ನಂತರ, ಅಲ್ಲಿಂದ ರಾಜ್ಯಸಭಾ ಸದಸ್ಯರ ಆಯ್ಕೆ

ರಿಯಾಕ್ಟರ್ ಸ್ಫೋಟ: 17 ಸಾವು


ಅಚ್ಯುತಪುರ(ಆಂಧ್ರಪ್ರದೇಶ): ಆಂಧ್ರಪ್ರದೇಶದ ಔಷಧ ತಯಾರಿಕಾ ಕಂಪನಿಯ ಘಟಕವೊಂದರಲ್ಲಿ ಬುಧವಾರ ರಿಯಾಕ್ಟರ್ ಸ್ಫೋಟ ಸಂಭವಿಸಿದ ಪರಿಣಾಮ 17 ಮಂದಿ ಮೃತಪಟ್ಟಿದ್ದು, 50ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಈ ಪೈಕಿ ಏಳು ಜನರ ಸ್ಥಿತಿ ಚಿಂತಾಜನಕವಾಗಿದೆ.

ರಿಯಾಕ್ಟರ್ ಸ್ಫೋಟದಿಂದ ಭಾರಿ ಪ್ರಮಾಣದಲ್ಲಿ ಬೆಂಕಿ ಆವರಿಸಿತು. ಕನಿಷ್ಠ 12 ಅಗ್ನಿಶಾಮಕ ದಳಗಳು ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸುವ ಕಾರ್ಯದಲ್ಲಿ ನಿರತವಾದವು. ಎನ್‌ಡಿಆರ್‌ಎಫ್‌ನ ಮೂರೂ ತಂಡಗಳು ರಕ್ಷಣಾ ಕಾರ್ಯದಲ್ಲಿ ಭಾಗಿಯಾದವು.

ಸ್ಫೋಟದಿಂದ ಕಾರ್ಖಾನೆಯ ಕಟ್ಟಡದ ಬಹುತೇಕ ಭಾಗ ಹಾನಿಯಾಗಿದೆ. ಅವಘಡದಿಂದ ಗ್ರಾಮದ ಸುತ್ತಮುತ್ತ ದಟ್ಟ ಹೊಗೆ ಆವರಿಸಿ, ಗ್ರಾಮಸ್ಥರಲ್ಲಿ ಆತಂಕ ಮಡುಗಟ್ಟಿತ್ತು.

ಮಧ್ಯಾಹ್ನ ಊಟದ ಸಮಯದಲ್ಲಿ ಕಾರ್ಖಾನೆಯಲ್ಲಿ ಅವಘಡ ಸಂಭವಿಸಿದೆ. ಕಾರ್ಖಾನೆಯಲ್ಲಿ 381 ಜನರು ಎರಡು ಪಾಳಿಯಲ್ಲಿ ಕೆಲಸ ಮಾಡುತ್ತಿದ್ದರು. ಘಟನೆಯಲ್ಲಿ ಗಾಯಗೊಂಡ ಕಾರ್ಮಿಕರಿಗೆ ಉತ್ತಮ ಆರೋಗ್ಯ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಅನಕಪಲ್ಲಿ ಜಿಲ್ಲಾಧಿಕಾರಿ ವಿಜಯಾ ಕೃಷ್ಣನ್ ತಿಳಿಸಿದ್ದಾರೆ.

ಷೇರುಪೇಟೆ ವಹಿವಾಟು 102



ಎನ್‌ಎಸ್‌ಇ ನಿಫ್ಟಿ


ಹಿಂದಿನ ಅಂತ್ಯ	24,698
ಇಂದಿನ ಅಂತ್ಯ	24,770
▲	71
ದಿನದ ಗರಿಷ್ಠ	24,783

ಮುದ್ರಮನ ಕಾಫಿ (50 ಕೆಜಿಗೆ)



ಎಪಿ	₹16750
ಎಸಿ	₹10125
ಆರ್‌ಎಪಿ	₹20000
ಆರ್‌ಸಿ	₹10270

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹480
12 ಕ್ಕೆ	₹66
ಮೈಸೂರು	
100ಕ್ಕೆ	₹482

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹260-496
ದ್ವಿತಳಿ (ಬಿ.ವಿ)	₹300-640

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹230
ಆರ್‌ಎಸ್‌ಎಸ್-5	₹224
ಗುಡ್ ಲಾಟ್ (ಪ್ರತಿ ಕೆಜಿಗೆ)	₹210

ಡಿಸ್ನಿ–ರಿಲಯನ್ಸ್ ವಿಲೀನ ಆತಂಕ ಹೊರಹಾಕಿದ ಸಿಸಿಐ

ನವದೆಹಲಿ (ರಾಯಿಟರ್ಸ್): ವಾಲ್ಟ್ ಡಿಸ್ನಿ ಮತ್ತು ರಿಲಯನ್ಸ್ ಒಗ್ಗೂಡುವುದರಿಂದ ಕ್ರಿಕೆಟ್ ಪ್ರಸಾರದ ಹಕ್ಕುಗಳ ಪ್ರಸಾರದ ಸ್ಪರ್ಧಾತ್ಮಕತೆ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂದು ಭಾರತೀಯ ಸ್ಪರ್ಧಾತ್ಮಕ ಆಯೋಗ (ಸಿಸಿಐ) ಎಚ್ಚರಿಕೆ ನೀಡಿದೆ.

ರಿಲಯನ್ಸ್ ಇಂಡಸ್ಟ್ರೀಸ್, ವಯಾಕಾಮ್ 18 ಮೀಡಿಯಾ ಪ್ರೈವೆಟ್ ಲಿಮಿಟೆಡ್ ಹಾಗೂ ವಾಲ್ಟ್ ಡಿಸ್ನಿ ಕಂಪನಿಯು ₹71 ಸಾವಿರ ಕೋಟಿ ಮೊತ್ತದ ಜಂಟಿ ಉದ್ಯಮ ಒಪ್ಪಂದಕ್ಕೆ ಕಳೆದ ಫೆಬ್ರುವರಿಯಲ್ಲಿ ಸಹಿ ಹಾಕಿವೆ. ಈ ಒಪ್ಪಂದದ ಅಡಿ ವಯಾಕಾಮ್ 18 ಮತ್ತು ಸ್ಟಾರ್ ಇಂಡಿಯಾ ಒಗ್ಗೂಡಲಿವೆ.

ಈ ಕಂಪನಿಗಳ ವಕ್ತಾರರಿಗೆ ಎಚ್ಚರಿಕೆ ನೀಡಿರುವ ಸಿಸಿಐ, ಈ ಪ್ರಕರಣದ ತನಿಖೆಗೆ ಏಕೆ ಆದೇಶ ನೀಡಬಾರದು ಎಂದು ಪ್ರಶ್ನಿಸಿದೆ. ಇದರಿಂದ ಡಿಸ್ನಿ ಮತ್ತು ರಿಲಯನ್ಸ್ ವಿಲೀನಕ್ಕೆ ದೊಡ್ಡ ಹಿನ್ನಡೆಯಾಗಲಿದೆ ಎಂದು ಹೇಳಲಾಗುತ್ತಿದೆ.

ಕ್ರಿಕೆಟ್ ಸೇರಿ ಪ್ರಮುಖ ಕಾರ್ಯಕ್ರಮಗಳು ಈ ಕಂಪನಿಗಳ ತೆಕ್ಕೆಗೆ ಹೋದರೆ ಜಾಹೀರಾತು ಮಾರುಕಟ್ಟೆಯಲ್ಲಿ ಅನಾರೋಗ್ಯಕರ ಸ್ಪರ್ಧೆಗೆ ಕಾರಣವಾಗಲಿದೆ. ಇದು ಇತರ ಕಂಪನಿಗಳಿಗೆ ಹಾನಿಯನ್ನೂ ಮಾಡಲಿದೆ ಎಂದು ಸಿಸಿಐ ಹೇಳಿದೆ.

ಮಾರಾಟ ತಂತ್ರದಿಂದ ಸ್ಥಳೀಯ ವ್ಯಾಪಾರಕ್ಕೆ ಪೆಟ್ಟು: ಗೋಯಲ್

ಇ–ಕಾಮರ್ಸ್ ಕಂಪನಿಗೆ ಚಾಟಿ

ನವದೆಹಲಿ (ಪಿಟಿಐ): 'ಅಮೆಜಾನ್, ಫ್ಲಿಪ್‌ಕಾರ್ಟ್‌ನಂತಹ ದೈತ್ಯ ಇ-ಕಾಮರ್ಸ್ ಕಂಪನಿಗಳು ಮಾರುಕಟ್ಟೆಯಲ್ಲಿ ವರ್ತಕರು ಮತ್ತು ಇತರ ಕಂಪನಿಗಳನ್ನು ಮುಗಿಸಲು ಹವಣಿಸುತ್ತಿವೆ. ಇದಕ್ಕಾಗಿ ಉತ್ಪಾದನಾ ವೆಚ್ಚಕ್ಕಿಂತಲೂ ಕಡಿಮೆ ದರದಲ್ಲಿ ಉತ್ಪನ್ನಗಳನ್ನು ಮಾರಾಟ ಮಾಡುವ ತಂತ್ರ ಅನುಸರಿಸುತ್ತಿವೆ' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಹೇಳಿದ್ದಾರೆ.

'ಭಾರತದಲ್ಲಿ ಉದ್ಯೋಗ ಮತ್ತು ಗ್ರಾಹಕರ ಕಲ್ಯಾಣದ ಮೇಲೆ ಇ-ಕಾಮರ್ಸ್‌ನ ಪರಿಣಾಮ' ಕುರಿತ ವರದಿಯನ್ನು ಬುಧವಾರ ಬಿಡುಗಡೆಗೊಳಿಸಿದ ಬಳಿಕ ಅವರು ಮಾತನಾಡಿದರು.

'ಭಾರತದಲ್ಲಿ ಸಾವಿರಾರು ಕೋಟಿ ಹೂಡಿಕೆ ಮಾಡುವುದಾಗಿ ಅಮೆಜಾನ್ ಹೇಳಿದಾಗ ನಾವು ಸಂಭ್ರಮಿಸುತ್ತೇವೆ. ಆ ಬಂಡವಾಳವು ಜನಸೇವೆ ಅಥವಾ ಭಾರತದ ಆರ್ಥಿಕತೆಗೆ ಪೂರಕವಾಗಲಿದೆಯೇ ಎಂಬುದನ್ನು ನಾವು ಮರೆಯುತ್ತೇವೆ. ಹೂಡಿಕೆಯ ವರ್ಷದಲ್ಲಿ ಆ ಕಂಪನಿಯು ... ನಷ್ಟ ಅನುಭವಿಸಿರುತ್ತದೆ. ಅದನ್ನು ತುಂಬಿಕೊಳ್ಳಲು ಬಂಡವಾಳ ಹೂಡುತ್ತದೆ' ಎಂದು ಚಾಟಿ ಬೀಸಿದರು.

ಇ-ಕಾಮರ್ಸ್ ಕಂಪನಿಗಳ ಬಂಡವಾಳ ಹೂಡಿಕೆಯು ಭಾರತದ ಆರ್ಥಿಕತೆ ಬೆಳವಣಿಗೆಗೆ ಯಾವುದೇ ಕೊಡುಗೆ ನೀಡುವುದಿಲ್ಲ. ಅವುಗಳ ಕಾರ್ಯತಂತ್ರವು ಸ್ಥಳೀಯ ಉದ್ಯೋಗ ಹಾಗೂ ವ್ಯಾಪಾರಕ್ಕೆ ಧಕ್ಕೆ ತರಲಿದೆ ಎಂದು ಕಳವಳ ವ್ಯಕ್ತಪಡಿಸಿದರು.

'ಇ-ಕಾಮರ್ಸ್ ಕಂಪನಿಗಳು ಅವಾಸ್ತವಿಕವಾಗಿ ಉತ್ಪನ್ನಗಳಿಗೆ ಬೆಲೆ ನಿಗದಿಪಡಿಸುತ್ತವೆ. ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕತೆಯನ್ನು ಹಾಳು ಮಾಡುತ್ತವೆ. ಇದು ದೇಶಕ್ಕೆ ಒಳ್ಳೆಯದಲ್ಲ. ಸಾವಿರಾರು ಚಿಲ್ಲರೆ ಮಾರಾಟಗಾರರ ಮೇಲೆ ಪರಿಣಾಮ ಬೀರುತ್ತದೆ' ಎಂದು ಹೇಳಿದರು.

ಅಮೆಜಾನ್ ಮತ್ತು ಫ್ಲಿಪ್‌ಕಾರ್ಟ್ ಕಂಪನಿಯು 2022–23ನೇ ಆರ್ಥಿಕ ವರ್ಷದಲ್ಲಿ ₹5000 ಕೋಟಿ ನಷ್ಟ ಅನುಭವಿಸಿವೆ.

'ವೃತ್ತಿಪರರಿಗೆ ₹1 ಸಾವಿರ ಕೋಟಿ ಪಾವತಿಸಿರುವುದರಿಂದ ನಷ್ಟವಾಗಿದೆ ಎಂದು ಹೇಳುತ್ತವೆ. ಆ ವೃತ್ತಿಪರರು ಯಾರೆಂದು ನನಗೆ ಗೊತ್ತಿಲ್ಲ. ಆದರೆ, ಅವರ ಬಗ್ಗೆ ಹೆಚ್ಚಾಗಿ ತಿಳಿದುಕೊಳ್ಳುವ ಹಂಬಲವಿದೆ' ಎಂದ ಅವರು, ಲೆಕ್ಕ ಪರಿಶೋಧಕರು, ವೃತ್ತಿಪರರು ಅಥವಾ ವಕೀಲರಿಗೆ ಇಷ್ಟು ಮೊತ್ತ ನೀಡಲಾಗಿದೆಯೇ ಎಂದು ಪ್ರಶ್ನಿಸಿದರು.

'ಇ-ಕಾಮರ್ಸ್ ಕಂಪನಿಗಳು ಸಣ್ಣ ವ್ಯಾಪಾರಿಗಳ ಮೌಲ್ಯವನ್ನು ನುಂಗಿ ಹಾಕುತ್ತವೆ. ಅಪಾರ ಪ್ರಮಾಣದಲ್ಲಿ ಉತ್ಪನ್ನಗಳನ್ನು ಮಾರಾಟ ಮಾಡುತ್ತವೆ. ಅವುಗಳ ಅಬ್ಬರದ ಮುಂದೆ ಸ್ವತಂತ್ರ ಅಥವಾ ಕೌಟುಂಬಿಕ ಒಡೆತನದ ವ್ಯಾಪಾರ ನಡೆಸುವವರಷ್ಟೇ ಉಳಿಯಲು ಸಾಧ್ಯ ಎಂದರು.

'ಈ ಕಂಪನಿಗಳ ತಂತ್ರದಿಂದಾಗಿ ಸಾಮಾಜಿಕ ವ್ಯವಸ್ಥೆ ಕುಸಿಯುತ್ತಿದೆ. ಈಗಾಗಲೇ, ಯುರೋಪ್ ಮತ್ತು ಅಮೆರಿಕದಲ್ಲಿ ಈ ಪರಿಣಾಮವನ್ನು ನಾವು ನೋಡುತ್ತಿದ್ದೇವೆ' ಎಂದರು.

ಮುಖ್ಯಾಂಶಗಳು
- ಇ-ಕಾಮರ್ಸ್ ಕಂಪನಿಗಳ ತಂತ್ರದಿಂದ ಸಾಮಾಜಿಕ ವ್ಯವಸ್ಥೆಗೆ ಧಕ್ಕೆ
- ನಷ್ಟ ತುಂಬಿಕೊಳ್ಳುವುದು ಕಂಪನಿಗಳ ಕಾರ್ಯತಂತ್ರ
- ದೇಶದ ಆರ್ಥಿಕತೆ ಬೆಳವಣಿಗೆಗೆ ಕೊಡುಗೆ ಶೂನ್ಯ


ಪಿಯೂಷ್ ಗೋಯಲ್

ಸುದ್ದಿ 2 ನಿಮಿಷ

250 ಚಾರ್ಜಿಂಗ್ ಕೇಂದ್ರ ಸ್ಥಾಪನೆಗೆ ಟಾಟಾ ಮೋಟರ್ಸ್ ನಿರ್ಧಾರ

ನವದೆಹಲಿ (ಪಿಟಿಐ): ಬೆಂಗಳೂರು ಸೇರಿ ದೇಶದ 50ಕ್ಕೂ ಹೆಚ್ಚು ನಗರಗಳಲ್ಲಿ ಹೊಸದಾಗಿ 250 ವಿದ್ಯುತ್‌ಚಾಲಿತ ವಾಣಿಜ್ಯ ವಾಹನಗಳ ಚಾರ್ಜಿಂಗ್ ಕೇಂದ್ರ ತೆರೆಯಲು ಟಾಟಾ ಮೋಟರ್ಸ್ ನಿರ್ಧರಿಸಿದೆ.

ಅತಿವೇಗದ ಚಾರ್ಜಿಂಗ್ ಕೇಂದ್ರಗಳ ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಲು ತೀರ್ಮಾನಿಸಲಾಗಿದೆ. ಈ ನಿಟ್ಟಿನಲ್ಲಿ ಡೆಲ್ಟಾ ಎಲೆಕ್ಟ್ರಾನಿಕ್ಸ್ ಇಂಡಿಯಾ ಮತ್ತು ಥಂಡರ್‌ಪ್ಲಸ್ ಸಲ್ಯೂಷನ್ಸ್ ಜೊತೆಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ ಎಂದು ಕಂಪನಿಯು ಬುಧವಾರ ತಿಳಿಸಿದೆ. ದೆಹಲಿ, ಮುಂಬೈ, ಚೆನ್ನೈ, ಪುಣೆ, ಕೊಚ್ಚಿ ಸೇರಿ ಪ್ರಮುಖ ನಗರ ಪ್ರದೇಶಗಳ ವ್ಯಾಪ್ತಿಯಲ್ಲಿ ಈ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಹೊಸ ಕೇಂದ್ರಗಳ ಸ್ಥಾಪನೆಯೊಂದಿಗೆ ಒಟ್ಟು ಚಾರ್ಜಿಂಗ್ ಕೇಂದ್ರಗಳ ಸಂಖ್ಯೆ 540ಕ್ಕೆ ತಲುಪಲಿದೆ ಎಂದು ತಿಳಿಸಿದೆ.

ಕೇಂದ್ರಗಳಿಗೆ ಅಗತ್ಯವಿರುವ ಹಾರ್ಡ್‌ವೇರ್‌ಗಳನ್ನು ಡೆಲ್ಟಾ ಎಲೆಕ್ಟ್ರಾನಿಕ್ಸ್ ಪೂರೈಸಲಿದೆ. ಥಂಡರ್‌ಪ್ಲಸ್ ಸಲ್ಯೂಷನ್ಸ್ ಇವುಗಳನ್ನು ಅಳವಡಿಸುವ ಜೊತೆಗೆ ಕಾರ್ಯಾಚರಣೆ ಮಾಡಲಿದೆ ಎಂದು ಹೇಳಿದೆ.

ದೂರದ ಸ್ಥಳಗಳಿಗೆ ಸರಕು ಸಾಗಣೆ ಮಾಡುವ ಇ-ಕಾಮರ್ಸ್ ಕಂಪನಿಗಳು, ಪಾರ್ಸಲ್ ಮತ್ತು ಕೊರಿಯರ್ ಸೇವಾದಾತರು ಸೇರಿ ಹಲವು ಕಂಪನಿಗಳು ವಿದ್ಯುತ್‌ಚಾಲಿತ ವಾಣಿಜ್ಯ ವಾಹನಗಳನ್ನು ಹೆಚ್ಚಾಗಿ ಬಳಸುತ್ತವೆ. ಅವರಿಗೆ ಈ ಕೇಂದ್ರಗಳಿಂದ ಪ್ರಯೋಜನ ಸಿಗಲಿದೆ ಎಂದು ಹೇಳಿದೆ.



ಮುಂದುವರಿದ ಗೂಳಿ ಓಟ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಬುಧವಾರವೂ ಗೂಳಿ ಓಟ ಮುಂದುವರಿಯಿತು. ಎಫ್‌ಎಂಸಿಜಿ ಮತ್ತು ಹೆಲ್ತ್‌ಕೇರ್ ಷೇರುಗಳ ಖರೀದಿ ಹೆಚ್ಚಳದಿಂದಾಗಿ ಸೂಚ್ಯಂಕಗಳು ಏರಿಕೆ ದಾಖಲಿಸಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 102 ಅಂಶ ಏರಿಕೆಯಾಗಿ 80,905 ಅಂಶಗಳಲ್ಲಿ ವಹಿವಾಟನ್ನು ಅಂತ್ಯಗೊಳಿಸಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 71 ಅಂಶ ಏರಿಕೆ ಕಂಡು, 24,770 ಅಂಶಗಳಲ್ಲಿ ಸ್ಥಿರಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಟೈಟನ್, ಏಷ್ಯನ್ ಪೇಂಟ್ಸ್, ಐಟಿಸಿ, ಹಿಂದುಸ್ತಾನ್ ಯೂನಿಲಿವರ್, ನೆಸ್ಲೆ ಇಂಡಿಯಾ, ಬಜಾಜ್ ಫಿನ್‌ಸರ್ವ್ ಮತ್ತು ಭಾರ್ತಿ ಏರ್‌ಟೆಲ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಅಲ್ಟ್ರಾ ಟೆಕ್ ಸಿಮೆಂಟ್, ಟೆಕ್ ಮಹೀಂದ್ರ, ಟಾಟಾ ಸ್ಟೀಲ್, ಪವರ್ ಗ್ರಿಡ್, ಎಚ್‌ಡಿಎಫ್‌ಸಿ ಬ್ಯಾಂಕ್, ಎಚ್‌ಸಿಎಲ್ ಟೆಕ್ನಾಲಜೀಸ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಐಸಿಐಸಿಐ ಬ್ಯಾಂಕ್‌ನ ಷೇರಿನ ಮೌಲ್ಯ ಕುಸಿದಿದೆ.

ಮಂಗಳವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹1,457 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶೀಯ ಸಾಂಸ್ಥಿಕ ಹೂಡಿಕೆದಾರರು ₹2,252 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ	22-08-2024
ಜಾವಾ 70/80(ಹೊಸ)	11600-11700
ಜಾವಾ 80/90(ಹೊಸ)	11000-11100
ದಪ್ಪ ಮಧ್ಯಪ್ರದೇಶ(ಹೊಸ)	9400-9500
ದಪ್ಪ ಗುಜರಾತ್(ಹೊಸ)	10200-10300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1545(1570)
ಒಂದು ವಾರದ ಡೆಲಿವರಿ	1540(1565)
ಸೋಯಾ ಕಚ್ಚಾ	892 (875)
ಪಾಮ್ ವಾರದ ಡೆಲಿವರಿ	928 (916)
ಸೂರ್ಯಕಾಂತಿ ಎಣ್ಣೆ ಕಚ್ಚಾ	915 (900)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ **₹71,350** (70,400)

ಬೆಳ್ಳಿ ಕೆ.ಜಿ **₹84,800** (81,600)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ವಿನಿಮಯ ದರ

$ ಡಾಲರ್	83.95
£ ಪೌಂಡ್	109.32
€ ಯುರೊ	93.29
¥ ಯೆನ್ (100ಕ್ಕೆ)	58

ಆದಾಯ ತೆರಿಗೆ ಅಧಿಕಾರಿಗಳಿಗೆ ನಿರ್ಮಲಾ ಪಾಠ

'ತೆರಿಗೆದಾರರಿಗೆ ಭಯ ಪಡಿಸಬೇಡಿ'

ನವದೆಹಲಿ (ಪಿಟಿಐ): 'ತೆರಿಗೆದಾರರಿಗೆ ನೀಡುವ ನೋಟಿಸ್ ಅಥವಾ ಪತ್ರದಲ್ಲಿ ಆದಾಯ ತೆರಿಗೆ ಅಧಿಕಾರಿಗಳು ಸರಳ ಪದಗಳನ್ನು ಬಳಸಬೇಕು. ಅವರ ಮೇಲೆ ವಿವೇಚನೆಯಿಂದ ಅಧಿಕಾರ ಚಲಾಯಿಸಬೇಕು' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಕಿವಿಮಾತು ಹೇಳಿದ್ದಾರೆ.

ಬುಧವಾರ ನಡೆದ 165ನೇ ಆದಾಯ ತೆರಿಗೆ ಸಂಸ್ಥಾಪನಾ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ತೆರಿಗೆದಾರರು ಆದಾಯ ತೆರಿಗೆ ಕಚೇರಿಗೆ ಭೇಟಿ ನೀಡುವುದಿಲ್ಲ. ಅಧಿಕಾರಿಗಳೊಂದಿಗೆ ಮುಖಾಮುಖಿ ಆಗುವುದಿಲ್ಲ. ನಾವು ಇಂತಹ ವ್ಯವಸ್ಥೆ ಅಳವಡಿಸಿಕೊಂಡಿದ್ದೇವೆ ಎಂಬ ಬಗ್ಗೆ ಅಧಿಕಾರಿಗಳಿಗೆ ಅರಿವು ಇರಬೇಕು. ಅವರೊಟ್ಟಿಗೆ ನ್ಯಾಯೋಚಿತ ಹಾಗೂ ಸ್ನೇಹಪರದಿಂದ ವರ್ತಿಸಬೇಕು ಎಂದು ಸಲಹೆ ನೀಡಿದರು.

ನೋಟಿಸ್‌ಗಳು ತೆರಿಗೆದಾರರಲ್ಲಿ ಭಯ ಹುಟ್ಟಿಸುವಂತಿರಬಾರದು. ಬೆದರಿಕೆಯ ಸಾಧನವಾಗಬಾರದು. ಯಾವ ಕಾರಣಕ್ಕೆ ನೋಟಿಸ್ ನೀಡಲಾಗಿದೆ ಎಂಬ ಬಗ್ಗೆ ಸರಳ ಹಾಗೂ ನೇರವಾಗಿ ಅವರಿಗೆ ಮನದಟ್ಟು ಮಾಡುವಂತಿರಬೇಕು ಎಂದು ಸಲಹೆ ನೀಡಿದರು.

ತೆರಿಗೆದಾರರನ್ನು ಪೇಚಿಗೆ ಸಿಲುಕಿಸಬಾರದು. ತೆರಿಗೆ ವ್ಯತ್ಯಾಸಕ್ಕೆ ಸಂಬಂಧಿಸಿದಂತೆ ಸೂಕ್ತ ನೆಲೆಯಲ್ಲಿ ಕ್ರಮ ಜರುಗಿಸಬೇಕಿದೆ ಎಂದರು.

ಮರುಪಾವತಿ ವಿಳಂಬ ಸಲ್ಲದು. ಸಕಾಲದಲ್ಲಿ ಮರುಪಾವತಿಗೆ ಸಂಬಂಧಿಸಿದಂತೆ ಸುಧಾರಣಾ ಕ್ರಮಗಳನ್ನು ಕೈಗೊಳ್ಳಬೇಕಿದೆ ಎಂದು ಸೂಚಿಸಿದರು.

ಆರು ತಿಂಗಳಲ್ಲಿ ಹೊಸ ಕಾಯ್ದೆ ಜಾರಿ



'ಆರು ದಶಕದಷ್ಟು ಹಳೆಯದಾದ ಆದಾಯ ತೆರಿಗೆ ಕಾಯ್ದೆ 1961ರ ಬದಲಾಗಿ ಮುಂದಿನ ಆರು ತಿಂಗಳೊಳಗೆ ಹೊಸ ಕಾಯ್ದೆಯು ಜಾರಿಗೆ ಬರಲಿದೆ' ಎಂದು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ತೆರಿಗೆದಾರರಿಗೆ ಅರ್ಥವಾಗುವಂತೆ ಸರಳ ಭಾಷೆಯಲ್ಲಿ ಕಾಯ್ದೆಯನ್ನು ರೂಪಿಸಲು ನಿರ್ಧರಿಸಲಾಗಿದೆ. ಕೇಂದ್ರ ನೇರ ತೆರಿಗೆಗಳ ಮಂಡಳಿಯು ಹೊಸ ತೆರಿಗೆ ಪದ್ಧತಿ ಜಾರಿಗೆ ಸಂಬಂಧಿಸಿದಂತೆ ಸಿದ್ಧತೆ ನಡೆಸುತ್ತಿದೆ. ಇದರಿಂದ ತೆರಿಗೆದಾರರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ಹೇಳಿದರು.

2024–25ನೇ ಆರ್ಥಿಕ ಸಾಲಿನ ಬಜೆಟ್‌ನಲ್ಲಿ ನಿರ್ಮಲಾ ಅವರು, ಆದಾಯ ತೆರಿಗೆ ಕಾಯ್ದೆಯ ಸಮಗ್ರ ಬದಲಾವಣೆ ಬಗ್ಗೆ ಪ್ರಸ್ತಾಪಿಸಿದ್ದರು.

ಟೆಲಿಕಾಂ ಬಳಕೆದಾರರ ಸಂಖ್ಯೆ 120.5 ಕೋಟಿ

ನವದೆಹಲಿ (ಪಿಟಿಐ): ರಿಲಯನ್ಸ್ ಜಿಯೊ ಮತ್ತು ಭಾರ್ತಿ ಏರ್‌ಟೆಲ್ ಬಳಕೆದಾರರ ಸಂಖ್ಯೆ ಹೆಚ್ಚಳದಿಂದಾಗಿ ಜೂನ್‌ನಲ್ಲಿ ಭಾರತೀಯ ಟೆಲಿಕಾಂ ಚಂದಾದಾರರ ಸಂಖ್ಯೆ 120.5 ಕೋಟಿಗೆ ತಲುಪಿದೆ ಎಂದು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರದ (ಟ್ರಾಯ್) ವರದಿ ತಿಳಿಸಿದೆ.

ವೈರ್‌ಲೆಸ್ ಚಂದಾದಾರರ ಸಂಖ್ಯೆ 3.51 ಕೋಟಿ ಹಾಗೂ ವೈರ್‌ಲೈನ್ ಬಳಕೆದಾರರ ಸಂಖ್ಯೆಯಲ್ಲಿ 3.47 ಕೋಟಿ ಹೆಚ್ಚಳವಾಗಿದೆ. ಈ ಎರಡು ವಿಭಾಗದಲ್ಲಿ ಜಿಯೊ ಮತ್ತು ಏರ್‌ಟೆಲ್ ಬೆಳವಣಿಗೆ ಸದೃಢವಾಗಿದೆ. ಆದರೆ, ಸರ್ಕಾರಿ ಸ್ವಾಮ್ಯದ ಬಿಎಸ್‌ಎನ್‌ಎಲ್ ಚಂದಾದಾರರು ಕಡಿಮೆಯಾಗಿದ್ದಾರೆ ಎಂದು ವಿವರಿಸಿದೆ.

ಮೇ ತಿಂಗಳ ಅಂತ್ಯಕ್ಕೆ ಟೆಲಿಕಾಂ ಚಂದಾದಾರರ ಸಂಖ್ಯೆ 120.3 ಕೋಟಿ ಇತ್ತು. ಇದಕ್ಕೆ ಹೋಲಿಸಿದರೆ ಜೂನ್‌ನಲ್ಲಿ ಶೇ 0.16ರಷ್ಟು ಏರಿಕೆಯಾಗಿದೆ.

ವೈರ್‌ಲೆಸ್ ವಿಭಾಗದಲ್ಲಿ ಜಿಯೊಗೆ ಹೊಸದಾಗಿ 19.11 ಲಕ್ಷ ಹಾಗೂ ಭಾರ್ತಿ ಏರ್‌ಟೆಲ್‌ಗೆ 12.52 ಲಕ್ಷ ಚಂದಾದಾರರು ಸೇರ್ಪಡೆಯಾಗಿದ್ದಾರೆ.

ಈ ವಿಭಾಗದಲ್ಲಿ ವೊಡಾಫೋನ್ ಐಡಿಯಾ (ವಿಐಎಲ್), ಬಿಎಸ್‌ಎನ್‌ಎಲ್, ಎಂಟಿಎನ್‌ಎಲ್ ಹಾಗೂ ರಿಲಯನ್ಸ್ ಕಮ್ಯೂನಿಕೇಷನ್ ಒಟ್ಟು 15.73 ಲಕ್ಷ ಚಂದಾದಾರರನ್ನು ಕಳೆದುಕೊಂಡಿವೆ. ಈ ಪೈಕಿ ವಿಐಎಲ್‌ನಿಂದ 8.6 ಲಕ್ಷ ಹಾಗೂ ಬಿಎಸ್‌ಎನ್‌ಎಲ್ 7.25 ಲಕ್ಷ ಚಂದಾದಾರರು ಹೊರಹೋಗಿದ್ದಾರೆ.

ವೈರ್‌ಲೈನ್ ವಿಭಾಗದಲ್ಲಿ ಜಿಯೊಗೆ ಹೊಸದಾಗಿ 4.34 ಲಕ್ಷ ಹಾಗೂ ಭಾರ್ತಿ ಏರ್‌ಟೆಲ್‌ಗೆ 44,611 ಚಂದಾದಾರರು ಸೇರ್ಪಡೆಯಾಗಿದ್ದಾರೆ. ಈ ವಿಭಾಗದಲ್ಲಿ ಬಿಎಸ್‌ಎನ್‌ಎಲ್ 60,644 ಚಂದಾದಾರರನ್ನು ಕಳೆದುಕೊಂಡಿದೆ.

ಮೇ ತಿಂಗಳಿನಲ್ಲಿ 94 ಕೋಟಿ ಇದ್ದ ಬ್ರ್ಯಾಂಡ್‌ಬಾಂಡ್ ಬಳಕೆದಾರರ ಸಂಖ್ಯೆಯು ಜೂನ್‌ನಲ್ಲಿ 93.51 ಕೋಟಿಗೆ ಜಿಗಿದಿದೆ. ಜಿಯೊ 48.89 ಕೋಟಿ, ಭಾರ್ತಿ ಏರ್‌ಟೆಲ್ 28.13 ಕೋಟಿ, ವಿಐಎಲ್ 12.78 ಕೋಟಿ ಹಾಗೂ ಬಿಎಸ್‌ಎನ್‌ಎಲ್ 2.5 ಬ್ರ್ಯಾಂಡ್‌ಬಾಂಡ್ ಚಂದಾದಾರರನ್ನು ಹೊಂದಿದೆ.

ಪೋಲೆಂಡ್, ಉಕ್ರೇನ್‌ಗೆ ಮೋದಿ ಭೇಟಿ

ವಾಸಾ(ಪೋಲೆಂಡ್)/ನವದೆಹಲಿ (ಪಿಟಿಐ): ಇದೇ ಮೊದಲ ಬಾರಿಗೆ ಪೋಲೆಂಡ್ ಮತ್ತು ಉಕ್ರೇನ್‌ಗೆ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಮೂರು ದಿನಗಳ ಪ್ರವಾಸ ಕೈಗೊಂಡಿದ್ದಾರೆ.

ಪೋಲೆಂಡ್ ರಾಜಧಾನಿ ವಾಸಾಕ್ಕೆ ಬುಧವಾರ ಬಂದಿಳಿದಿರುವ ಮೋದಿ ಅವರು ಇಲ್ಲಿ ಎರಡು ದಿನಗಳು ವಾಸ್ತವ್ಯ ಹೂಡಲಿದ್ದಾರೆ. ಇದು 45 ವರ್ಷಗಳ ನಂತರ ಈ ದೇಶಕ್ಕೆ ಭಾರತದ ಪ್ರಧಾನಿಯೊಬ್ಬರ ಮೊದಲ ಅಧಿಕೃತ ಭೇಟಿಯಾಗಿದೆ.

ಪೋಲೆಂಡ್ ಪ್ರವಾಸದ ನಂತರ ಮೋದಿ ಅವರು ಇದೇ 23ರಂದು ಉಕ್ರೇನ್ ರಾಜಧಾನಿ ಕೀವ್‌ಗೆ ಭೇಟಿ ಕೊಡಲಿದ್ದಾರೆ. ಅಂದು ಸುಮಾರು ಏಳು ತಾಸು ಅವರು ಕೀವ್‌ನಲ್ಲಿ ಇರಲಿದ್ದಾರೆ. ಪೋಲೆಂಡ್‌ನಿಂದ ಕೀವ್‌ಗೆ 'ರೈಲ್ ಫೋರ್ಸ್ ಒನ್' ರೈಲಿನಲ್ಲಿ ಮೋದಿ ಅವರು ಹೋಗಿ ಬರಲಿದ್ದಾರೆ. ಎರಡೂ ಕಡೆಯ ಪ್ರಯಾಣ ಅವಧಿ ಒಟ್ಟು 20 ತಾಸು ಆಗಲಿದೆ. 1991ರಲ್ಲಿ ಉಕ್ರೇನ್ ಸ್ವತಂತ್ರವಾದ ನಂತರ ಭಾರತದ ಪ್ರಧಾನಿಯೊಬ್ಬರು ಭೇಟಿ ನೀಡುತ್ತಿರುವುದು ಇದೇ ಮೊದಲು.

ನವದೆಹಲಿಯಿಂದ ಪ್ರಯಾಣ ಹೊರಡುವ ಮೊದಲು ಮೋದಿ ಅವರು ಉಕ್ರೇನ್ ಸಂಘರ್ಷ ಉಲ್ಲೇಖಿಸಿ, 'ಸ್ನೇಹಿತ ಮತ್ತು ಪಾಲುದಾರನಾಗಿ ಭಾರತವು, ಈ ಪ್ರದೇಶದಲ್ಲಿ ಶಾಂತಿ ಮತ್ತು ಸ್ಥಿರತೆಯು ಮೊದಲಿನ ಸ್ಥಿತಿಗೆ ಆದಷ್ಟು ಶೀಘ್ರ ಮರಳಲಿ ಎಂದು ಆಶಿಸುತ್ತದೆ' ಎಂದು ಹೇಳಿದ್ದಾರೆ.

'ದ್ವಿಪಕ್ಷೀಯ ಸಹಕಾರ ಬಲಪಡಿಸಲು ಮತ್ತು ಸದ್ಯದ ಉಕ್ರೇನ್ ಸಂಘರ್ಷಕ್ಕೆ ಶಾಂತಿಯುತ ಪರಿಹಾರದ ಬಗ್ಗೆ ದೃಷ್ಟಿಕೋನಗಳನ್ನು ಹಂಚಿಕೊಳ್ಳಲು ಅಧ್ಯಕ್ಷ ಝೆಲೆನ್‌ಸ್ಕಿ ಅವರೊಂದಿಗೆ ಮಾತುಕತೆ ನಡೆಸಲು ಅವಕಾಶವನ್ನು ಎದುರು ನೋಡುತ್ತಿದ್ದೇನೆ' ಎಂದು ಅವರು ಹೇಳಿದರು.

ಉಕ್ರೇನ್ ಮೇಲಿನ ರಷ್ಯಾದ ಆಕ್ರಮಣವನ್ನು ಭಾರತ ಈವರೆಗೂ ಖಂಡಿಸಿಲ್ಲ. ಮಾತುಕತೆ ಮತ್ತು ರಾಜತಾಂತ್ರಿಕತೆಯ ಮೂಲಕ ಸಂಘರ್ಷವನ್ನು ಪರಿಹರಿಸಲು ಉಭಯ ರಾಷ್ಟ್ರಗಳನ್ನು ಭಾರತ ಒತ್ತಾಯಿಸುತ್ತಲೇ ಬಂದಿದೆ.

ಅನಿವಾಸಿ ಭಾರತೀಯರ ಸಂತಸ: ಪೋಲೆಂಡ್ ರಾಜಧಾನಿಯಲ್ಲಿರುವ ಭಾರತೀಯರು ಮೋದಿ ಅವರ ಭೇಟಿಗೆ ಸಂತಸ ವ್ಯಕ್ತಪಡಿಸಿದ್ದಾರೆ.

ಪೋಲೆಂಡ್ ಅಧ್ಯಕ್ಷ ಆಂಡ್ರೆ ಸೆಬಾಸ್ಟಿಯನ್ ಡೂಡಾ ಹಾಗೂ ಪ್ರಧಾನಿ ಡೊನಾಲ್ಡ್ ಟಸ್ಕ್ ಜೊತೆ ಪ್ರಧಾನಿ ಮೋದಿ ಮಾತುಕತೆ ನಡೆಸಲಿದ್ದಾರೆ.


ಪೋಲೆಂಡ್‌ನ ವಾಸಾಗೆ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಬಂದಿಳಿದಾಗ ಅವರನ್ನು ಅಧಿಕಾರಿ ವರ್ಗದವರು ಹಾಗೂ ಸೇನೆಯವರು ಬರಮಾಡಿಕೊಂಡರು – ಪಿಟಿಐ ಚಿತ್ರ

ಕಮಲಾ ಅವರನ್ನು ಅಧ್ಯಕ್ಷರನ್ನಾಗಿ ಕಾಣಲು ಅಮೆರಿಕ ಸಿದ್ಧ: ಒಬಾಮ

ಷಿಕಾಗೊ (ಪಿಟಿಐ): ಡೊನಾಲ್ಡ್ ಟ್ರಂಪ್ ಅವರು ಅಧಿಕಾರದ ಗದ್ದುಗೆ ಏರಿ 'ಮತ್ತೆ ನಾಲ್ಕು ವರ್ಷಗಳ ಆರ್ಭಟ, ಅವ್ಯವಸ್ಥೆ ಹಾಗೂ ಗೊಂದಲಗಳು ಸೃಷ್ಟಿಯಾಗುವುದು ಅಮೆರಿಕನ್ನರಿಗೆ ಬೇಕಾಗಿಲ್ಲ' ಎಂದು ಹೇಳುವ ಮೂಲಕ ಮಾಜಿ ಅಧ್ಯಕ್ಷ ಬರಾಕ್ ಒಬಾಮ ಅವರು, ಕಮಲಾ ಹ್ಯಾರಿಸ್ ಅಧ್ಯಕ್ಷೆಯಾಗಿ ಆಯ್ಕೆಯಾಗಬೇಕು ಎಂಬುದನ್ನು ಒತ್ತಿ ಹೇಳಿದರು.

'ನಾವು ಕಮಲಾ ಅವರನ್ನು ಅಧ್ಯಕ್ಷರನ್ನಾಗಿ ಸ್ವೀಕರಿಸಲು ಸಿದ್ಧರಾಗಿದ್ದೇವೆ' ಎಂದು ಒಬಾಮ ಅವರು ಡೆಮಾಕ್ರಟಿಕ್ ಪಕ್ಷದ ಕಾರ್ಯಕ್ರಮವೊಂದರಲ್ಲಿ ಹೇಳಿದರು.

ಬಸ್ ಅಪಘಾತ: 28 ಸಾವು

ಟೆಹರಾನ್ (ಎಪಿ): ಪಾಕಿಸ್ತಾನದಿಂದ ಇರಾಕ್‌ಗೆ ಶಿಯಾ ಯಾತ್ರಾರ್ಥಿಗಳನ್ನು ಕರೆದೊಯ್ಯುತ್ತಿದ್ದ ಬಸ್‌ವೊಂದು ಕೇಂದ್ರ ಇರಾನ್‌ನಲ್ಲಿ ಅಪಘಾತಕ್ಕೀಡಾದ ಪರಿಣಾಮ ಕನಿಷ್ಠ 28 ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ.

ಮಂಗಳವಾರ ರಾತ್ರಿ ಯಾಝುದ್ ಪ್ರಾಂತ್ಯದಲ್ಲಿ ಅವಘಡ ನಡೆದಿದೆ. ಘಟನೆಯಲ್ಲಿ 23 ಮಂದಿ ಗಾಯಗೊಂಡಿದ್ದು, ಈ ಪೈಕಿ 14 ಮಂದಿಯ ಸ್ಥಿತಿ ಗಂಭೀರವಾಗಿದೆ. ಬಸ್‌ನಲ್ಲಿ ಇದ್ದವರೆಲ್ಲರೂ ಪಾಕಿಸ್ತಾನದವರು ಎಂದು ಸ್ಥಳೀಯ ತುರ್ತು ಸೇವೆ ಅಧಿಕಾರಿ ಮಹಮ್ಮದ್ ಆಲಿ ಮಾಲೆಕ್‌ಜಾದೇಹ್ ತಿಳಿಸಿದ್ದಾರೆ.

'ಬಸ್‌ನ ಬ್ರೇಕ್ ವಿಫಲವಾಗಿರುವುದು ಮತ್ತು ಚಾಲಕನ ನಿರ್ಲಕ್ಷ್ಯದಿಂದ ಅವಘಡ ಸಂಭವಿಸಿದೆ' ಎಂದು ಅವರು ಹೇಳಿದ್ದಾರೆ.

ಬಾಂಗ್ಲಾ ಸಾಮಾನ್ಯ ಪರಿಸ್ಥಿತಿಗೆ ಮರಳುತ್ತಿದೆ: ಶಫಿಕ್ ಆಲಂ

ಢಾಕಾ(ಪಿಟಿಐ): 'ಬಾಂಗ್ಲಾದೇಶವು ಕ್ರಮೇಣ ಸಾಮಾನ್ಯ ಪರಿಸ್ಥಿತಿಗೆ ಮರಳುತ್ತಿದೆ. ಆದರೆ, ಕೆಲವು ಸವಾಲುಗಳು ಎದುರಲ್ಲಿವೆ' ಎಂದು ಮಧ್ಯಂತರ ಸರ್ಕಾರದ ಮುಖ್ಯ ಸಲಹೆಗಾರರ ಮಾಧ್ಯಮ ಕಾರ್ಯದರ್ಶಿ ಶಫಿಕ್ ಆಲಂ ಬುಧವಾರ ಹೇಳಿದರು.


ಪರಿಸ್ಥಿತಿಯು ಯಥಾಸ್ಥಿತಿಗೆ ಮರಳಿದ ನಂತರ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗಳನ್ನು ನಡೆಸಲಾಗುವುದು ಎಂದು ಅವರು ತಿಳಿಸಿದರು.

ಬ್ರಿಟನ್ ಹೈಕಮಿಷನರ್, ಬಾಂಗ್ಲಾದಲ್ಲಿನ ಜಪಾನ್ ರಾಯಭಾರಿ ಇಬ್ಬರೂ ಮುಖ್ಯ ಸಲಹೆಗಾರರನ್ನು ಭೇಟಿ ಮಾಡಿದ್ದು, ದೇಶವನ್ನು ಮರಳಿ ಕಟ್ಟಲು ಬೇಕಾದ ಸಹಕಾರ ನೀಡುವುದಾಗಿ ಸೂಚಿಸಿದ್ದಾರೆ ಎಂದೂ ತಿಳಿಸಿದರು.

ಮಕ್ಕಳ ನಗ್ನ ಚಿತ್ರ ಸೆರೆಹಿಡಿದ ಆರೋಪ

ಭಾರತೀಯ ವೈದ್ಯನ ಬಂಧನ

ವಾಷಿಂಗ್ಟನ್ (ಪಿಟಿಐ): ಅಮೆರಿಕದಲ್ಲಿ ಹಲವು ವರ್ಷಗಳಿಂದ ಮಕ್ಕಳು, ಮಹಿಳೆಯರ ನಗ್ನ ಚಿತ್ರಗಳನ್ನು ತೆಗೆಯುತ್ತಿದ್ದ ಹಾಗೂ ವಿಡಿಯೊ ರೆಕಾರ್ಡ್ ಮಾಡುತ್ತಿದ್ದ ಆರೋಪದಡಿ ಭಾರತೀಯ ವೈದ್ಯನೊಬ್ಬನನ್ನು ಆ. 8ರಂದು ಬಂಧಿಸಲಾಗಿದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ.



ಮಿಚಿಗನ್ ರಾಜ್ಯದ ಓಕ್ಲೆಂಡ್ ಕೌಂಟಿಯ ರೋಚೆಸ್ಟರ್ ಹಿಲ್ಸ್‌ನ ನಿವಾಸಿ ಓಮೈರ್ ಏಜಾಜ್ (40) ಬಂಧಿತ ವೈದ್ಯ.

ಏಜಾಜ್ ಪತ್ನಿಯೇ ಅಪರಾಧಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪೊಲೀಸರಿಗೆ ಒದಗಿಸಿದ್ದಾರೆ. ಲೈಂಗಿಕ ಅಪರಾಧ ನಡೆದಿರುವುದನ್ನು ಖಚಿತಪಡಿಸಿಕೊಂಡ ಬಳಿಕವೇ ಪೊಲೀಸರು ಈತನನ್ನು ಬಂಧಿಸಿದ್ದು, ಕಂಪ್ಯೂಟರ್, ಫೋನ್ ಸೇರಿ 15 ಉಪಕರಣಗಳನ್ನು ವಶಪಡಿಸಿಕೊಂಡಿದ್ದಾರೆ.

ಈತನಿಂದ ವಶಪಡಿಸಿಕೊಂಡ ಹಾರ್ಡ್‌ಡ್ರೈವ್ ಒಂದರಲ್ಲಿ 13 ಸಾವಿರ ವಿಡಿಯೊಗಳಿವೆ. ಇವನ್ನು ಕ್ಲೌಡ್ ಸ್ಟೋರೇಜ್‌ಗೆ ಅಪ್‌ಲೋಡ್ ಮಾಡಿರಬಹುದು ಎಂದು ಶಂಕಿಸಲಾಗಿದೆ.

ಆಸ್ಪತ್ರೆಯ ಕೊಠಡಿಗಳು, ಸ್ನಾನಗೃಹ, ಶೌಚಾಲಯ ಸೇರಿದಂತೆ ತನ್ನ ಮನೆಯ ವಿವಿಧೆಡೆ ಈತ ರಹಸ್ಯ ಕ್ಯಾಮೆರಾಗಳನ್ನು ಅಳವಡಿಸಿದ್ದ. ಎರಡು ವರ್ಷದ ಹೆಣ್ಣು ಮಕ್ಕಳ ನಗ್ನ ಚಿತ್ರಗಳನ್ನೂ ತೆಗೆದಿದ್ದಾನೆ ಎಂದು 'ಫಾಕ್ಸ್ ನ್ಯೂಸ್' ವರದಿ ಮಾಡಿದೆ.

ಪ್ರಜ್ಞಾಹೀನ ಅಥವಾ ನಿದ್ರಿಸುತ್ತಿದ್ದ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದು, ಈತನ ಅಪರಾಧ ಕೃತ್ಯಗಳ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲ. ಪತ್ತೆಯಾಗಿರುವ ಅಪಾರ ಸಂಖ್ಯೆಯ ವಿಡಿಯೊಗಳನ್ನು ತನಿಖಾಧಿಕಾರಿಗಳು ಪರಿಶೀಲಿಸುತ್ತಿದ್ದು, ತನಿಖೆಗೆ ತಿಂಗಳುಗಳೇ ಬೇಕಿವೆ.

ಸಂತ್ರಸ್ತರ ಸಂಖ್ಯೆ ಹೆಚ್ಚಾಗಬಹುದು ಎಂದು ಓಕ್ಲೆಂಡ್ ಕೌಂಟಿಯ ಶರೀಫ್ ಮೈಕ್ ಬೌಚರ್ಡ್ ಮಂಗಳವಾರ ಮಾಹಿತಿ ನೀಡಿದ್ದಾರೆ.

ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ • ಮಿಂಚಿದ ಲವನೀತ್, ಅಭಿಷೇಕ್ ಪ್ರಭಾಕರ್

ಗುಲ್ಬರ್ಗಕ್ಕೆ ನಿರಾಯಾಸ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುಲ್ಬರ್ಗ ಮಿಸ್ಟಿಕ್ಸ್ ತಂಡ, ಕೆಎಸ್‌ಸಿಎ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿ ಪಂದ್ಯದಲ್ಲಿ ಬುಧವಾರ ಶಿವಮೊಗ್ಗ ಲಯನ್ಸ್ ತಂಡವನ್ನು 9 ವಿಕೆಟ್‌ಗಳಿಂದ ನಿರಾಯಾಸವಾಗಿ ಸೋಲಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಲಯನ್ಸ್ ತಂಡ, ಗುಲ್ಬರ್ಗದ ವೇಗದ ದಾಳಿಗೆ ಸಿಲುಕಿ 18.1 ಓವರುಗಳಲ್ಲಿ 126 ರನ್‌ಗಳಿಗೆ ಕುಸಿಯಿತು. ಆರಂಭ ಆಟಗಾರ ಹಾಗೂ ವಿಕೆಟ್ ಕೀಪರ್ ಲವನೀತ್ ಸಿಸೋಡಿಯಾ ಆಕ್ರಮಣಕಾರಿಯಾಗಿ ಆಡಿ ಅಜೇಯ 62 ರನ್ (35ಎ, 4x5, 6x5) ಗಳಿಸುವ ಮೂಲಕ ಮಿಸ್ಟಿಕ್ಸ್ ತಂಡ 11.4 ಓವರುಗಳಲ್ಲಿ 1 ವಿಕೆಟ್‌ಗೆ 127 ರನ್ ಗಳಿಸಿ ಸುಲಭ ಗೆಲುವು ದಾಖಲಿಸಿತು.

ಬೌಲಿಂಗ್‌ನಲ್ಲಿ 22 ರನ್ನಿಗೆ 3 ವಿಕೆಟ್ ಪಡೆದ ಗುಲ್ಬರ್ಗ ತಂಡದ ಅಭಿಷೇಕ್ ಪ್ರಭಾಕರ್ ನಂತರ 14 ಎಸೆತಗಳಲ್ಲಿ ಅಜೇಯ 31 ರನ್ ಸಿಡಿಸಿ ಪಂದ್ಯದ ಆಟಗಾರ ಗೌರವಕ್ಕೆ ಪಾತ್ರರಾದರು.

ಲವನೀತ್ ಮತ್ತು ನಾಯಕ ದೇವದತ್ತ ಪಡಿಕ್ಕಲ್ (27, 24ಎ) ಮೊದಲ ವಿಕೆಟ್‌ಗೆ ಕೇವಲ 7.1 ಓವರುಗಳಲ್ಲಿ 77 ರನ್ ಸೇರಿಸಿ ಗುಲ್ಬರ್ಗ ತಂಡದ ವಿಜಯಕ್ಕೆ ಭದ್ರಬುನಾದಿ ಹಾಕಿಕೊಟ್ಟರು.

ಪಡಿಕ್ಕಲ್ ನಿರ್ಗಮಿಸಿದ ನಂತರ ಅಭಿಷೇಕ್ ಪ್ರಭಾಕರ್ ಅಜೇಯ 31 (14ಎ, 4x5, 6x1) ರನ್ ಹೊಡೆದರು. ಮುರಿಯದ ಎರಡನೇ ವಿಕೆಟ್‌ಗೆ ಲವನೀತ್ ಮತ್ತು ಅಭಿಷೇಕ್ ಕೇವಲ 21 ಎಸೆತಗಳಲ್ಲಿ 55 ರನ್‌ಗಳ ಜೊತೆಯಾಟವಾಡಿದರು.

ಇದಕ್ಕೆ ಮೊದಲು ಅಭಿಷೇಕ್ ಪ್ರಭಾಕರ್ ಮತ್ತು ಯಶೋವರ್ಧನ್ ಪರಂತಾಪ್ ಅವರ ವೇಗದ ದಾಳಿಗೆ ಸಿಲುಕಿದ ಲಯನ್ಸ್ ತಂಡ 126 ರನ್‌ಗಳಿಗೆ ಕುಸಿಯಿತು. ಇಬ್ಬರೂ ಬೌಲರ್‌ಗಳು ತಲಾ 3 ವಿಕೆಟ್ ಪಡೆದರು. ಅಭಿನವ್ ಮನೋಹರ್ 36 ಎಸೆತಗಳಲ್ಲಿ 55 ರನ್ ಗಳಿಸಿದ್ದರಿಂದ ತಂಡ ನೂರರ ಗಡಿದಾಟಲು ಸಾಧ್ಯವಾಯಿತು.

ಸ್ಕೋರುಗಳು: ಶಿವಮೊಗ್ಗ ಲಯನ್ಸ್: 18.1 ಓವರುಗಳಲ್ಲಿ 126 (ಮೋಹಿತ್ ಬಿ.ಎ. 13, ಧ್ರುವ್ ಪ್ರಭಾಕರ್ 15, ಅಭಿನವ್ ಮನೋಹರ್ 55; ಮೋನಿಶ್ ರೆಡ್ಡಿ 21ಕ್ಕೆ1, ರಿತೇಶ್ ಭಟ್ಕಳ್ 20ಕ್ಕೆ1, ಪೃಥ್ವಿರಾಜ್ ಶೇಖಾವತ್ 7ಕ್ಕೆ1, ಯಶೋವರ್ಧನ್ ಪರಂತಾಪ್ 24ಕ್ಕೆ3, ಅಭಿಷೇಕ್ ಪ್ರಭಾಕರ್ 22ಕ್ಕೆ3); **ಗುಲ್ಬರ್ಗ ಮಿಸ್ಟಿಕ್ಸ್:** 11.4 ಓವರುಗಳಲ್ಲಿ 1 ವಿಕೆಟ್‌ಗೆ 127 (ಲವನೀತ್ ಸಿಸೋಡಿಯಾ ಔಟಾಗದೇ 62, ದೇವದತ್ತ ಪಡಿಕ್ಕಲ್ 27, ಅಭಿಷೇಕ್ ಪ್ರಭಾಕರ್ ಔಟಾಗದೇ 31). **ಮೈಸೂರು ವಾರಿಯರ್ಸ್:** 19.3 ಓವರ್‌ಗಳಲ್ಲಿ 165 (ಕಾರ್ತಿಕ್ ಎಸ್.ಯು. 34, ಕರುಣ್ ನಾಯರ್ 66, ಕುಮಾರ್ ಎಲ್.ಆರ್. 39ಕ್ಕೆ 3, ಮನ್ವಂತ್ ಕುಮಾರ್ ಎಲ್. 34ಕ್ಕೆ 3, ಕೆ.ಸಿ. ಕಾರಿಯಪ್ಪ 26ಕ್ಕೆ 2). **ಹುಬ್ಬಳ್ಳಿ ಟೈಗರ್ಸ್:** 17 ಓವರ್‌ಗಳಲ್ಲಿ 110 (ಮೊಹಮ್ಮದ್ ತಹಾ 22; ಜೆ.ಸುಚಿತ್ 14ಕ್ಕೆ 4, ವಿದ್ಯಾಧರ ಪಾಟೀಲ 21ಕ್ಕೆ 2, ಕೆ. ಗೌತಮ್ 22ಕ್ಕೆ 2). ಪಂದ್ಯದ ಆಟಗಾರ: ಜೆ ಸುಚಿತ್


ಗುಲ್ಬರ್ಗ ಮಿಸ್ಟಿಕ್ಸ್ ತಂಡದ ಲವನೀತ್ ಸಿಸೋಡಿಯಾ

ತಂಡಗಳು	ಪಂದ್ಯ	ಗೆಲುವು	ಸೋಲು	ಅಂಕ	ನೆಟ್ ರನ್‌ರೇಟ್
ಹುಬ್ಬಳ್ಳಿ ಟೈಗರ್ಸ್	5	4	1	8	-0.013
ಬೆಂಗಳೂರು ಬ್ಲಾಸ್ಟರ್ಸ್	4	3	1	6	1.392
ಮೈಸೂರು ವಾರಿಯರ್ಸ್	5	3	2	6	0.958
ಗುಲ್ಬರ್ಗ ಮಿಸ್ಟಿಕ್ಸ್	5	2	2	5	-0.192
ಮಂಗಳೂರು ಡ್ರ್ಯಾಗನ್ಸ್	4	1	2	3	-0.020
ಶಿವಮೊಗ್ಗ ಲಯನ್ಸ್	5	0	5	0	-2.568

ಮೈಸೂರು ವಾರಿಯರ್ಸ್‌ಗೆ ಸುಲಭ ಜಯ

ನಾಯಕ ಕರುಣ್ ನಾಯರ್ (66;36ಎ) ಅವರ ಅರ್ಧಶತಕ ಮತ್ತು ಜೆ.ಸುಚಿತ್ (14ಕ್ಕೆ 4) ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ಬಲದಿಂದ ದಿನದ ಮತ್ತೊಂದು ಪಂದ್ಯದಲ್ಲಿ ಮೈಸೂರು ವಾರಿಯರ್ಸ್ ತಂಡವು ಹುಬ್ಬಳ್ಳಿ ಟೈಗರ್ಸ್ ವಿರುದ್ಧ 55 ರನ್‌ಗಳ ಸುಲಭ ಜಯ ಸಾಧಿಸಿತು.

ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಮೈಸೂರು ತಂಡವು 19.3 ಓವರ್‌ಗಳಲ್ಲಿ 165 ರನ್‌ಗೆ ಆಲೌಟ್ ಆಯಿತು. ಕುಮಾರ್ ಎಲ್.ಆರ್. ಮತ್ತು ಮನ್ವಂತ್ ಕುಮಾರ್ ಎಲ್. ತಲಾ ಮೂರು ವಿಕೆಟ್ ಪಡೆದು ಮಿಂಚಿದರು.

ಹುಬ್ಬಳ್ಳಿ ತಂಡವು 17 ಓವರ್‌ಗಳಲ್ಲಿ 110 ರನ್ ಗಳಿಸಿ ಹೋರಾಟವನ್ನು ಮುಗಿಸಿತು. ಮೊಹಮ್ಮದ್ ತಹಾ (22) ಗರಿಷ್ಠ ಸ್ಕೋರರ್ ಎನಿಸಿಕೊಂಡರು. ವಿದ್ಯಾಧರ ಪಾಟೀಲ ಮತ್ತು ಕೆ. ಗೌತಮ್ ತಲಾ ಎರಡು ವಿಕೆಟ್ ಪಡೆದರು.

ನಿಪೊಮ್‌ನಿಷಿ ಜತೆ ಗುಕೇಶ್ ‘ಡ್ರಾ’

ಸಿಂಕ್ವೆಫೀಲ್ಡ್ ಕಪ್ ಚೆಸ್ • ಎಲ್ಲ ಐದೂ ಪಂದ್ಯ ಸಮಬಲ

ಸೇಂಟ್ ಲೂಯಿ (ಅಮೆರಿಕ), (ಪಿಟಿಐ): ವಿಶ್ವ ಚಾಂಪಿಯನ್‌ಷಿಪ್ ಪಟ್ಟಕ್ಕೆ ಚಾಲೆಂಜರ್ ಆಗಿರುವ ಭಾರತದ ಡಿ.ಗುಕೇಶ್, ಸಿಂಕ್ವೆಫೀಲ್ಡ್ ಕಪ್ ಚೆಸ್ ಟೂರ್ನಿಯ ಎರಡನೇ ಸುತ್ತಿನಲ್ಲಿ ರಷ್ಯಾದ ಇಯಾನ್ ನಿಪೊಮ್‌ನಿಷಿ ಜೊತೆ ‘ಡ್ರಾ’ ಮಾಡಿಕೊಂಡರು. ಎರಡನೇ ಸುತ್ತಿನ ಎಲ್ಲ ಐದೂ ಪಂದ್ಯಗಳು ಮಂಗಳವಾರ ‘ಡ್ರಾ’ ಆದವು.


ಗುಕೇಶ್

ಮೊದಲ ಸುತ್ತಿನಲ್ಲಿ ಹಾಲಿ ವಿಶ್ವ ಚಾಂಪಿಯನ್, ಚೀನಾದ ಡಿಂಗ್ ಲಿರೆನ್ ಜೊತೆ ಸುಲಭವಾಗಿ ‘ಡ್ರಾ’ ಮಾಡಿಕೊಂಡಿದ್ದ ಗುಕೇಶ್ ಅವರಿಗೆ ಎರಡನೇ ಸುತ್ತಿನ ಪಂದ್ಯ ಭಿನ್ನರೀತಿಯದಾಗಿತ್ತು.

ಪಂದ್ಯದ ಬಹುತೇಕ ಭಾಗ ಅವರು, ರಷ್ಯಾದ ಎದುರಾಳಿ ವಿರುದ್ಧ ಕೊಂಚಮಟ್ಟಿಗೆ ಮೇಲುಗೈ ಸಾಧಿಸಿದ್ದರು. ಆದರೆ ಎರಡು ಬಾರಿ ಕ್ಯಾಂಡಿಡೇಟ್ಸ್ ಚಾಂಪಿಯನ್ ಆಗಿರುವ ನಿಪೊಮ್‌ನಿಷಿ ಸುಲಭವಾಗಿ ಬಿಟ್ಟುಕೊಡಲಿಲ್ಲ. ಕರಾರುವಾಕ್ ರಕ್ಷಣೆ ಮತ್ತು ಪ್ರತಿದಾಳಿಗಳ ಮೂಲಕ ಸೋಲುತಪ್ಪಿಸಿಕೊಂಡರು. ಪಾನ್ (ಕಾಲಾಳು), ನೈಟ್ (ಕುದುರೆ) ಎಂಡ್‌ಗೇಮ್ ಕಂಡ ಪಂದ್ಯ 60 ನಡೆಗಳಲ್ಲಿ ಡ್ರಾ ಆಯಿತು.

ಭಾರತದ ಇನ್ನೊಬ್ಬ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ಅವರು, ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ ಜೊತೆ ‘ಡ್ರಾ’ ಮಾಡಿಕೊಂಡರು.

ಮೊದಲ ಸುತ್ತಿನಲ್ಲಿ ಜಯಗಳಿಸಿದ್ದ ಫ್ರಾನ್ಸ್‌ನ ಅಲಿರೇಜಾ ಫಿರೋಜ್ (1.5) ಉಳಿದವರಿಗಿಂತ ಅರ್ಧ ಪಾಯಿಂಟ್ ಮುನ್ನಡೆ ಸಾಧಿಸಿದ್ದಾರೆ. ಎಂಟು ಆಟಗಾರರು ತಲಾ ಒಂದು ಪಾಯಿಂಟ್ಸ್ ಹೊಂದಿದ್ದಾರೆ. ಮೊದಲ ಸುತ್ತಿನಲ್ಲಿ ಅಲಿರೇಜಾ ಅವರಿಗೆ ಸೋತಿದ್ದ ಕರುವಾನ ಅರ್ಧ ಪಾಯಿಂಟ್ಸ್ ಹೊಂದಿದ್ದು ಕೊನೆಯ ಸ್ಥಾನದಲ್ಲಿದ್ದಾರೆ. ಟೂರ್ನಿಯು 9 ಸುತ್ತುಗಳನ್ನು ಹೊಂದಿದೆ.

ಇರಾನ್ ಮೂಲದ ಅಲಿರೇಜಾ ಎರಡನೇ ಸುತ್ತಿನಲ್ಲಿ ಉಜ್ಬೇಕಿಸ್ತಾನದ ನಾಡಿರ್ಬೆಕ್ ಅಬ್ದುಸತ್ತಾರೋವ್ ಜೊತೆ ‘ಡ್ರಾ’ ಮಾಡಿಕೊಂಡರು. ಡಚ್ ಆಟಗಾರ ಅನೀಶ್ ಗಿರಿ ಕೂಡ ಚೀನಾದ ಡಿಂಗ್ ಲಿರೆನ್ ಜೊತೆ ‘ಡ್ರಾ’ ಒಪ್ಪಂದಕ್ಕೆ ಸಹಿಹಾಕಿದರು.

ಅಮೆರಿಕದ ಆಟಗಾರರ ವ್ಯವಹಾರವಾಗಿದ್ದ ದಿನದ ಇನ್ನೊಂದು ಪಂದ್ಯದಲ್ಲೂ ನಿರ್ಣಾಯಕ ಫಲಿತಾಂಶ ಬರಲಿಲ್ಲ. ವೆಸ್ಲಿ ಸೊ ಅವರು ಕರುವಾನ ಜೊತೆ ‘ಕದನ ವಿರಾಮ’ಕ್ಕೆ ಸಹಿ ಮಾಡಿದರು.

₹2.93 ಕೋಟಿ ಬಹುಮಾನ ಮೊತ್ತದ ಈ ಟೂರ್ನಿ ಗ್ರ್ಯಾಂಡ್ ಚೆಸ್ ಸರಣಿಯ ಅಂತಿಮ ಟೂರ್ನಿಯಾಗಿದೆ.

ರಾಷ್ಟ್ರೀಯ ಚೆಸ್: ಮುನ್ನಡೆ ಹಂಚಿಕೊಂಡ ಮೂವರು

ಗುರುಗ್ರಾಮ: ಅಗ್ರ ಶ್ರೇಯಾಂಕದ ಸೂರ್ಯಶೇಖರ ಗಂಗೂಲಿ, ಒಂಬತ್ತನೇ ಶ್ರೇಯಾಂಕದ ಅರಣ್ಯಕ್ ಘೋಷ್ ಮತ್ತು 16ನೇ ಶ್ರೇಯಾಂಕದ ನೀಲಾಶ್ ಸಹ 61ನೇ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನ ಐದನೇ ಸುತ್ತಿನ ನಂತರ ತಲಾ ಐದು ಪಾಯಿಂಟ್‌ಗಳೊಂದಿಗೆ ಮುನ್ನಡೆ ಹಂಚಿಕೊಂಡಿದ್ದಾರೆ.

ಬುಧವಾರ ನಡೆದ ಮೊದಲ ಬೋರ್ಡ್‌ನ ಪಂದ್ಯದಲ್ಲಿ ಪಿಎಸ್‌ಸಿಬಿಯ ಗಂಗೂಲಿ, ತಮ್ಮದೇ ತಂಡದ ದೀಪ್‌ಸೇನ್ ಗುಪ್ತಾ (4) ಅವರನ್ನು ಸೋಲಿಸಿದರು. ಮೂರನೇ ಬೋರ್ಡ್‌ನಲ್ಲಿ ರೈಲ್ವೇಸ್‌ನ ನೀಲಾಶ್ ಸಹ, ಮಹಾರಾಷ್ಟ್ರದ ಸಂಕಲ್ಪ್ ಗುಪ್ತಾ (4) ಅವರನ್ನು ಮಣಿಸಿದರು. ರೈಲ್ವೇಸ್‌ನ ಇನ್ನೊಬ್ಬ ಆಟಗಾರ ಅರಣ್ಯಕ್ ಘೋಷ್, ಪಿಎಸ್‌ಸಿಬಿ ತಂಡದ ಎಂ.ಆರ್. ವೆಂಕಟೇಶ್ (4) ಅವರನ್ನು ಪರಾಭವಗೊಳಿಸಿದರು. ಎರಡನೇ ಬೋರ್ಡ್‌ನಲ್ಲಿ ರೈಲ್ವೇಸ್‌ನ ಸಯಾಂತನ್ ದಾಸ್ (4.5) ಮತ್ತು ಆಂಧ್ರ ಪ್ರದೇಶದ ಕಾರ್ತಿಕ್ ವೆಂಕಟರಾಮನ್ (4.5) ನಡುವಣ ಪಂದ್ಯ ‘ಡ್ರಾ’ ಆಯಿತು. ಗ್ರ್ಯಾಂಡ್ ಮಾಸ್ಟರ್ ದೀಪ್ತಾಯನ್ ಘೋಷ್ (4.5) ಅವರು ತೆಲಂಗಾಣದ ಜಾಹಿದ್ ರೈಹಾನ್ (4) ಅವರನ್ನು ಸೋಲಿಸಿದರು.

ಕರ್ನಾಟಕದ ಐಎಂ ವಿಯಾನಿ ಡಿಕುನ್ಹಾ (4) ಮತ್ತು ರೈಲ್ವೇಸ್‌ನ ಜಿಎಂ ಎನ್.ಆರ್.ವಿಘ್ನೇಶ್ (4) ನಡುವಣ ಪಂದ್ಯ ಡ್ರಾ ಆಯಿತು. ಕರ್ನಾಟಕದ ಎ.ಬಾಲಕಿಶನ್ (4), ಹರಿಯಾಣದ ಪೃಥ್ವಿ ಶರ್ಮಾ (3) ಅವರನ್ನು ಮಣಿಸಿದರು. ಜಿಎಂ ಎಂ.ಆರ್.ಲಲಿತ್‌ಬಾಬು (4), ಕರ್ನಾಟಕದ ಶಾನ್ ಡಿ.ಸಿಕ್ವೇರಾ (3) ಅವರಿಗೆ ಸೋಲುಣಿಸಿದರು.

ಪ್ಯಾರಾಲಿಂಪಿಕ್ಸ್: ಐದು ಚಿನ್ನ ಸೇರಿ ಡಜನ್ ಪದಕಗಳ ನಿರೀಕ್ಷೆ

ಪ್ಯಾರಿಸ್‌ನತ್ತ ಭಾರತದ ಮೊದಲ ತಂಡ

ನವದೆಹಲಿ (ಪಿಟಿಐ): ಪ್ಯಾರಿಸ್ ಹವಾಮಾನಕ್ಕೆ ಒಗ್ಗಿಕೊಳ್ಳುವ ಉದ್ದೇಶದಿಂದ ಜಾವೆಲಿನ್ ತಾರೆ ಸುಮಿತ್ ಅಂಟಿಲ್ ಅವರನ್ನು ಒಳಗೊಂಡ ಭಾರತದ ಅಥ್ಲೀಟುಗಳ ಮೊದಲ ತಂಡ ಪ್ಯಾರಾಲಿಂಪಿಕ್ಸ್ ಕ್ರೀಡೆಗಳಲ್ಲಿ ಭಾಗಿಯಾಗಲು ಒಂದು ವಾರ ಮೊದಲೇ ಫ್ರಾನ್ಸ್ ರಾಜಧಾನಿಗೆ ತೆರಳಿತು. ಅಥ್ಲೀಟುಗಳ ತಂಡ ಐದು ಚಿನ್ನ ಸೇರಿ ಡಜನ್ ಪದಕಗಳ ಮೇಲೆ ಕಣ್ಣಿಟ್ಟಿದೆ.

16 ಅಥ್ಲೀಟುಗಳ ತಂಡ ಪ್ಯಾರಿಸ್‌ನ ಹೋಟೆಲ್‌ಗಳಲ್ಲಿ ವಾಸ್ತವ್ಯ ಹೂಡಲಿದ್ದು, ಕ್ರೀಡೆಗಳ ಉದ್ಘಾಟನಾ ಸಮಾರಂಭಕ್ಕೆ ಮೂರು ದಿವಸ ಮೊದಲು ಕ್ರೀಡಾ ಗ್ರಾಮಕ್ಕೆ ತೆರಳಲಿದೆ.

ಪ್ಯಾರಾಲಿಂಪಿಕ್ಸ್ ಕ್ರೀಡೆಗಳಲ್ಲಿ ಚಿನ್ನ ಉಳಿಸಿಕೊಂಡ ಭಾರತದ ಮೊದಲ ಕ್ರೀಡಾಪಟು ಎಂಬ ಹಿರಿಮೆಗೆ ಯತ್ನಿಸುತ್ತಿರುವ ಸುಮಿತ್ ಫ್ರಾನ್ಸ್ ರಾಜಧಾನಿಗೆ ಹತ್ತಿರದ ತಾಣದಲ್ಲಿ ಅಭ್ಯಾಸದಲ್ಲಿ ತೊಡಗಲಿದ್ದಾರೆ.

‘ಸುಮಿತ್ ಅಂಟಿಲ್ ಮತ್ತು ಕೆಲವು ಪ್ಯಾರಾ ಅಥ್ಲೀಟುಗಳು ನೆಲ್ಸನ್ ಮಂಡೇಲಾ ಕ್ರೀಡಾ ಕಾಂಪ್ಲೆಕ್ಸ್‌ನಲ್ಲಿ ತರಬೇತಿ ಪಡೆದುಕೊಳ್ಳಲಿದ್ದಾರೆ. ನಂತರ ಕ್ರೀಡಾ ಗ್ರಾಮಕ್ಕೆ ವಾಸ್ತವ್ಯ ಬದಲಾಯಿಸುವರು’ ಎಂದು ಪ್ಯಾರಾ ಅಥ್ಲೆಟಿಕ್ಸ್ ಹೆಡ್ ಕೋಚ್ ಸತ್ಯನಾರಾಯಣ ಅವರು ಸುದ್ದಿಸಂಸ್ಥೆಗೆ ತಿಳಿಸಿದರು.

ಸ್ಟೇಡ್ ಡಿ ಫ್ರಾನ್ಸ್ ಕ್ರೀಡಾಂಗಣದಿಂದ 5 ಕಿ.ಮೀ. ದೂರದಲ್ಲಿರುವ ನೆಲ್ಸನ್ ಮಂಡೇಲಾ ಕ್ರೀಡಾ ಕಾಂಪ್ಲೆಕ್ಸ್‌ನಲ್ಲಿ ಅಥ್ಲೆ ಟಿಕ್ಸ್, ರಗ್ಬಿ, ಟೆನಿಸ್, ವೀಲ್‌ಚೇರ್ ಟೆನಿಸ್ ಮತ್ತು ಈಜುಕೊಳದ ವ್ಯವಸ್ಥೆಯಿದೆ. ಪ್ಯಾರಾಲಿಂಪಿಕ್ಸ್ ಆಗಸ್ಟ್ 30 ರಿಂದ ಸೆ.8ರವರೆಗೆ ನಡೆಯಲಿದೆ. ಸ್ಟೇಡ್ ಡಿ ಫ್ರಾನ್ಸ್‌ನಲ್ಲಿ 8ರಂದು ಸಮಾರೋಪ ನಡೆಯಲಿದೆ.

‘ಪ್ಯಾರಾ ಅಥ್ಲೆಟಿಕ್ಸ್ ತಂಡದಿಂದ ಐದು ಚಿನ್ನ ಸೇರಿ ಒಟ್ಟು 12 ಪದಕಗಳನ್ನು ಗೆಲ್ಲುವ ಗುರಿ ಹೊಂದಿದ್ದೇವೆ. ಇದು ಪ್ಯಾರಾಲಿಂಪಿಕ್ಸ್‌ನಲ್ಲಿ ನಮ್ಮ ಅತ್ಯುತ್ತಮ ಸಾಧನೆಯಾಗಲಿದೆ’ ಎಂದು ಅವರು ಹೇಳಿದರು.

ಜಪಾನ್‌ನ ಕೋಬೆಯಲ್ಲಿ ಈ ವರ್ಷದ ಮೇ ತಿಂಗಳಲ್ಲಿ ನಡೆದ ವಿಶ್ವ ಪ್ಯಾರಾ ಅಥ್ಲೆಟಿಕ್ಸ್‌ನಲ್ಲಿ ಭಾರತದ ಅಥ್ಲೀಟುಗಳು ಆರು ಚಿನ್ನ, ಐದು ಬೆಳ್ಳಿ ಮತ್ತು ಆರು ಕಂಚಿನ ಪದಕ ಗೆದ್ದುಕೊಂಡಿದ್ದರು. ಪದಕ ಪಟ್ಟಿಯಲ್ಲಿ ಆರನೇ ಸ್ಥಾನ ಪಡೆದಿದ್ದು ಇದುವರೆಗಿನ ಭಾರತದ ಶ್ರೇಷ್ಠ ಸಾಧನೆಯಾಗಿತ್ತು. ಹೀಗಾಗಿ ಸತ್ಯನಾರಾಯಣ ಅವರು ತಂಡದಿಂದ ಉತ್ತಮ ಸಾಧನೆ ನಿರೀಕ್ಷಿಸಿದ್ದಾರೆ.

ಸುಮಿತ್ ಅಂಟಿಲ್ (ಪುರುಷರ ಜಾವೆಲಿನ್ ಎಫ್64), ದೀಪ್ತಿ ಜೀವಾಂಜಿ (ಮಹಿಳೆಯರ 400 ಮೀ. ಟಿ20), ಸಚಿನ್ ಖಿಲಾರಿ (ಪುರುಷರ ಶಾಟ್‌ಪಟ್ ಎಫ್46), ಏಕ್ತಾ ಭುವನ್ (ಮಹಿಳೆಯರ ಕ್ಲಬ್ ಥ್ರೊ ಎಫ್51)(, ಸಿಮ್ರಾನ್ ಶರ್ಮ (ಮಹಿಳೆಯರ 200 ಮೀ. ಟಿ12) ಮತ್ತು ಮರಿಯಪ್ಪನ್ ತಂಗವೇಲು (ಪುರುಷರ ಹೈಜಂಪ್ ಟಿ42) ಚಿನ್ನ ಗೆದಿದ್ದರು.

ಟೋಕಿಯೊ ಪ್ಯಾರಾ ಕ್ರೀಡೆಗಳಲ್ಲಿ ಭಾರತದ ಸ್ಪರ್ಧಿಗಳು ದಾಖಲೆಯ 19 ಪದಕಗಳನ್ನು (5 ಚಿನ್ನ, 8 ಬೆಳ್ಳಿ ಮತ್ತು 6 ಕಂಚು) ಗೆದ್ದು ಗಮನ ಸೆಳೆದಿದ್ದರು.

ಸಿಯೆಟ್ ಅವಾರ್ಡ್ಸ್: ದ್ರಾವಿಡ್, ರೋಹಿತ್‌ಗೆ ಗೌರವ

ಮುಂಬೈ (ಪಿಟಿಐ): ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರು ಬುಧವಾರ ಇಲ್ಲಿ ನಡೆದ ಸಿಯೆಟ್ ಕ್ರಿಕೆಟ್ ರೇಟಿಂಗ್ ಅವಾರ್ಡ್ಸ್ ಸಮಾರಂಭದಲ್ಲಿ ‘ಅಂತರರಾಷ್ಟ್ರೀಯ ಪುರುಷರ ವರ್ಷದ ಕ್ರಿಕೆಟಿಗ’ ಗೌರವಕ್ಕೆ ಪಾತ್ರರಾದರು. ಭಾರತ ತಂಡದ ಮಾಜಿ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರಿಗೆ ‘ಜೀವಮಾನದ ಸಾಧನೆ ಪ್ರಶಸ್ತಿ’ ಪ್ರದಾನ ಮಾಡಲಾಯಿತು.

ವಿರಾಟ್ ಕೊಹ್ಲಿ ‘ವರ್ಷದ ಏಕದಿನ ಬ್ಯಾಟರ್’ ಪುರಸ್ಕಾರಕ್ಕೆ ಪಾತ್ರರಾದರೆ, ವಿಶ್ವಕಪ್‌ನಲ್ಲಿ 24 ವಿಕೆಟ್ ಪಡೆದಿದ್ದ ಮೊಹಮ್ಮದ್ ಶಮಿ ‘ವರ್ಷದ ಏಕದಿನ ಬೌಲರ್’ ಗೌರವಕ್ಕೆ ಪಾತ್ರರಾದರು.

ಇಂಗ್ಲೆಂಡ್ ವಿರುದ್ಧ ಟೆಸ್ಟ್ ಸರಣಿಯಲ್ಲಿ 712 ರನ್ ಕಲೆಹಾಕಿದ್ದ ಆರಂಭ ಆಟಗಾರ ಯಶಸ್ವಿ ಜೈಸ್ವಾಲ್ ‘ಪುರುಷರ ವರ್ಷದ ಟೆಸ್ಟ್ ಬ್ಯಾಟರ್’ ಆಗಿ ಪುರಸ್ಕೃತರಾದರು. ಆರ್.ಅಶ್ವಿನ್ ಅವರು ‘ಪುರುಷರ ವರ್ಷದ ಟೆಸ್ಟ್ ಬೌಲರ್’ ಎನಿಸಿದರು.



ಮುಂಬೈನಲ್ಲಿ ಬುಧವಾರ ನಡೆದ ಸಮಾರಂಭದಲ್ಲಿ ಮಾಜಿ ಕ್ರಿಕೆಟಿಗ ಸುನಿಲ್ ಗಾವಸ್ಕರ್ (ಮಧ್ಯ) ಅವರು ಭಾರತ ಕ್ರಿಕೆಟ್ ತಂಡದ ಮಾಜಿ ಕೋಚ್ ರಾಹುಲ್ ದ್ರಾವಿಡ್ ಅವರಿಗೆ ಸಿಯೆಟ್ ‘ಜೀವಮಾನದ ಸಾಧನೆ ಪ್ರಶಸ್ತಿ’ಯನ್ನು ಪ್ರದಾನ ಮಾಡಿದರು –ಪಿಟಿಐ ಚಿತ್ರ

ಕ್ರೀಡಾ ಆಡಳಿತದಲ್ಲಿ ‘ಶ್ರೇಷ್ಠತೆ ಪುರಸ್ಕಾರ’ ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಅವರಿಗೆ ನೀಡಲಾಯಿತು.

ಕಳೆದ ಸಾಲಿನಲ್ಲಿ ತಮಿಳುನಾಡು ತಂಡವನ್ನು ರಣಜಿ ಫೈನಲ್‌ಗೆ ತಲುಪಿಸಿದ್ದ ತಂಡದ ನಾಯಕ ಆರ್.ಸಾಯಿಕಿಶೋರ್ ಅವರು ‘ವರ್ಷದ ದೇಶಿಯ ಕ್ರಿಕೆಟಿಗ’ ಗೌರವಕ್ಕೆ ಪಾತ್ರರಾದರು.

ನ್ಯೂಜಿಲೆಂಡ್‌ನ ಟಿಮ್ ಸೌಥಿ ಅವರು ‘ಪುರುಷರ ಟಿ20 ವರ್ಷದ ಬೌಲರ್’ ಪ್ರಶಸ್ತಿ ಪುರಸ್ಕೃತರಾದರು. ಈ ವಿಭಾಗದ ಶ್ರೇಷ್ಠ ಬ್ಯಾಟರ್ ಗೌರವ ಇಂಗ್ಲೆಂಡ್‌ನ ಫಿಲ್ ಸಾಲ್ಟ್ ಪಾಲಾಯಿತು.

ಸ್ಮೃತಿ ಮಂದಾನ ಅವರು ‘ವರ್ಷದ ಶ್ರೇಷ್ಠ ಮಹಿಳಾ ಬ್ಯಾಟರ್’ ಗೌರವಕ್ಕೆ ಪಾತ್ರರಾದರು.



10, 12ನೇ ತರಗತಿ: 65 ಲಕ್ಷ ವಿದ್ಯಾರ್ಥಿಗಳು ಫೇಲ್

ನವದೆಹಲಿ (ಪಿಟಿಐ): ದೇಶದಾದ್ಯಂತ ಕಳೆದ ಶೈಕ್ಷಣಿಕ ವರ್ಷ (2023) 10 ಮತ್ತು 12ನೇ ತರಗತಿ ಪರೀಕ್ಷೆಗಳಲ್ಲಿ 65 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ‘ಫೇಲ್’ ಆಗಿದ್ದಾರೆ. ಅನುತ್ತೀರ್ಣರಾದ ವಿದ್ಯಾರ್ಥಿಗಳ ಸಂಖ್ಯೆಯು ಕೇಂದ್ರೀಯ ಮಂಡಳಿಗಳಿಗಿಂತ ರಾಜ್ಯ ಪರೀಕ್ಷಾ ಮಂಡಳಿಗಳ ವ್ಯಾಪ್ತಿಯಲ್ಲಿಯೇ ಹೆಚ್ಚಿದೆ ಎಂದು ಕೇಂದ್ರ ಶಿಕ್ಷಣ ಸಚಿವಾಲಯದ (ಎಂಒಇ) ಅಧಿಕಾರಿಗಳು ತಿಳಿಸಿದ್ದಾರೆ.

ಮುಖ್ಯಾಂಶಗಳು

- 10ನೇ ತರಗತಿಯಲ್ಲಿ 33.5 ಲಕ್ಷ ವಿದ್ಯಾರ್ಥಿಗಳು ಫೇಲ್
- 12ನೇ ತರಗತಿಯ 32.4 ಲಕ್ಷ ವಿದ್ಯಾರ್ಥಿಗಳು ಅನುತ್ತೀರ್ಣ
- ಉತ್ತೀರ್ಣ ಪ್ರಮಾಣದಲ್ಲಿ ಬಾಲಕಿಯರದ್ದೇ ಮೇಲುಗೈ

ದೇಶದಲ್ಲಿ ಒಟ್ಟು 59 ಶಾಲಾ ಪರೀಕ್ಷಾ ಮಂಡಳಿಗಳಿವೆ. ಈ ಪೈಕಿ ರಾಜ್ಯ ಮಂಡಳಿಗಳು 56 ಆಗಿದ್ದರೆ, ಮೂರು ರಾಷ್ಟ್ರೀಯ ವ್ಯಾಪ್ತಿಯ ಮಂಡಳಿಗಳಾಗಿವೆ. ಖಾಸಗಿ ಮತ್ತು ಅನುದಾನಿತ ಶಾಲೆಗಳಿಗಿಂತ ಸರ್ಕಾರಿ ಶಾಲೆ/ಕಾಲೇಜುಗಳಿಂದಲೇ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿನಿಯರು 12ನೇ ತರಗತಿ ಪರೀಕ್ಷೆಗೆ ಹಾಜರಾಗಿದ್ದಾರೆ ಎನ್ನುತ್ತವೆ ಅಂಕಿ ಅಂಶಗಳು.

‘10ನೇ ತರಗತಿಯ 33.5 ಲಕ್ಷ ವಿದ್ಯಾರ್ಥಿಗಳು ಮುಂದಿನ ತರಗತಿಗೆ ಪ್ರವೇಶ ಪಡೆಯುವಲ್ಲಿ ವಿಫಲರಾಗಿದ್ದಾರೆ. ಈ ಪೈಕಿ 5.5 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ಗೈರು ಹಾಜರಾಗಿದ್ದರೆ, 28 ಲಕ್ಷ ವಿದ್ಯಾರ್ಥಿಗಳು ಫೇಲ್ ಆಗಿದ್ದಾರೆ. ಹಿರಿಯ ಮಾಧ್ಯಮಿಕ ಹಂತದಲ್ಲಿ ಒಟ್ಟು ದಾಖಲಾತಿ ಅನುಪಾತ (ಜಿಇಆರ್) ಕಡಿಮೆ ಇರಲು ಇದು ಪ್ರಮುಖ ಕಾರಣ’ ಎಂದು ಶಿಕ್ಷಣ ಸಚಿವಾಲಯದ ಅಧಿಕಾರಿಗಳು ಹೇಳುತ್ತಾರೆ.

ಅದೇ ರೀತಿ 12ನೇ ತರಗತಿಯ 32.4 ಲಕ್ಷ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪ್ರವೇಶ ಪಡೆಯುವಲ್ಲಿ ವಿಫಲರಾಗಿದ್ದಾರೆ. ಈ ಪೈಕಿ 5.2 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ಗೈರಾಗಿದ್ದರೆ, 27.2 ಲಕ್ಷ ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ.

ಕೇಂದ್ರ ಮಂಡಳಿ ಮುಂದೆ: 10ನೇ ತರಗತಿಯಲ್ಲಿ ಫೇಲಾದ ವಿದ್ಯಾರ್ಥಿಗಳ ಪ್ರಮಾಣ ಕೇಂದ್ರ ಮಂಡಳಿ ವ್ಯಾಪ್ತಿಯಲ್ಲಿ ಶೇ 6ರಷ್ಟಿದ್ದರೆ, ರಾಜ್ಯ ಮಂಡಳಿಗಳ ವ್ಯಾಪ್ತಿಯಲ್ಲಿ ಶೇ 16ರಷ್ಟಿದೆ. 12ನೇ ತರಗತಿಯಲ್ಲಿ ಕೇಂದ್ರ ಮಂಡಳಿಯಲ್ಲಿ ಫೇಲಾದ ವಿದ್ಯಾರ್ಥಿಗಳ ಪ್ರಮಾಣ ಶೇ 12ರಷ್ಟಿದ್ದರೆ, ರಾಜ್ಯ ಮಂಡಳಿಗಳ ವ್ಯಾಪ್ತಿಯಲ್ಲಿ ಶೇ 18ರಷ್ಟಿದೆ ಎಂದು ಅವರು ಮಾಹಿತಿ ನೀಡಿದರು.

ಎರಡೂ ತರಗತಿಗಳಿಗೆ ಸಂಬಂಧಿಸಿದಂತೆ ಮುಕ್ತ ಶಾಲೆಗಳ ಸಾಧನೆ ಕಳಪೆಯಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.


10ನೇ ತರಗತಿಯಲ್ಲಿ ಅನುತ್ತೀರ್ಣರಾದ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಮಧ್ಯಪ್ರದೇಶ ಮಂಡಳಿಗೆ ಸೇರಿದವರು. ನಂತರದ ಸ್ಥಾನದಲ್ಲಿ ಬಿಹಾರ ಮತ್ತು ಉತ್ತರ ಪ್ರದೇಶ ರಾಜ್ಯಗಳಿವೆ. 12ನೇ ತರಗತಿಯಲ್ಲಿ ಉತ್ತರ ಪ್ರದೇಶದಲ್ಲಿ ಅತಿ ಹೆಚ್ಚು ವಿದ್ಯಾರ್ಥಿಗಳು ಫೇಲಾಗಿದ್ದರೆ, ನಂತರದ ಸ್ಥಾನದಲ್ಲಿ ಮಧ್ಯಪ್ರದೇಶ ಇದೆ.

2022ನೇ ಸಾಲಿನ ಫಲಿತಾಂಶದೊಂದಿಗೆ ಹೋಲಿಸಿದರೆ 2023ರ ಫಲಿತಾಂಶ ಕುಸಿತವಾಗಿದೆ. ಪರೀಕ್ಷೆಗೆ ನಿಗದಿಪಡಿಸಿದ್ದ ವಿಸ್ತೃತ ಪಠ್ಯಕ್ರಮ ಇದಕ್ಕೆ ಕಾರಣ ಇರಬಹುದು ಎಂದು ಅಧಿಕಾರಿಗಳು ಹೇಳುತ್ತಾರೆ.

ಬಾಲಕಿಯರೇ ಮುಂದೆ: ಸರ್ಕಾರಿ ಶಾಲೆ ಮತ್ತು ಕಾಲೇಜುಗಳಲ್ಲಿ 10, 12ನೇ ತರಗತಿಗ ಳಲ್ಲಿ ಬಾಲಕರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಬಾಲಕಿಯರು ಪರೀಕ್ಷೆ ಬರೆದಿದ್ದಾರೆ. ಬಹುಶಃ ಪೋಷಕರು ತಮ್ಮಲ್ಲಿನ ಲಿಂಗ ತಾರತಮ್ಯ ಧೋರಣೆಯಿಂದಾಗಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಹಣ ವ್ಯಯಿಸಲು ಆಸಕ್ತಿ ಹೊಂದಿಲ್ಲ ಎಂಬುದನ್ನು ಇದು ತೋರಿಸುತ್ತದೆ. ಅದಾಗ್ಯೂ, ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಶಾಲೆಗಳಲ್ಲಿನ ಉತ್ತೀರ್ಣ ಪ್ರಮಾಣದಲ್ಲಿ ಬಾಲಕಿಯರೇ ಮೇಲುಗೈ ಸಾಧಿಸಿದ್ದಾರೆ ಎಂದು ಅವರು ವಿವರಿಸುತ್ತಾರೆ.

‘ಸಾರ್ವಜನಿಕರಿಗೂ ಪೂಜಾ ವಂಚನೆ’

ನವದೆಹಲಿ (ಪಿಟಿಐ): ವಂಚನೆ ಪ್ರಕರಣದ ಆರೋಪಿ, ಐಎಎಸ್ ಪ್ರೊಬೇಷನರಿ ಅಧಿಕಾರಿಯಾಗಿದ್ದ ಡಾ.ಪೂಜಾ ಖೇಡ್ಕರ್ ಅವರು ದೆಹಲಿ ಹೈಕೋರ್ಟ್‌ನಲ್ಲಿ ಸಲ್ಲಿಸಿರುವ ನಿರೀಕ್ಷಣಾ ಜಾಮೀನು ಅರ್ಜಿ ವಿರೋಧಿಸಿರುವ ಕೇಂದ್ರ ಲೋಕಸೇವಾ ಆಯೋಗವು (ಯುಪಿಎಸ್‌ಸಿ), ಆಯೋಗಕಷ್ಟೇ ಅಲ್ಲ, ಸಾರ್ವಜನಿಕರಿಗೂ ಪೂಜಾ ಖೇಡ್ಕರ್ ದ್ರೋಹ ಬಗೆದಿದ್ದಾರೆ ಎಂದು ಬುಧವಾರ ಹೇಳಿದೆ.


ಪೂಜಾ ಖೇಡ್ಕರ್

ಹಿಂದುಳಿದ ವರ್ಗಕ್ಕೆ ಸೇರಿದ್ದಾಗಿ ಸುಳ್ಳು ಪ್ರಮಾಣ ಪತ್ರ ಪಡೆದಿರುವುದು ಹಾಗೂ ತಾನು ಅಂಗವಿಕಲೆ ಎಂದು ನಕಲಿ ದಾಖಲೆ ಸೃಷ್ಟಿಸಿ ಐಎಎಸ್ ಹುದ್ದೆ ಗಿಟ್ಟಿಸಿರುವ ಆರೋಪವನ್ನು ಪೂಜಾ ಎದುರಿಸುತ್ತಿದ್ದಾರೆ.

ಆಕೆಗೆ ಕೋರ್ಟ್ ಯಾವುದೇ ರೀತಿಯ ಪರಿಹಾರ ನೀಡಿದರೆ, ‘ಆಳವಾದ ಬೇರು ಹೊಂದಿರುವ ಈ ವಂಚನೆ’ಯ ಪ್ರಕರಣದ ತನಿಖೆಗೆ ಅಡ್ಡಿಯಾಗುತ್ತದೆ. ಈ ಪ್ರಕರಣವು ಸಾರ್ವಜನಿಕ ನಂಬಿಕೆ ಮತ್ತು ನಾಗರಿಕ ಸೇವೆಗಳ ಪರೀಕ್ಷೆಯ ಸಮಗ್ರತೆಯ ಮೇಲೆ ವ್ಯಾಪಕ ಪರಿಣಾಮಗಳನ್ನು ಬೀರುತ್ತದೆ ಎಂಬ ಕಾರಣಕ್ಕಾಗಿ ದೆಹಲಿ ಪೊಲೀಸರು, ಪೂಜಾ ಸಲ್ಲಿಸಿರುವ ಬಂಧನ ಪೂರ್ವ ಜಾಮೀನು ಕೋರಿದ ಅರ್ಜಿಯನ್ನು ವಜಾಗೊಳಿಸುವಂತೆ ಕೋರಿದರು.

ಯುಪಿಎಸ್‌ಸಿ, ದೆಹಲಿ ಪೊಲೀಸರ ನಿಲುವಿಗೆ ಪ್ರತಿಕ್ರಿಯಿಸಲು ಖೇಡ್ಕರ್‌ಗೆ ನ್ಯಾಯಾಲಯ ಕಾಲಾವಕಾಶ ನೀಡಿದೆ.

ಚಂದ್ರನ ಸಂರಚನೆ: ಪುರಾವೆ ಒದಗಿಸಿದ ಚಂದ್ರಯಾನ–3

ಪ್ರಜಾವಾಣಿ ವಾರ್ತೆ

ನವದೆಹಲಿ: ಚಂದ್ರನ ಮೇಲ್ಮೈ ಕುದಿಯುವ ಶಿಲಾ ಬಂಡೆಗಳಿಂದ ಆವರಿಸಿದೆ ಎನ್ನುವ ದೀರ್ಘಕಾಲದ ಸಿದ್ಧಾಂತಕ್ಕೆ ತಾಜಾ ಪುರಾವೆಗಳನ್ನು ಚಂದ್ರಯಾನ–3ರ ಮೊದಲ ವೈಜ್ಞಾನಿಕ ಫಲಿತಾಂಶಗಳು ಒದಗಿಸಿವೆ.

ಕಳೆದ ವರ್ಷದ ಆಗಸ್ಟ್ –ಸೆಪ್ಟೆಂಬರ್‌ನಲ್ಲಿ ಚಂದ್ರನ ದಕ್ಷಿಣ ಧ್ರುವದ ಬಳಿ ಚಂದ್ರಯಾನ-3 ನಡೆಸಿದ ಸುದೀರ್ಘ ಕಾರ್ಯಾಚರಣೆಯ ವೇಳೆ ಪ್ರಗ್ಯಾನ್ ರೋವರ್‌ನಲ್ಲಿರುವ ಉಪಕರಣದಿಂದ ನಡೆಸಲಾದ ಚಂದ್ರನ ಮಣ್ಣಿನ 23 ಸೆಟ್ ರಾಸಾಯನಿಕ ವಿಶ್ಲೇಷಣೆಯ ಫಲಿತಾಂಶಗಳು ಈ ಪುರಾವೆ ಒದಗಿಸಿವೆ ಎಂದು ‘ನೇಚರ್’ ಪತ್ರಿಕೆಯಲ್ಲಿ ಬುಧವಾರ ಪ್ರಕಟವಾದ ಅಧ್ಯಯನ ವರದಿ ಹೇಳಿದೆ.



‘ನಾವು ಕಳುಹಿಸಿದ್ದ ಉಪಕರಣವು ಚಂದ್ರನ ಮೇಲ್ಮೈಯ ಧಾತುರೂಪದ ಸಂಯೋಜನೆಯನ್ನು ವಿಶ್ಲೇಷಿಸಿದೆ. ಚಂದ್ರನ ದಕ್ಷಿಣ ಧ್ರುವದ ಬಳಿಯ ಸಂಯೋಜನೆಯು ಏಕರೂಪವಾಗಿದೆ ಮತ್ತು ಎತ್ತರದ ಪ್ರದೇಶಗಳಿಗೆ ಹೋಲುತ್ತದೆ. ಇದು ಎಲ್‌ಎಂಒ (ಚಂದ್ರ ಶಿಲಾಪಾಕ ಸಾಗರ) ಸಿದ್ಧಾಂತವನ್ನು ದೃಢೀಕರಿಸುತ್ತದೆ’ ಎಂದು ಅಹಮದಾಬಾದ್‌ನ ಭೌತಿಕ ಸಂಶೋಧನಾ ಪ್ರಯೋಗಾಲಯದ ಭೂವಿಜ್ಞಾನಿ, ಈ ಅಧ್ಯಯನ ವರದಿಯ ಲೇಖಕರಲ್ಲಿ ಒಬ್ಬರಾದ ಸಂತೋಷ್ ವಿ. ವಡವಾಳೆ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಭಾರತೀಯ ವಿಜ್ಞಾನಿಗಳ ಈ ಅಧ್ಯಯನ ವರದಿಯು ಚಂದ್ರಯಾನ-3ರ ಲ್ಯಾಂಡಿಂಗ್‌ನ ಮೊದಲ ವಾರ್ಷಿಕೋತ್ಸವದ ಒಂದು ದಿನ ಮುಂಚಿತವಾಗಿ ಪ್ರಕಟವಾಗಿದೆ. ಚಂದ್ರಯಾನ-3 ಯಶಸ್ವಿಯಾದ ದಿನವನ್ನು ರಾಷ್ಟ್ರೀಯ ಬಾಹ್ಯಾಕಾಶ ದಿನವಾಗಿ ಆಚರಿಸಲಾಗುತ್ತದೆ.

‘ಇಸ್ರೊ ಚಂದ್ರಯಾನ 4 ಮತ್ತು 2 ಯೋಜನೆಗಳನ್ನು ಕೈಗೆತ್ತಿಕೊಂಡಿದೆ. ಚಂದ್ರಯಾನ–4 ಯೋಜನೆಯು 2027ಕ್ಕೆ ಉಡಾವಣೆ ಮಾಡಲು ನಿಗದಿಪಡಿಸಲಾಗಿದೆ. ಚಂದ್ರಯಾನ–5 ಯೋಜನೆಯು ಜಪಾನ್‌ನ ಏರೋಸ್ಪೇಸ್ ಎಕ್ಸ್‌ಪ್ಲೋರೇಷನ್ ಏಜೆನ್ಸಿಯೊಂದಿಗೆ ಕೈಗೊಂಡಿರುವ ಜಂಟಿ ಯೋಜನೆಯಾಗಿದೆ’ ಎಂದು ಇಸ್ರೊ ಅಧಿಕಾರಿಗಳು ಹೇಳಿದ್ದಾರೆ.

ಇಂದು ಲುಸಾನ್ ಡೈಮಂಡ್ ಲೀಗ್ ಕೂಟ ● ನಾಲ್ಕನೇ ಸ್ಥಾನದಲ್ಲಿರುವ ಭಾರತದ ತಾರೆ

ಸ್ಪರ್ಧಾಕಣಕ್ಕೆ ಮರಳಲಿರುವ ನೀರಜ್

ಲುಸಾನ್ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದು ಎರಡು ವಾರಗಳ ನಂತರ ಭಾರತದ ಜಾವೆಲಿನ್ ತಾರೆ ನೀರಜ್ ಚೋಪ್ರಾ ಅವರು ಗುರುವಾರ ನಡೆಯುವ ಲುಸಾನ್ ಡೈಮಂಡ್ ಲೀಗ್‌ನಲ್ಲಿ ಸ್ಪರ್ಧಾ ಕಣಕ್ಕೆ ಇಳಿಯಲಿದ್ದಾರೆ.

ಮುಂದಿನ ತಿಂಗಳು ನಡೆಯಲಿರುವ ಋತುವಿನ ಅಂತ್ಯದ ಡೈಮಂಡ್ ಲೀಗ್ ಟ್ರೋಫಿ ಮರಳಿ ಪಡೆಯುವ ಗುರಿಯನ್ನೂ ಅವರು ಹೊಂದಿದ್ದಾರೆ.

ತೊಡೆಯ ನೋವಿನ ಮಧ್ಯೆ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದ 26 ವರ್ಷ ವಯಸ್ಸಿನ ಚೋಪ್ರಾ ಆಗಸ್ಟ್ 8ರಂದು ನಡೆದ ಜಾವೆಲಿನ್ ಫೈನಲ್‌ನಲ್ಲಿ 89.45 ಮೀ. ದೂರ ಎಸೆದು ಎರಡನೇ ಸ್ಥಾನ ಪಡೆದಿದ್ದರು. ಮೂರು ವರ್ಷಗಳ ಹಿಂದೆ ಟೋಕಿಯೊ ಕ್ರೀಡೆಗಳಲ್ಲಿ ಅವರು ಚಿನ್ನ ಗೆದ್ದಿದ್ದರು.

ಲುಸಾನ್ ಡೈಮಂಡ್ ಲೀಗ್‌ನಲ್ಲಿ ಪಾಲ್ಗೊಳ್ಳುವುದಾಗಿ ಕಳೆದ ಶನಿವಾರ ಚೋಪ್ರಾ ಪ್ರಕಟಿಸಿದ್ದರು. ವರ್ಷದ ಕೊನೆಯಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗುವ ನಿರ್ಧಾರಕ್ಕೆ ಅವರು ಬಂದಿದ್ದಾರೆ.


ಭಾರತದ ನೀರಜ್ ಚೋಪ್ರಾ –ಪಿಟಿಐ ಚಿತ್ರ

2022ರಲ್ಲಿ ಡೈಮಂಡ್ ಲೀಗ್ ಚಾಂಪಿಯನ್ ಆಗಿದ್ದ ನೀರಜ್ ಚೋಪ್ರಾ, ಕಳೆದ ವರ್ಷ ಅಮೆರಿಕದಲ್ಲಿ ನಡೆದ ಲೀಗ್ ಫೈನಲ್‌ನಲ್ಲಿ ಎರಡನೇ ಸ್ಥಾನ ಪಡೆದಿದ್ದರು. ಜೆಕ್ ರಿಪಬ್ಲಿಕ್‌ನ ಯಾಕೂಬ್ ವಾಡ್ಲೆಚ್ ಚಾಂಪಿಯನ್ ಆಗಿದ್ದರು.

ಜ್ಯೂರಿಕ್‌ನಲ್ಲಿ ಸೆಪ್ಟೆಂಬರ್ 5ರಂದು ವರ್ಷದ ಕೊನೆಯ ಡೈಮಂಡ್ ಲೀಗ್ ಕೂಟ ನಡೆಯಲಿದೆ. ಇದರಲ್ಲಿ ಪುರುಷರ ಜಾವೆಲಿನ್ ಥ್ರೋ ಸ್ಪರ್ಧೆಯೂ ಇದೆ. ಪ್ರಸ್ತುತ ಚೋಪ್ರಾ ಅವರು ಏಳು ಪಾಯಿಂಟ್‌ಗಳೊಡನೆ ನಾಲ್ಕನೇ ಸ್ಥಾನದಲ್ಲಿದ್ದಾರೆ. ಮೇ 10ರಂದು ದೋಹಾ ಡೈಮಂಡ್ ಲೀಗ್‌ನಲ್ಲಿ ಅವರು ವಾಡ್ಲೆಚ್ ನಂತರ ಎರಡನೇ ಸ್ಥಾನ ಗಳಿಸಿದ್ದರು.

ಒಲಿಂಪಿಕ್ಸ್ ನಂತರ ಚೋಪ್ರಾ ಅವರು ಸ್ವಿಜರ್ಲೆಂಡ್‌ನಲ್ಲಿ ತರಬೇತಿನಿರತರಾಗಿದ್ದಾರೆ. 'ಡೈಮಂಡ್ ಲೀಗ್‌ಗೆ ಪೂರ್ವಭಾವಿಯಾಗಿ ನಾನು ಸ್ವಿಜರ್ಲೆಂಡ್‌ನಲ್ಲಿ ತರಬೇತಿಗೆ ಬಂದಿದ್ದೇನೆ. ಮುನ್ನೆಚ್ಚರಿಕೆ ವಹಿಸಿದ ಕಾರಣ ನನ್ನ ತೊಡೆಯ ನೋವು ಅದೃಷ್ಟವಶಾತ್ ಉಲ್ಬಣಗೊಳ್ಳಲಿಲ್ಲ' ಎಂದು ಅವರು ಹೇಳಿದರು.

ಪ್ಯಾರಿಸ್‌ನಲ್ಲಿ 92.97 ಮೀ. ದೂರ ಸಾಧನೆಯೊಡನೆ ಒಲಿಂಪಿಕ್ ದಾಖಲೆ ಸ್ಥಾಪಿಸಿದ್ದ ಪಾಕಿಸ್ತಾನದ ಅರ್ಷದ್ ನದೀಮ್ ಅವರನ್ನು ಬಿಟ್ಟು, ಒಲಿಂಪಿಕ್ಸ್‌ನಲ್ಲಿ ಮೊದಲ ಆರು ಸ್ಥಾನ ಗಳಿಸಿದವರು ಇಲ್ಲೂ ಕಣದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಜುಲೈ 7ರಂದು ನಡೆದ ಪ್ಯಾರಿಸ್ ಡೈಮಂಡ್ ಲೀಗ್‌ನಲ್ಲಿ ನದೀಮ್ 84.21 ಮೀ. ಎಸೆತ ದಾಖಲಿಸಿ ನಾಲ್ಕನೇ ಸ್ಥಾನ ಗಳಿಸಿದ್ದರು. ಒಲಿಂಪಿಕ್ಸ್ ಬಿಟ್ಟರೆ ನದೀಮ್ ಪಾಲ್ಗೊಂಡ ಏಕೈಕ ಡೈಮಂಡ್ ಲೀಗ್ ಕೂಟ ಅದಾಗಿತ್ತು. ಅವರು ಐದು ಪಾಯಿಂಟ್‌ಗಳೊಂದಿಗೆ ಹಾಲಿ ಆರನೇ ಸ್ಥಾನದಲ್ಲಿದ್ದಾರೆ.

ಟೋಕಿಯೊ ಕ್ರೀಡೆಗಳಲ್ಲಿ ಬೆಳ್ಳಿ ಗೆದ್ದಿದ್ದ ವಾಡ್ಲೆಚ್, ಪ್ಯಾರಿಸ್‌ನಲ್ಲಿ 88.50 ಮೀ. ಥ್ರೋದೊಡನೆ ನಾಲ್ಕನೇ ಸ್ಥಾನಕ್ಕೆ ಸರಿದಿದ್ದರು. ಇಲ್ಲಿ ಅವರು ಲಯಕ್ಕೆ ಮರಳಿ ಡೈಮಂಡ್ ಲೀಗ್ ಕಿರೀಟ ಉಳಿಸಿಕೊಳ್ಳುವ ಗುರಿಯಲ್ಲಿದ್ದಾರೆ.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ 88.54 ಮೀ. ದಾಖಲಿಸಿ ಕಂಚಿನ ಪದಕ ಗೆದ್ದಿದ್ದ ಎರಡು ಬಾರಿಯ ವಿಶ್ವ ಚಾಂಪಿಯನ್ ಆ್ಯಂಡರ್ಸನ್ ಪೀಟರ್ಸ್ (ಗ್ರೆನೆಡಾ) ಅವರು ಈ ವರ್ಷ ಸುಧಾರಿತ ಪ್ರದರ್ಶನ ನೀಡುತ್ತಿದ್ದಾರೆ. ಈಗಾಗಲೇ ಅವರು ಒಮ್ಮೆ 90 ಮೀ. ಗಡಿ ದಾಟಿದ್ದಾರೆ.

ಅಮೋಘ ಥ್ರೋದೊಡನೆ ನದೀಮ್ ಒಲಿಂಪಿಕ್ಸ್ ಚಿನ್ನ ಗೆದ್ದಿದ್ದು ಬಿಟ್ಟರೆ, ಉಳಿದಂತೆ ಚೋಪ್ರಾ ಸ್ಥಿರ ಪ್ರದರ್ಶನ ನೀಡಿದ್ದಾರೆ. ಗುರುವಾರ ಡೈಮಂಡ್ ಲೀಗ್‌ನಲ್ಲೂ ಅವರು ಪ್ರಶಸ್ತಿಗೆ ನೆಚ್ಚಿನ ಸ್ಪರ್ಧಿಯಾಗಿದ್ದಾರೆ.

ಕಳೆದ ವರ್ಷ ಬುಡಾಪೆಸ್ಟ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದ ನಂತರದಿಂದ ಅವರಿಗೆ ತೊಡೆಯ ನೋವು ಬಾಧಿಸುತ್ತಿದೆ. 'ಈ ವರ್ಷದ ಸ್ಪರ್ಧೆಗಳು ಮುಗಿದ ನಂತರ ಅಂತಿಮವಾಗಿ ಚಿಕಿತ್ಸೆಗೆ ಪಡೆಯಲಿದ್ದೇನೆ' ಎಂದು ಅವರು ಹೇಳಿದ್ದಾರೆ.

ಕುಸ್ತಿ: ರೋನಕ್‌ಗೆ ಕಂಚಿನ ಪದಕ

ಅಮ್ಮಾನ್ (ಜೋರ್ಡಾನ್), (ಪಿಟಿಐ): ಭಾರತದ ರೋನಕ್ ದಹಿಯಾ ಅವರು ವಿಶ್ವ 17 ವರ್ಷದೊಳಗಿನವರ ಕುಸ್ತಿ ಚಾಂಪಿಯನ್‌ಷಿಪ್‌ನ 110 ಕೆ.ಜಿ. ಗ್ರೀಕೊ ರೋಮನ್ ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದಾರೆ.


ರೋನಕ್ ದಹಿಯಾ

ಕಂಚಿನ ಪದಕಕ್ಕೆ ಮಂಗಳವಾರ ನಡೆದ ಸೆಣಸಾಟದಲ್ಲಿ ಅವರು ಟರ್ಕಿಯ ಇಮ್ರುಲ್ಲಾ ಕ್ಯಾಪ್ಕಾನ್ ಅವರ ಸವಾಲನ್ನು 6–1 ರಿಂದ ಸುಲಭವಾಗಿ ಬದಿಗೊತ್ತಿದರು. ರೋನಕ್ ಅವರು ವಿಶ್ವ ಕ್ರಮಾಂಕದ ತಮ್ಮ ವಯೋವರ್ಗದಲ್ಲಿ ಎರಡನೇ ರ‍್ಯಾಂಕ್ ಹೊಂದಿದ್ದಾರೆ.

ಇದಕ್ಕೆ ಮೊದಲು ಸೆಮಿಫೈನಲ್‌ನಲ್ಲಿ ರೋನಕ್ ಅವರು ಹಂಗೆರಿಯ ಝೊಲ್ಟಾನ್ ಝೀಕೊ ಅವರಿಗೆ ಮಣಿದಿದ್ದರು. ಝೀಕೊ ಅಂತಿಮವಾಗಿ ಬೆಳ್ಳಿ ಪದಕ ಗೆದ್ದರು. ಈ ವಿಭಾಗದಲ್ಲಿ ಚಿನ್ನ ಉಕ್ರೇನ್‌ನ ಇವಾನ್ ಯಂಕೋವ್‌ಸ್ಕಿ ಅವರ ಪಾಲಾಯಿತು. ಯಂಕೋವ್‌ಸ್ಕಿ ತಾಂತ್ರಿಕ ಶ್ರೇಷ್ಠತೆಯ ಆಧಾರದಲ್ಲಿ 13–4 ರಿಂದ ಝೊಲ್ಟಾನ್ ಅವರನ್ನು ಸೋಲಿಸಿದ್ದರು.

ನಾಲ್ವರು ಫೈನಲ್‌ಗೆ: ಮಹಿಳೆಯರ ವಿಭಾಗದಲ್ಲಿ ಅದಿತಿ ಕುಮಾರಿ (43 ಕೆಜಿ), ನೇಹಾ (57 ಕೆಜಿ), ಪುಲ್ಕಿತ್ (65ಕೆಜಿ) ಮತ್ತು ಮಾನ್ಸಿ ಲಾಥರ್ (73ಕೆಜಿ) ಅವರು ಪ್ರಬಲ ಪ್ರದರ್ಶನ ನೀಡಿ ಫೈನಲ್‌ಗೆ ಲಗ್ಗೆ ಹಾಕಿದರು.

24ರಿಂದ ಕುಸ್ತಿ ತೀರ್ಪುಗಾರರ ರಾಜ್ಯಮಟ್ಟದ ಕಾರ್ಯಾಗಾರ

ದಾವಣಗೆರೆ: ಕರ್ನಾಟಕ ಕುಸ್ತಿ ಸಂಘವು ಇದೇ ಮೊದಲ ಬಾರಿಗೆ ತೀರ್ಪುಗಾರರಿಗಾಗಿ ರಾಜ್ಯಮಟ್ಟದ ಕಾರ್ಯಾಗಾರ ಹಮ್ಮಿಕೊಂಡಿದೆ. ಆಗಸ್ಟ್ 24 ಮತ್ತು 25ರಂದು ನಗರದ ಆಂಜನೇಯ ಬಡಾವಣೆಯ ಒಳಾಂಗಣ ಕ್ರೀಡಾಂಗಣದಲ್ಲಿ ಕಾರ್ಯಾಗಾರ ನಡೆಯಲಿದೆ.

'ಡಬ್ಲ್ಯುಎಫ್‌ಐನ ಪ್ರತಿನಿಧಿಯೊಬ್ಬರು ಪಾಲ್ಗೊಳ್ಳುತ್ತಿದ್ದು, ತೀರ್ಪುಗಾರರಿಗೆ ಅಗತ್ಯ ಮಾರ್ಗದರ್ಶನ ನೀಡಲಿದ್ದಾರೆ. ಕನಿಷ್ಠ ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆ ಹೊಂದಿರುವ, ಜಿಲ್ಲಾ ಮಟ್ಟದ ಕ್ರೀಡಾಕೂಟಗಳಲ್ಲಿ ತೀರ್ಪುಗಾರರಾಗಿ ಕೆಲಸ ಮಾಡಿದ ಅನುಭವವುಳ್ಳ 60 ವರ್ಷದೊಳಗಿನ ಅಭ್ಯರ್ಥಿಗಳು ಪಾಲ್ಗೊಳ್ಳಬಹುದು. ₹3,000 ಪ್ರವೇಶ ಶುಲ್ಕ ಇದ್ದು, ಇಲ್ಲಿ ತೇರ್ಗಡೆ ಹೊಂದಿದವರಿಗೆ ಪ್ರಮಾಣ ಪತ್ರದೊಂದಿಗೆ ಕಿಟ್ ನೀಡಲಾಗುತ್ತದೆ. ಆ.24ರಂದು ಬೆಳಿಗ್ಗೆ 8 ರಿಂದ 10 ಗಂಟೆಯೊಳಗೆ ಒಳಾಂಗಣ ಕ್ರೀಡಾಂಗಣದಲ್ಲಿ ಹೆಸರು ನೋಂದಾಯಿಸಿಕೊಳ್ಳಬಹುದು' ಎಂದು ಕರ್ನಾಟಕ ಕುಸ್ತಿ ಸಂಘದ ಅಧ್ಯಕ್ಷ ಬಿ.ಗುಣರಂಜನ್ ಶೆಟ್ಟಿ ತಿಳಿಸಿದ್ದಾರೆ.

ಮಾಹಿತಿಗೆ ಕರ್ನಾಟಕ ಕುಸ್ತಿ ಸಂಘದ ತಾಂತ್ರಿಕ ಸಮಿತಿ ಅಧ್ಯಕ್ಷ ಕೆ. ವಿನೋದ್ ಕುಮಾರ್ (ಮೊ 8971388143) ಸಂಪರ್ಕಿಸಬಹುದು.

ಯುಟಿಟಿ ಟೂರ್ನಿ ಇಂದಿನಿಂದ

ಬೆಂಗಳೂರು: ಚೆನ್ನೈನಲ್ಲಿ ಗುರುವಾರ ಆರಂಭವಾಗುವ ಅಲ್ಟಿಮೇಟ್ ಟೇಬಲ್ ಟೆನಿಸ್ (ಯುಟಿಟಿ) ಐದನೇ ಆವೃತ್ತಿಯ ಆರಂಭಿಕ ಪಂದ್ಯದಲ್ಲಿ ಗೋವಾ ಚಾಲೆಂಜರ್ಸ್ ಮತ್ತು ಜೈಪುರ ಪೇಟ್ರಿಯಾಟ್ಸ್ ಮುಖಾಮುಖಿಯಾಗುತ್ತಿವೆ.

ಇದೇ ಮೊದಲ ಬಾರಿಗೆ ಎಂಟು ತಂಡಗಳು ಟ್ರೋಫಿಗಾಗಿ ಸೆಣಸಾಟ ನಡೆಸಲಿವೆ. ಜೈಪುರ ಪೇಟ್ರಿಯಾಟ್ಸ್ ಮತ್ತು ಅಹಮದಾಬಾದ್ ಎಸ್‌ಜಿ ಪೈಪರ್ಸ್ ಈ ಆವೃತ್ತಿಗೆ ಹೊಸ ತಂಡಗಳು. ಗೋವಾ ಚಾಲೆಂಜರ್ಸ್, ಚೆನ್ನೈ ಲಯನ್ಸ್, ದಬಾಂಗ್ ಡೆಲ್ಲಿ ಟಿಟಿಸಿ, ಯು ಮುಂಬಾ ಟಿಟಿ, ಪುಣೇರಿ ಪಲ್ಟನ್, ಬೆಂಗಳೂರು ಸ್ಮಾಷರ್ಸ್ ತಂಡಗಳು ಸ್ಪರ್ಧೆಯಲ್ಲಿವೆ. ಪ್ರತಿ ತಂಡವು ಇಬ್ಬರು ವಿದೇಶಿ ಆಟಗಾರರು ಸೇರಿದಂತೆ ಆರು ಮಂದಿಯನ್ನು ಒಳಗೊಂಡಿದೆ.

ಭಾರತದ ತಾರೆಯರಾದ ಮಣಿಕಾ ಬಾತ್ರಾ, ಶ್ರೀಜಾ ಅಕುಲಾ, ಅಚಂತಾ ಶರತ್ ಕಮಲ್, ಸತ್ಯನ್ ಜಿ, ಹರ್ಮೀತ್ ದೇಸಾಯಿ, ಮನುಷ್ ಶಾ, ಐಹಿಕಾ ಮುಖರ್ಜಿ, ಸೇರಿದಂತೆ ಹಲವು ಆಟಗಾರರು ಲೀಗ್‌ನಲ್ಲಿ ಕಣಕ್ಕೆ ಇಳಿಯುವರು.

ಕನ್ನಡಿಗರ ತೆಕ್ಕೆಗೆ ಲಯನ್ಸ್: ಚೆನ್ನೈ ಲಯನ್ಸ್ ತಂಡವನ್ನು ಈ ಬಾರಿ ಕನ್ನಡಿಗ ಆಟಗಾರರು ಖರೀದಿ ಮಾಡಿದ್ದಾರೆ. ರಾಷ್ಟ್ರೀಯ ಮಾಜಿ ಆಟಗಾರರಾದ ಜಿ.ಎಸ್.ರವಿ, ಶ್ರೀಕಾಂತ ಅಯ್ಯರ್, ವಿನಯಚಂದ್ರ ಅವರು ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿದ್ದರು. ಜವಾಹರ್, ರಾಜ್ಯ ಮಟ್ಟದಲ್ಲಿ ಆಡಿದವರು. ರಂಗರಾಜನ್ ಅವರು ತಮಿಳುನಾಡು ತಂಡಕ್ಕಾಗಿ ಆಡಿದ್ದರು.

ಬ್ಯಾಡ್ಮಿಂಟನ್: ಸತೀಶ್ ಮುನ್ನಡೆ



ಯೊಕೊಹಾಮ (ಜಪಾನ್) (ಪಿಟಿಐ): ಭಾರತದ ಸತೀಶ್ ಕುಮಾರ್ ಕರುಣಾಕರನ್ ಅವರು ಜಪಾನ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ.

23 ವರ್ಷ ವಯಸ್ಸಿನ ಸತೀಶ್ ಅವರಿಗೆ ಬುಧವಾರ 32ರ ಘಟ್ಟದ ಪಂದ್ಯದಲ್ಲಿ ವಿಶ್ವದ ಮೂರನೇ ಕ್ರಮಾಂಕದ ಡೆನ್ಮಾರ್ಕ್‌ನ ಆ್ಯಂಡರ್ಸ್ ಆಂಟೊನ್ಸೆನ್ ಮುಖಾಮುಖಿಯಾಗಿದ್ದರು. ಆದರೆ, ಪಂದ್ಯ ಆರಂಭಗೊಂಡ ಮೂರೇ ನಿಮಿಷದಲ್ಲಿ ಗಾಯದ ಕಾರಣಕ್ಕಾಗಿ ಆಂಟೊನ್ಸನ್ ಹಿಂದೆ ಸರಿದರು. ಈ ವೇಳೆ ಸತೀಶ್ 6–1 ಮುನ್ನಡೆಯಲ್ಲಿದ್ದರು.

ಜಾರ್ಜ್‌ಗೆ ನಿರಾಸೆ: ಭಾರತದ ಮತ್ತೊಬ್ಬ ಆಟಗಾರ ಕಿರಣ್ ಜಾರ್ಜ್ ಆರಂಭಿಕ ಸುತ್ತಿನಲ್ಲೇ ನಿರಾಸೆ ಅನುಭವಿಸಿದರು. ಅವರು 19-21, 14-21ರಿಂದ ಜಪಾನ್‌ನ ಕಾಂತಾ ತ್ಸುನೇಯಮಾ ಅವರಿಗೆ ಶರಣಾದರು.

ಸಂಕ್ಷಿಪ್ತ ಸುದ್ದಿ

ಶ್ರೀಜೇಶ್‌ಗೆ ₹2 ಕೋಟಿ ಬಹುಮಾನ



ತಿರುವನಂತಪುರ (ಪಿಟಿಐ): ಇತ್ತೀಚೆಗೆ ಅಂತರರಾಷ್ಟ್ರೀಯ ಹಾಕಿಗೆ ವಿದಾಯ ಹೇಳಿದ್ದ ದಿಗ್ಗಜ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಅವರಿಗೆ ಕೇರಳ ಸರ್ಕಾರ ₹2 ಕೋಟಿ ಬಹುಮಾನ ಪ್ರಕಟಿಸಿದೆ. ಸಿಎಂ ಪಿಣರಾಯಿ ವಿಜಯನ್ ನೇತೃತ್ವದಲ್ಲಿ ಬುಧವಾರ ನಡೆದ ಸಂಪುಟ ಸಭೆಯಲ್ಲಿ ಈ ಸಂಬಂಧ ನಿರ್ಧಾರ ಕೈಗೊಳ್ಳಲಾಗಿದೆ.

ಟೆಸ್ಟ್: ಪಾಕಿಸ್ತಾನ ಗೌರವಯುತ ಮೊತ್ತ

ರಾವಲ್ಪಿಂಡಿ (ಎಪಿ): ಸೈಮ್ ಅಯೂಬ್ (56;98ಎ) ಮತ್ತು ಸಾಹುದ್ ಶಕೀಲ್ (ಔಟಾಗದೇ 57; 92ಎ) ಅವರ ಅರ್ಧಶತಕಗಳ ಬಲದಿಂದ ಪಾಕಿಸ್ತಾನ ತಂಡವು ಆರಂಭಿಕ ಕುಸಿತದ ಹೊರತಾಗಿಯೂ ಬಾಂಗ್ಲಾದೇಶ ವಿರುದ್ಧದ ಮೊದಲ ಟೆಸ್ಟ್‌ನಲ್ಲಿ ಗೌರವಯುತ ಮೊತ್ತ ಕಲೆಹಾಕಿದೆ.

ಮಳೆಯಿಂದಾಗಿ ನಾಲ್ಕೂವರೆ ಗಂಟೆ ವಿಳಂಬವಾಗಿ ಆರಂಭಗೊಂಡ ಪಂದ್ಯದಲ್ಲಿ ಮೊದಲ ದಿನವಾದ ಬುಧವಾರ ಪಾಕ್ ತಂಡವು 16 ರನ್‌ಗೆ ಮೂರು ವಿಕೆಟ್‌ಗಳನ್ನು ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ನಂತರ ಆಯೂಬ್ ಮತ್ತು ಶಕೀಲ್ ಚೇತರಿಕೆ ನೀಡಿದರು. ದಿನದಾಟದ ಅಂತ್ಯಕ್ಕೆ 41 ಓವರ್‌ಗಳಲ್ಲಿ ನಾಲ್ಕು ವಿಕೆಟ್‌ಗೆ 158 ರನ್ ಗಳಿಸಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಪಾಕಿಸ್ತಾನ: 41 ಓವರ್‌ಗಳಲ್ಲಿ 4ಕ್ಕೆ 158 (ಸೈಮ್ ಅಯೂಬ್ 56, ಸಾಹುದ್ ಶಕೀಲ್ ಔಟಾಗದೇ 57; ಶೋರಿಫುಲ್ ಇಸ್ಲಾಂ 30ಕ್ಕೆ 2, ಹಸನ್ ಮೊಹಮ್ಮದ್ 33ಕ್ಕೆ 2). ಬಾಂಗ್ಲಾದೇಶದ ವಿರುದ್ಧ.

ಲಂಕಾಕ್ಕೆ ಮಿಲನ್, ಧನಂಜಯ ಆಸರೆ

ಮ್ಯಾಂಚೆಸ್ಟರ್ (ಎಪಿ): ನಾಯಕ ಧನಂಜಯ ಡಿಸಿಲ್ವ ಮತ್ತು ಮಿಲನ್ ರಥನಾಯಕೆ ಅವರ ಬ್ಯಾಟಿಂಗ್ ಬಲದಿಂದ ಶ್ರೀಲಂಕಾ ತಂಡವು ಬುಧವಾರ ಇಂಗ್ಲೆಂಡ್ ವಿರುದ್ಧದ ಮೊದಲ ಟೆಸ್ಟ್‌ನ ಮೊದಲ ಇನಿಂಗ್ಸ್‌ನಲ್ಲಿ 236 ರನ್ ಗಳಿಸಿದೆ.

ಏಳು ಓವರ್‌ಗಳಲ್ಲಿ 6 ರನ್‌ಗೆ ಮೂರು ವಿಕೆಟ್ ಕಳೆದುಕೊಂಡು ಲಂಕಾ ತಂಡ ಸಂಕಷ್ಟಕ್ಕೆ ಸಿಲುಕಿತ್ತು. ಧನಂಜಯ (74; 84ಎ) ಮತ್ತು ಮಿಲನ್ (72; 135ಎ) ಅವರು ನಂತರ ತಂಡಕ್ಕೆ ಆಸರೆಯಾದರು. ಬಳಿಕ ಬ್ಯಾಟಿಂಗ್‌ಗೆ ಇಳಿದ ಇಂಗ್ಲೆಂಡ್ 4 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 22 ರನ್ ಗಳಿಸಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಶ್ರೀಲಂಕಾ: 74 ಓವರ್‌ಗಳಲ್ಲಿ 236 (ಧನಂಜಯ ಡಿಸಿಲ್ವ 74, ಮಿಲನ್ ರಥನಾಯಕೆ 72; ಕ್ರಿಸ್ ವೋಕ್ಸ್ 32ಕ್ಕೆ3, ಶೋಯೆಬ್ ಬಶೀರ್ 55ಕ್ಕೆ 3). **ಇಂಗ್ಲೆಂಡ್:** 4 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 22.